ಸಂಪುಟ 23 ಸಂಚಿಕೆ 36-37
ಸೆಪ್ಟೆಂಬರ್ 16, 2001 ಬೆಲೆ ರೂ. 3.00

ಪೆಕ್ಷಾರರಗ


ದುಡಿವ ಜನರ ಪ್ರಾಣಮಿತ್ರ

ಆರೋಗ್ಯ ಕಾರ್ಯಪಡೆ ವರದಿ ಧೂಳು ಹಿಡಿಯುವುದೇ?



ಬರ್ಬರ ಕೃತ್ಯ


ದಲಿತ ಮಹಿಳೆಯ ಬೆತ್ತಲೆ ಮೆರವಣಿಗೆ



ವಾಜಪೇಯಿ ಕೊರಳಿಗೆ ಹಗರಣಗಳ ಸರಮಾಲೆ



ಸಂಕಷ್ಟದಲ್ಲಿ ಸಿದ್ದಿ ಕ್ರೀಡಾಪಟುಗಳು



ಭಾರತ: ಶತ್ರುವಿನೊಂದಿಗೆ ಸರಸವೇ?

ಪಕ್ಷದ 12ನೇ ಮಹಾಧಿವೇಶನ

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ: 76

ಹಿಂದಿನ ಸಂಚಿಕೆಯಲ್ಲಿ ತ್ರಿಪುರದಲ್ಲಿ 2ನೇ ಬಾರಿಗೆ ಎಡರಂಗ ಅಧಿಕಾರಕ್ಕೆ,ಕರ್ನಾಟಕ, ಆಂಧ್ರದಲ್ಲಿ ಕಾಂಗ್ರೆಸ್ ಧೂಳಿಪಟ, 18 ವರ್ಷದವರಿಗೆ ಮತದಾನದ ಹಕ್ಕು, ಕಾಂ.ಪಿ.ಸುಂದರಯ್ಯನವರ ನಿಧನ ಈ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಹಠಾತ್ತನೆ ಪಂಜಾಬ್‌ನಲ್ಲಿ ಚುನಾವಣೆ ಘೋಷಣೆ, ಅಸ್ಸಾಂ ಒಂಪದಕ್ಕೆ ಮುಂದಾದ ಕೇಂದ್ರ ಸರ್ಕಾರ, ಕಲ್ಕತ್ತದಲ್ಲಿ ಪಕ್ಷದ 12ನೇ ಮಹಾಧಿವೇಶನ, ಇಂ.ಎಂ.ಎಸ್. ಪ್ರಧಾನ ಕಾರ್ಯದರ್ಶಿಯಾಗಿ ಮುಂದುವರಿದೆ. ದಿನ ಪತ್ರಿಕೆಯಾಗಿ ಗಣಶಕ್ತಿ. 75 ಪುರಸಭೆಗಳಲ್ಲಿ 63 ರಲ್ಲಿ ಎಡರಂಗದ ಜಯಭೇರಿ

ಹಿಂದಿನ ಕಾಂಗ್ರೆಸ್ ಆಡಳಿತಗಳ ಸಂಕುಚಿತ ರಾಜಕೀಯದ ಬಲಿಪಶುವಾಗಿತ್ತು. ವಾಸ್ತವವಾಗಿ, ಎರಡು ವರ್ಷಗಳ ಹಿಂದೆಯೇ ನಾವು ಇದೇ ರೀತಿಯ ಸೂತ್ರವನ್ನು ಸಲಹೆ ಮಾಡಿದ್ದೆವು. ಉಗ್ರಗಾಮಿಗಳು ಮತ್ತು ಅಕಾಲಿಗಳ ನಡುವೆ ಸ್ಪಷ್ಟ ವ್ಯತ್ಯಾಸ ಗುರುತಿಸ ಬೇಕು ಎಂದು ಖಂಡತುಂಡವಾಗಿ ಹೇಳಿದೆವು.

ಆದರೆ ಕಾಂಗ್ರೆಸ್ ಒಪ್ಪಂದವನ್ನು ಜಾರಿ ಮಾಡುವುದರಲ್ಲಿಯೂ ಆಸಕ್ತವಾಗಿರಲಿಲ್ಲ. ಹಠಾತ್ತನೆ ಸೆಪ್ಟೆಂಬರ್ 22 ರಂದು ಪಂಜಾಬ್‌ನಲ್ಲಿ ನಡೆಸುವ ಘೋಷಣೆ ಹೊರಡಿಸಲಾಯಿತು.ಇದನ್ನು ನಾವು ಬಲವಾಗಿ ಪ್ರತಿಭಟಿಸಿದೆವು. ಇಷ್ಟೊಂದು ಅವಸರದ ಅಗತ್ಯವೇ ಇರಲಿಲ್ಲ ಎಂದು ಹೇಳಿದೆವು. ಆಗಸ್ಟ್ 17 ರಂದು ಚುನಾವಣೆಯ ಅಧಿಕೃತ ಪ್ರಕಟಣೆ ಹೊರಬಿತ್ತು. ನಾವು ವ್ಯಕ್ತಪಡಿಸಿದ ಭೀತಿ ನಿಜವಾಯಿತು. ಪ್ರಕಟಣೆ ಹೊರಬಿದ್ದ ನಾಲ್ಕು ದಿನಗಳಲ್ಲಿ ಉಗ್ರಗಾಮಿಗಳು ಸಂತ ಲೋಂಗೋವಾಲರನ್ನು ಗುಂಡಿಟ್ಟು ಕೊಂದು ಹಾಕಿದರು. ಶಾಂತಿ ಪ್ರಕ್ರಿಯೆಗೆ ಇದು ಬಹುದೊಡ್ಡ ಹೊಡೆತವಾಯಿತು.

ಆಗಸ್ಟ್ 14 ರಂದು ಅಸ್ಸಾಂ ಒಪ್ಪಂದ ರೂಪಿಸಲು ಕೇಂದ್ರ ಮುಂದಾಯಿತು. ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ (ಆಸು) ಅಧ್ಯಕ್ಷ ಪ್ರಫುಲ್ಲ ಕುಮಾರ ಮಹಂತ, ಪ್ರಧಾನ ಕಾರ್ಯದರ್ಶಿ ಭೃಗು ಭೂಕಾಸ್ ಮತ್ತು ಅಸ್ಸಾಂ ಗಣ ಸಂಗ್ರಾಮ ಪರಿಷತ್ ಮುಖಂಡ ವಿರಾಜ್ ಶರ್ಮ ಒಪ್ಪಂದಕ್ಕೆ ಸಹಿ ಹಾಕಿದರು. ಅಂದಿನ ಗೃಹ ಕಾರ್ಯದರ್ಶಿ ಆರ್.ಡಿ.ಪ್ರಧಾನ್ ಕೇಂದ್ರ ಸರ್ಕಾರವನ್ನು ಹಾಗೂ ಅಸ್ಸಾಂನ ಮುಖ್ಯ ಕಾರ್ಯದರ್ಶಿ ಪಿ.ಪಿ. ತ್ರಿವೇದಿ, ಅಸ್ಸಾಂ ಸರಕಾರವನ್ನು ಪ್ರತಿನಿಧಿಸಿ ಅಸ್ಸಾಂ ಒಡಂಬಡಿಕೆಗೆ ಸಹಿ ಹಾಕಿದ್ದರು. ನಾವು ಈ ಒಪ್ಪಂದವನ್ನು ವಿರೋಧಿಸಿದೆವು. 'ವಿದೇಶಿಯರನ್ನು ಗುರುತಿಸಲು 1966 ನ್ನು ಕಟ್‌ಆಫ್ ವರ್ಷವಾಗಿ ನಿಗದಿಪಡಿಸಿದ್ದರ ಮೂಲಾಧಾರವನ್ನು ನಾವು ವಿರೋಧಿಸಿದೆವು. 1971 ನ್ನು ನಿಗದಿಪಡಿಸುವುದು ಸರಿ ಎಂದು ನಾವು ಭಾವಿಸಿದೆವು. ಇದು ಕೇಂದ್ರ ಸರ್ಕಾರದ ಶರಣಾಗತಿಯಾಗಿತ್ತು.

ದೇಶದ ಈಶಾನ್ಯ ಭಾಗವನ್ನು ಮುಖ್ಯವಾಹಿನಿ



ಇ.ಎಂ.ಎಸ್., ಜ್ಯೋತಿಬಸು ಮತ್ತು ಸರೋಜ್ ಮುಖರ್ಜಿ

ಯಿಂದ ಬೇರ್ಪಡಿಸುವ ನೀಲನಕ್ಷೆಯನ್ನು ರೂಪಿಸಿದ್ದ ಅಮೆರಿಕ ಸಾಮ್ರಾಜ್ಯಶಾಹಿಗಳ ತಾಳಕ್ಕೆ ತಕ್ಕಂತೆ ಅಸ್ಸಾಂ ಚಳುವಳಿಕಾರರು ಕುಣಿಯುತ್ತಿದ್ದರು. ಏನಿದ್ದರೂ ನಂತರದ ದಿನಗಳಲ್ಲಿ ಅನೇಕ ಚಳುವಳಿಕಾರರಿಗೆ ತಮ್ಮ ಈ ತಪ್ಪಿನ ಅರಿವಾಯಿತು.

ಒಡಂಬಡಿಕೆಯಲ್ಲಿರುವ ರಾಜಕೀಯ ಶರಣಾಗತಿಯ ವಿರುದ್ಧ ನಾವು ಹೋರಾಡಿದರೂ ನಾವೆಲ್ಲರೂ ರಾಜ್ಯದ ಆರ್ಥಿಕ ಉನ್ನತಿಯ ಪರವಾಗಿ ಇದ್ದೆವು. ಪ್ರಾದೇಶಿಕ ಅಸಮನತೆಗಳೇ ಪ್ರತ್ಯೇಕತಾವಾದಿ ಪ್ರವೃತ್ತಿ ಬೆಳೆಯುವುದಕ್ಕೆ ಕಾರಣ ಎನ್ನುವುದು ಸ್ಪಷ್ಟವಾಗಿತ್ತು.

1985 ಆಗಸ್ಟ್‌ನಲ್ಲಿ ಕೇಂದ್ರ ಸರಕಾರ 'ಶಿಕ್ಷಣದ ಸವಾಲು : ಒಂದು ನೀತಿ ಮುನ್ನೋಟ' ಎಂಬ ದಸ್ತಾವೇಜನ್ನು ಪ್ರಕಟಿಸಿತು. ಅದರಲ್ಲಿನ ಅಂಶಗಳು ತುಂಬಾ ಅಪಾಯಕಾರಿ ಆಗಿದ್ದವು. ಶಿಕ್ಷಣದ ಬೆಳವಣಿಗೆ ಮತ್ತು ಅದರ ವಿಸ್ತರಣೆಯ ಅವಕಾಶಗಳನ್ನು ಬುಡಮೇಲು ಮಾಡುವುದು ಮುಖ್ಯ ಉದ್ದೇಶವಾಗಿತ್ತು.

ಶ್ರೀಮಂತರ ಅನುಕೂಲ-ಅಗತ್ಯಗಳಿಗಷ್ಟೇ ರಾಜೀವ್ ಸರಕಾರ ಸ್ಪಂದಿಸಿತು. ಈಗ ಶಿಕ್ಷಣ ಕ್ಷೇತ್ರದಲ್ಲಿ ಕೂಡ ಗೊಂದಲ ಹುಟ್ಟಿಸುವುದು ಕಾಂಗ್ರೆಸ್‌ನ ಉದ್ದೇಶವಾಗಿತ್ತು. ಈ ಪ್ರಯತ್ನಗಳನ್ನು ನಾವು ಬಲವಾಗಿ ಪ್ರತಿರೋಧಿಸಿದೆವು.

12ನೇ ಮಹಾಧಿವೇಶನ

1985 ಡಿಸೆಂಬರ್‌ನಲ್ಲಿ ಕಲ್ಕತ್ತದಲ್ಲಿ ಸಿಪಿಐ(ಎಂ) 12ನೇ ಮಹಾಧಿವೇ ನಡೆಯಿತು. ಕಲ್ಕತ್ತದಲ್ಲಿ ಇದು ಪಕ್ಷದ ಎರಡನೇ ಮಹಾಧಿವೇಶನ. ಹಿಂದೆ 7ನೇ ಮಹಾಧಿವೇಶನ 1964 ರಲ್ಲಿ ಇಲ್ಲೇ ನಡೆದಿತ್ತು. ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಎರಡನೇ ಮಹಾಧಿವೇಶನಕ್ಕೆ (1948) ಕಲ್ಕತ್ತವೇ ಆತಿಥ್ಯ ನೀಡಿತ್ತು. 12ನೇ ಮಹಾಧಿವೇಶನದ ವೇಳೆಗೆ ಪಶ್ಚಿಮ ಬಂಗಾಳದಲ್ಲಿ ಪಕ್ಷದ ಸದಸ್ಯತ್ವ 1,36,980 ಆಗಿತ್ತು.

1985 ನವೆಂಬರ್ 29 ರಿಂದ ಡಿಸೆಂಬರ್ 2 ರವರೆಗೆ ನಡೆದ ಪಕ್ಷದ 15ನೇ ರಾಜ್ಯ ಸಮ್ಮೇಳನವನ್ನು ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ಉದ್ಘಾಟಿಸಿದರು. ಎಂ.ಬಸವಪೊನ್ನಯ್ಯ ಮತ್ತು ಬಿ.ಟಿ.ರಣದಿವೆ ಭಾಷಣ ಮಾಡಿದರು. ರಂಗ ಸರ್ಕಾರದ ಕಾರ್ಯನಿರ್ವಹಣೆಯನ್ನು ನಾವು ವಿಮರ್ಶಿಸಿದೆವು. ಚಳುವಳಿಯನ್ನು ಮುಂದಕ್ಕೊಯ್ಯಲು ಸಂಕಲ್ಪ ಮಾಡಿದೆವು.

ಕಳೆದ ನಾಲ್ಕು ವರ್ಷಗಳಲ್ಲಿ ರಾಜ್ಯದಲ್ಲಿ 17 ಮುಷ್ಕರಗಳನ್ನು ಯಶಸ್ವಿಯಾಗಿ ಸಂಘಟಿಸಲಾಗಿತ್ತು. ರಂಗದ 246 ಕಾರ್ಯಕರ್ತರು ವರ್ಗ ಶತ್ರುಗಳಿಗೆ ಬಲಿಯಾಗಿದ್ದರು. ಆದರೆ, ನಮ್ಮ ನಿರೀಕ್ಷೆಗಳಿಗೆ ತಕ್ಕಂತೆ ಪಕ್ಷ ಬೆಳೆದಿಲ್ಲ ಎನ್ನುವುದನ್ನು ನಾವು ಗುರುತಿಸಿದೆವು. ಆತ್ಮತೃಪ್ತಿಗೆ ಅವಕಾಶ ಖಂಡಿತ ಇರಲಿಲ್ಲ.

ಅದುವರೆಗೆ ಸಂಜೆ ಪತ್ರಿಕೆಯಾಗಿದ್ದ 'ಗಣಶಕ್ತಿ' 1986 ಮೇ 1 ರಿಂದ ಬೆಳಗಿನ ದೈನಿಕವಾಯಿತು. ರಾಜ್ಯ ಸಮ್ಮೇಳನದ ನಿರ್ಧಾರದ ಫಲಶೃತಿಯಿಂದ, ಸಂಪಾದಕರಾಗಿ ಸರೋಜ್‌ಮುಖರ್ಜಿ ಮುಂದುವರಿದರು.

12ನೇ ಮಹಾ ಧಿವೇಶನ ಡಿಸೆಂಬರ್ 25 ರಂದು ಆರಂಭವಾಗಿ 30 ರವರೆಗೆ ಮುಂದುವರಿಯಿತು. ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಅನೇಕ ಕಾರ್ಯಕ್ರಮಗಳನ್ನು ವ್ಯವಸ್ಥೆಗೊಳಿಸಲಾಗಿತ್ತು. ಮಹಾಧಿವೇಶನ ನಡೆದ ಸಾಂಸ್ಕೃತಿಕ ಸ್ಟೇಡಿಯಂನಲ್ಲಿ ನಾಲ್ಕು ವೇದಿಕೆಗಳನ್ನು ರಚಿಸಲಾಗಿತ್ತು. ಸಿನಿಮಾ ಪ್ರದರ್ಶನ, ಪುಸ್ತಕ ಮೇಳ, ವಿಚಾರಗೋಷ್ಠಿ ಮತ್ತು ಚರ್ಚೆಗಳು ಏರ್ಪಾಡಾದವು.ಕೊನೆದಿನ ಬ್ರಿಗೇಡ್ ಪರೇಡ್ ಮೈದಾನದಲ್ಲಿ ಬೃಹತ್ ರ್‍ಯಾಲಿ ನಡೆಯಿತು. 1200 ಸ್ವಯಂಸೇವಕರು ಮಹಾಧಿವೇಶನ ಸುಗಮವಾಗಿ ನಡೆಯುವಂತೆ ನೋಡಿಕೊಂಡರು.

1972 ರಲ್ಲಿ ಇದೇ ಸ್ಥಳದಲ್ಲಿ ಎಐಸಿಸಿ ಅಧಿವೇಶನ ನಡೆದದ್ದು ನೆನಪಿದೆ. ಮಿಲಿಯಾಧಿಪತಿಗಳು ಅಧಿವೇಶನವನ್ನು ಸಂಘಟಿಸಿದ್ದರು. ಊಟ-ತಿಂಡಿ ವ್ಯವಸ್ಥೆಯನ್ನು ನಗರದ ದೊಡ್ಡ ಹೋಟೆಲ್‌ಗಳಿಗೆ ವಹಿಸಲಾಗಿತ್ತು. ಪತ್ರಿಕೆಗಳ ಮಾಲಿಕರು ಪ್ರಚಾರದ ಅಬ್ಬರವನ್ನೇ ಸೃಷ್ಟಿಸಿದ್ದರು. ನಮ್ಮ ಸಮ್ಮೇಳನ ಸ್ವರೂಪದಲ್ಲೇ ತುಂಬಾ ಭಿನ್ನವಾಗಿತ್ತು. ಜನರು ತಾವಾಗಿಯೇ ಬಂದಿದ್ದರು.

ಡಿಸೆಂಬರ್ 25 ರಂದು ಹರಿಕಿಷನ್ ಸಿಂಗ್ ಸುರ್ಜಿತ್ ಕೆಂಪು ಧ್ವಜವನ್ನು ಏರಿಸುವುದರೊಂದಿಗೆ ಮಹಾಧಿವೇಶನ ಆರಂಭವಾಯಿತು. ಸುರ್ಜಿತ್, ಸುಶೀಲಾ ಗೋಪಾಲನ್, ಇ.ಯು.ರಮ್ಮಮ್ ಮತ್ತು ದಶರಥ ದೇವ್ ಅವರುಳ್ಳ ಅಧ್ಯಕ್ಷ ಮಂಡಳಿ ರಚನೆಗೊಂಡಿತು. ಇಎಂಎಸ್‌ರ ಸಲಹೆಯ ಮೇರೆಗೆ ಪಾಲಿಟ್‌ಬ್ಯೂರೋ ಸದಸ್ಯರುಳ್ಳ ಸಂಚಾಲನ ಸಮಿತಿಯನ್ನು ರಚಿಸಲಾಯಿತು. ನಾನು ಸ್ವಾಗತ ಭಾಷಣ ಮಾಡಿದೆ. ಇಎಂಎಸ್ ಉದ್ಘಾಟನೆ ಭಾಷಣ ಮಾಡಿದರು.

ಎರಡನೇ ದಿನದ ಎರಡನೇ ಅಧಿವೇಶನದಲ್ಲಿ ಕಾಂ. ರಣದಿವೆ ರಾಜಕೀಯ ಗೊತ್ತುವಳಿಯನ್ನು ಮಂಡಿಸಿದರು. 1978 ರ 10ನೇ ಮಹಾಧಿವೇಶನದಲ್ಲಿ ಪ್ರಸ್ತಾವಿಸಲಾದ ಘೋಷಣೆಯಾದ ಎಡ ಏಕತೆಯ ಮೇಲೆ ಗೊತ್ತುವಳಿ ಒತ್ತು ನೀಡಿತ್ತು. ರಾಜೀವಗಾಂಧಿಯವರ ಆರ್ಥಿಕ ನೀತಿಗಳಲ್ಲಿ ಅಡಕವಾಗಿರುವ ಅಪಾಯಗಳ ಬಗ್ಗ ಜನತೆಗೆ ಎಚ್ಚರಿಕೆ ನೀಡಿದ ಗೊತ್ತುವಳಿಯನ್ನು ಸಣ್ಣಪುಟ್ಟ ತಿದ್ದುಪಡಿಯೊಂದಿಗೆ ಮೂರನೇ ದಿನ ಅಂಗೀಕರಿಸಲಾಯಿತು. ಗೊತ್ತುವಳಿ ಮೇಲೆ 28 ಪ್ರತಿನಿಧಿಗಳು ಮಾತನಾಡಿದರು. ಅದನ್ನು ಸಮಾಪನಗೊಳಿಸುವ ಭಾಷಣದಲ್ಲಿ ಕಾಂ. ರಣದಿವೆ ಜನರನ್ನು ಸಂಘಟಿಸಲು ಮೂರು ವಿಚಾರಗಳನ್ನು ಗುರುತಿಸಿದರು.

. ಸರ್ವಾಧಿಕಾರದ ವಿರುದ್ಧ ಹೋರಾಡಲು ಒಂದು ವಿಶಾಲ ವೇದಿಕೆ;

. ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳ ಕ್ರೋಢೀಕರಣ ಹಾಗೂ

ಪಕ್ಷದ ಬೆಳವಣಿಗೆ ಮತ್ತು ಪ್ರಗತಿಯನ್ನು ತೀವ್ರಗೊಳಿಸಲು ಪ್ರಜ್ಞಾಪೂರ್ವಕ ಪ್ರಯತ್ನ.

ಕೊನೆಯ ದಿನ ರಾಜಕೀಯ - ಸಂಘಟನಾತ್ಮಕ ವರದಿಯನ್ನು ಅಂಗೀಕರಿಸಲಾಯಿತು. ಇದರ ಮೇಲೆ 37 ಪ್ರತಿನಿಧಿಗಳು ಚರ್ಚೆ ಮಡಿದರು. ಕಾಮ್ರೇಡ್ ಬಸವಪೊನ್ನಯ್ಯ ಚರ್ಚೆಯನ್ನು ಸಮಾಪನಗೊಳಿಸಿದರು. ಎಡರಂಗ ಅನುಸರಿಸುತ್ತಿದ್ದ ಕೈಗಾರಿಕೆ ನೀತಿಗೆ ಈ ವರದಿ ಸಮ್ಮತಿಯ ಮುದ್ರೆ ಒತ್ತಿತು.

ಗುತ್ತೇದಾರಿ ಕಂಪನಿಗಳಿಗೆ ಪ್ರೋತ್ಸಾಹ ನೀಡುವ ಕೇಂದ್ರ ಸರ್ಕಾರದ ನೀತಿಯನ್ನು ವರದಿ ಕಟುವಾಗಿ ತರಾಟೆಗೆ ತೆಗೆದುಕೊಂಡಿತು. ಇಂಥ 'ಜನವಿರೋಧಿ' ನೀತಿಗಳ ವಿರುದ್ಧ ಹೋರಾಡುವ ಪಕ್ಷದ ಸಂಕಲ್ಪವನ್ನು ಪ್ರಕಟಪಡಿಸಿತು.

ವಿಶೇಷವಾಗಿ ಆರ್ಥಿಕ ರಂಗದಲ್ಲಿ ಎಡರಂಗ ಸರಕಾರದ ವಿರುದ್ಧ ಕೇಂದ್ರ ಸರ್ಕಾರ ತೋರುತ್ತಿರುವ ಪಕ್ಷಪಾತವನ್ನು ವರದಿ ಎತ್ತಿ ತೋರಿಸಿತು.

'ಇದು ಬಂಡವಾಳಶಾಹಿ ಮತ್ತು ಸಮಾಜವಾದ ನಡುವಿನ ಹೋರಾಟ ಮಾತ್ರವೇ ಅಲ್ಲ. ಜನತೆಯ ವಿಶ್ವಾಸದ ಮಟ್ಟವನ್ನು ಹೇಗೆ ಹೆಚ್ಚಿಸುವುದು ಹಾಗೂ ಕಾಂಗ್ರೆಸ್‌ನ ದುಷ್ಟ ಯೋಜನೆಗಳನ್ನು ಹೇಗೆ ವಿರೋಧಿಸುವುದು ಎಂಬುದು ಮುಖ್ಯ ವಿಚಾರ' ಎಂದು ವರದಿ ಹೇಳಿತು.

ಪ.ಬಂಗಾಳ ಮತ್ತು ತ್ರಿಪುರಾದ ಎಡರಂಗ ಸರ್ಕಾರಗಳ ಕಾರ್ಯವನ್ನು ಶ್ಲಾಘಿಸುವ ಒಂದು ಗೊತ್ತುವಳಿಯನ್ನು ಕೂಡ ಮಹಾಧಿವೇಶನ ಅಂಗೀಕರಿಸಿತು. ಈ ಎರಡು ರಾಜ್ಯಗಳು 'ವರ್ಗ ಸಂಘರ್ಷ ಮತ್ತು ಅದರ ಫಲಶೃತಿಯ ಸಂಕೇತಗಳು' ಎಂದು ಗೊತ್ತುವಳಿ ವರ್ಣಿಸಿತು. ಅನೇಕ ವಿದೇಶಿ ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಪಾಲ್ಗೊಂಡಿದ್ದರು. ಅನೇಕ ದೇಶಗಳಿಂದ ಸಂದೇಶಗಳು ಹರಿದುಬಂದವು.

70 ಸದಸ್ಯರ ಕೇಂದ್ರ ಸಮಿತಿಯನ್ನು ರಚಿಸಲು ನಿರ್ಧರಿಸಲಾಯಿತು. 66 ಮಂದಿಯನ್ನು ಅಲ್ಲೇ ಚುನಾಯಿಸಲಾಯಿತು. ಈ ಪೈಕಿ 31 ಸಂಗಾತಿಗಳು ಹೊಸಬರಾಗಿದ್ದರು. ಪಿ.ರಾಮಮೂರ್ತಿ, ಕೃಷ್ಣಪಾದ ಘೋಷ್ ಮತ್ತುರಾಮರಾಜ್ ಚಂದುಬಾಯಿ ಪಟೇಲ್ ಆರೋಗ್ಯ ಕಾರಣದ ಮೇಲೆ ನಿವೃತ್ತರಾದರು. ಇಎಂಎಸ್ ಪ್ರಧಾನ ಕಾರ್ಯದರ್ಶಿಯಾಗಿ ಮುಂದುವರಿದರು. ಹತ್ತು ಸದಸ್ಯರ ಹೊಸ ಪಾಲಿಟ್‌ಬ್ಯೂರೊವನ್ನು ರಚಿಸಲಾಯಿತು. ಸರೋಜ್ ಮುಖರ್ಜಿ ಮತ್ತು ವಿ.ಎಸ್. ಅಚ್ಯುತಾನಂದನ್ ಪಿ.ಬಿ.ಗೆ ಹೊಸಬರಾಗಿದ್ದರು.

ಜೂನ್ 15 ರಂದು 75 ಪುರಸಭೆಗಳಿಗೆ ಚುನಾವಣೆ ನಡೆಯಿತು. ಎಡರಂಗ 63 ರಲ್ಲಿ ಜಯಭೇರಿ ಬಾರಿಸಿತು. 10 ರಲ್ಲಿ ಕಾಂಗ್ರೆಸ್ ಗೆದ್ದಿತು. ಎರಡರಲ್ಲಿ ಪಕ್ಷೇತರರ ಕೈ ಮೇಲಾಯಿತು. ಜನತೆ ರಂಗದೊಂದಿಗೇ ಉಳಿಯಿತು.

684 ಕೋಟಿ ರೂಪಾಯಿ ಜಾದೂ!

ರಾಜೀವಗಾಂಧಿ ಸರಕಾರ ನಮ್ಮ ವಿರುದ್ಧ ಕತ್ತಿ ಮಸೆಯುವುದನ್ನು ಮುಂದುವರಿಸಿತು. 1986 ಮಾರ್ಚ್‌ನಲ್ಲಿ ಪ.ಬಂಗಾಳ ವಿಧಾನಸಭೆಗೆ 10ನೇ ಚುನಾವಣೆ ನಡೆಯಿತು. ಆರು ತಿಂಗಳ ಮೊದಲೇ ನಾವು ರಂಗದ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಿದೆವು. ರಾಜೀವ ಗಾಂಧಿ ನಮ್ಮ ರಾಜ್ಯಕ್ಕೆ ಭೇಟಿ ನೀಡುವ ಒಂದು ದಿನ ಮುಂಚೆ ಈ ಪಟ್ಟಿ ಬಿಡುಗಡೆಗೊಂಡಿತು. ರಾಜೀವ್ ತಮ್ಮ ಪ್ರವಾಸವನ್ನು ಚುನಾವಣೆ ಪ್ರಚಾರಕ್ಕೆ ಬಳಸಿಕೊಂಡರು. ಅವರು ಮಾರ್ಚ್‌ನಲ್ಲಿ ಒಮ್ಮೆ ಕಲ್ಕತ್ತಕ್ಕೆ ಬಂದಿದ್ದರು. ಮುಂದಿನ ಸಲದ ಭೇಟಿಯಲ್ಲಿ ನಮ್ಮ ಜತೆ ಕೆಲವು ವಿಚಾರಗಳನ್ನು ಚರ್ಚಿಸುವುದಾಗಿ ಅವರು ಹೇಳಿದ್ದರು. ರಾಜ್ಯದ ಬಾಕಿಯಿರುವ 61 ಯೋಜನೆಗಳಿಗೆ ಸಂಬಂಧಿಸಿದ ಎಲ್ಲ ಕಾಗದ ಪತ್ರಗಳನ್ನು ನಾವು ದಿಲ್ಲಿಗೆ ಕಳಿಸಿದೆವು.

(ಮುಂದುವರಿಯುವುದು)

ಇದೊಂದು ಗಮನಾರ್ಹವಾದ ವರದಿ. ಅನೇಕ ಜನ ವಿಭಾಗಗಳು, ಸಂಘ ಸಂಸ್ಥೆಗಳೊಂದಿಗೆ ವಿವರವಾಗಿ ಸಮಾಲೋಚಿಸಿ, ಅಪಾರ ಸರತ್ತು ನಡೆಸಿ, 'ಆರೋಗ್ಯ ಪಡೆ' ವರದಿಯನ್ನು ತಯಾರಿಸಿದೆ. ಸರ್ಕಾರಕ್ಕೂ ಸಲ್ಲಿಸಿದೆ. ನಮ್ಮ ಮುಂದಿರುವ ಪ್ರಶ್ನೆ ಕೃಷ್ಣರ ಸರ್ಕಾರ ಇದನ್ನು ಪಾಲಿಸುವುದೇ? ಅಥವಾ ವಿಶ್ವಬ್ಯಾಂಕ್‌ನ ಅಣತಿಯ ಉದಾರೀಕರಣದ ಆರಾಧಕರಾಗಿರುವ ಅವರು ಜನರ ಆರೋಗ್ಯದ ಹಕ್ಕು ಕಿತ್ತುಕೊಂಡು, ಎಲ್ಲವನ್ನು ಖಾಸಗಿಯವರಿಗೆ ಒಪ್ಪಿಸಿ, ಆ ಮೂಲಕ 'ಕಲ್ಯಾಣ' ಸಾಧಿಸಲು ಈ ವರದಿಯನ್ನು ಮೂಲೆಗೆಸೆದು ಕೈ ತೊಳೆದುಕೊಳ್ಳುವುದೇ? ಎಂಬುದು. ಹೌದು ಈ ವರದಿಯಲ್ಲಿ ಏನಿದೆ ಎಂಬುದರತ್ತ ಜನ ವೈದ್ಯರಾಗಿರುವ ಡಾ|| ಪ್ರಕಾಶ್ ಸಿ.ರಾವ್ ಗಮನ ಸೆಳೆದಿದ್ದಾರೆ.

ಕರ್ನಾಟಕದ ಆರೋಗ್ಯ ಕ್ಷೇತ್ರದ ಇತಿಹಾಸದಲ್ಲೊಂದು ಮೈಲಿಗಲ್ಲು

ಆರೋಗ್ಯ ಕಾರ್ಯಪಡೆ ವರದಿ

ಆರೋಗ್ಯ ಕ್ಷೇತ್ರದ ಬೆಳವಣಿಗೆ ಅಪಾರವಾಗಿದೆ. ಆದರೂ ರಾಷ್ಟ್ರ ಹಾಗೂ ರಾಜ್ಯಮಟ್ಟದಲ್ಲಿ ಆರೋಗ್ಯ ಪರಿಸ್ಥಿತಿ ಚಿಂತಾಜನಕವಾಗಿದೆ. ಆದ್ದರಿಂದಲೇ ರಾಷ್ಟ್ರಮಟ್ಟದಲ್ಲಿ ಜನಾರೋಗ್ಯ ಸುಧಾರಿಸುವ ಹಲವಾರು ಪ್ರಯತ್ನಗಳಾಗಿವೆ. ಕರ್ನಾಟಕದಲ್ಲಿ ಜನಾರೋಗ್ಯ ಸುಧಾರಿಸಲು ಆರೋಗ್ಯ ಇಲಾಖೆ



ಆರೋಗ್ಯ ಕಾರ್ಯಪಡೆಯನ್ನು ನೇಮಕಮಾಡಿರುವುದು ಸಮಂಜಸವಾಗಿದೆ. ಈ ಕಾರ್ಯಪಡೆಯ ಅಧ್ಯಕ್ಷರನ್ನಾಗಿ ಡಾ. ಸುದರ್ಶನ್ ಅವರನ್ನು ನೇಮಕ ಮಾಡಲಾಗಿದೆ. ಡಾ. ಸುದರ್ಶನ್ ಸೋಲಿಗ ಗಿರಿಜನರ ಮಧ್ಯೆ ಕೆಲಸ ಮಾಡುತ್ತ ಜನಾರೋಗ್ಯ ಸುಧಾರಣೆಗೆ ಅಂತರ್ರಾಷ್ಟ್ರೀಯ ಪ್ರಖ್ಯಾತಿ ಪಡೆದವರು. 13 ಸದಸ್ಯರ ಕಾರ್ಯಪಡೆ ತಯಾರಿಸಿದ 544 ಪುಟದ ಅಂತಿಮ ವರದಿಯನ್ನು ಸರಕಾರ ಏಪ್ರಿಲ್ 2001 ರಲ್ಲಿ ಬಿಡುಗಡೆ ಮಾಡಿದೆ. ಈ ವರದಿಯನ್ನು ಸರಕಾರ ಅನುಷ್ಠಾನಕ್ಕೆ ತರಬೇಕಾಗಿದೆ.

ಈ ಕಾರ್ಯಪಡೆಗೆ ಜನಾರೋಗ್ಯ, ಜನಸಂಖ್ಯಾ ನಿಯಂತ್ರಣ, ಆರೋಗ್ಯ ಹಾಗೂ ಕುಟುಂಬ ಇಲಾಖೆಯ ಕಾರ್ಯವೈಖರಿ, ವೈದ್ಯಕೀಯ, ವೈದ್ಯಕೀಯ ತರಬೇತಿ ಹಾಗೂ ಜನಾರೋಗ್ಯಕ್ಕೆ ಶಿಕ್ಷಣ ಮುಂತಾದವುಗಳನ್ನು ಸುಧಾರಿಸಲು ಶಿಫಾರಸ್ಸುಗಳನ್ನು ನೀಡಲು ಕೇಳಿಕೊಳ್ಳಲಾಗಿತ್ತು. ಇದನ್ನು ಆರೋಗ್ಯ ಇಲಾಖೆಯೇ ಮಾಡಬಹುದಾಗಿತ್ತು. ಆರೋಗ್ಯ ಇಲಾಖೆ ಮಾಡಲಾಗದ ಈ ಕೆಲಸವನ್ನು ಆರೋಗ್ಯ ಕಾರ್ಯಪಡೆ ಮಾಡಲು ಕೇಳಿಕೊಂಡ ಅಧಿಸೂಚನೆ ಅಸಮಂಜಸವಾಗಿದ್ದರೂ, ಆರೋಗ್ಯ ಕಾರ್ಯಪಡೆ ಆರೋಗ್ಯ ಸುಧಾರಣೆಗೆ ಅಗತ್ಯವಿರುವ ಎಲ್ಲ ಮುಖ್ಯ ಅಂಶಗಳನ್ನು ಅಧ್ಯಯನ ಮಾಡಿರುವುದು ಶ್ಲಾಘನೀಯ.

ಈ ವರದಿಗೆ **'ಆರೋಗ್ಯದಲ್ಲಿ ಸಮಾನತೆ, ಗುಣಮಟ್ಟ ಹಾಗೂ ಸಮಗ್ರತೆಯೆಡೆಗೆ ಕರ್ನಾಟಕ'** ಎಂದು ಹೆಸರಿಡಲಾಗಿದೆ. ಈ ವರದಿ ಪ್ರಾಥಮಿಕ ಆರೋಗ್ಯಪಾಲನೆ ಹಾಗೂ ಜನಾರೋಗ್ಯದ ಬಗ್ಗೆ ಗಮನಹರಿಸಿದೆ. ಯಾವುದೇ ಸಮಾಜದ ಆರೋಗ್ಯ ಸುಧಾರಿಸಲು ಈ ಅಂಶಗಳು ಅತ್ಯವಶ್ಯಕ.

ಈ ವರದಿ ತಯಾರಿಸುವ ಮುನ್ನ ಹಲವಾರು ವೈದ್ಯಕೀಯ ವ್ಯಕ್ತಿಗಳು, ಆರೋಗ್ಯದ ಬಗ್ಗೆ ಕಾಳಜಿ ಇರುವ ಜನಸಾಮಾನ್ಯರು ರಾಜಕೀಯ ಪಕ್ಷಗಳು, ಪತ್ರಕರ್ತರು, ಮುಂತಾದವರನ್ನು ಸಂಪರ್ಕಿಸಿ ಅವರ ಅನಿಸಿಕೆಗಳನ್ನು ದಾಖಲಿಸಲಾಯಿತು. ಖಾಸಗಿ, ಸರಕಾರಿ ವ್ಯಕ್ತಿಗಳು ಹಾಗೂ ಸಂಸ್ಥೆಗಳನ್ನು ಸಂಪರ್ಕಿಸಿ ಆರೋಗ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳನ್ನು ತಿಳಿದುಕೊಳ್ಳಲಾಯಿತು. ಎಲ್ಲಾ ವಿಷಯಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಿದ ನಂತರ, ವರದಿಯನ್ನು ತೋರಿಸಲಾಯಿತು.

ಏನಿದೇ ಈ ವರದಿಯಲ್ಲಿ?

ಜನಾರೋಗ್ಯ ಸುಧಾರಿಸಲು ಪ್ರಾಥಮಿಕ ಆರೋಗ್ಯ ಪಾಲನೆಯ ವ್ಯವಸ್ಥೆಯನ್ನು ಸುಧಾರಿಸಬೇಕಾಗುತ್ತದೆ. ಪ್ರಾಥಮಿಕ ಆರೋಗ್ಯ ವ್ಯವಸ್ಥೆಯೊಂದಿಗೆ ದ್ವಿತೀಯ ಹಾಗೂ ತೃತೀಯ ವ್ಯವಸ್ಥೆಗಳನ್ನು ಸುಧಾರಿಸಲು ಶಿಫಾರಸ್ಸುಗಳನ್ನು ನೀಡಲಾಗಿದೆ. ಕುಡಿಯುವ ನೀರು, ಪೌಷ್ಠಿಕ ಆಹಾರ, ನೈರ್ಮಲ್ಯ, ಆರೋಗ್ಯವನ್ನು ತೀರ್ಮಾನಿಸಲು ಪ್ರಮುಖ ಪಾತ್ರವಹಿಸುತ್ತವೆ. ಈ ವಿಷಯಗಳನ್ನು ಕೂಲಂಕುಶವಾಗಿ ಚರ್ಚಿಸಲಾಗಿದೆ. ಆರೋಗ್ಯ ಸುಧಾರಿಸಲು ಆರೋಗ್ಯ ಸೇವೆಗಳು ಅಗತ್ಯ. ಪ್ರಾಥಮಿಕ ಆರೋಗ್ಯ ಕೇಂದ್ರಗಳು, ತುರ್ತು ಸ್ಥಿತಿಯಲ್ಲಿನ ಆರೋಗ್ಯ ಸೇವೆಗಳು, ರೋಗ ನಿರ್ಮೂಲನ ಸೇವೆಗಳು, ರಕ್ತ ನಿಧಿ ಕೇಂದ್ರ ಹಾಗೂ ರಕ್ತ ವರ್ಗಾವಣೆಯ ಸೇವೆಗಳು ಮುಂತಾದವುಗಳ ಚರ್ಚೆ ವರದಿಯಲ್ಲಿದೆ. ಆರೋಗ್ಯ ಹಾಗೂ ಕುಟುಂಬ ಇಲಾಖೆಯ ಕಾರ್ಯ ವೈಖರಿಯನ್ನು ಸುಧಾರಿಸಲು, ಅನೇಕ ಸಲಹೆಗಳನ್ನು ಶಿಫಾರಸು ಮಾಡಲಾಗಿದೆ. ಆರೋಗ್ಯ ಪಾಲನೆಯಲ್ಲಿ ಗುಣಮಟ್ಟ ಹಾಗೂ ಸರ್ವ ಸಮಾನತೆಗೆ ಒತ್ತಾಯಿಸಲಾಗಿದೆ. ಆಧುನಿಕ ಚಿಕಿತ್ಸಾಪದ್ಧತಿಯಲ್ಲದೆ, ಭಾರತೀಯ ಔಷಧಿ ಪದ್ಧತಿಯಾದ ಆಯುರ್ವೇದ, ಸಿದ್ಧ ಯುನಾನಿ ಹಾಗೂ ಹೋಮಿಯೋಪತಿ ಮುಂತಾದ ಪದ್ಧತಿಗಳ ಬಗ್ಗೆ ಸಾಕಷ್ಟು ಮಾಹಿತಿ ಕೊಡಲಾಗಿದೆ.

ಈ ಪದ್ಧತಿಗಳನ್ನು ನಮ್ಮ ಜನರು ಉಪಯೋಗಿಸುತ್ತಾ ಬಂದಿದ್ದಾರೆ. ಹಾಗೆ ದಿನನಿತ್ಯದ ಕಾಯಿಲೆಗಳಿಗೆ ಕಡಿಮೆ ಬೆಲೆಯ ಸುಲಭ ವಿಧಾನದ ಚಿಕಿತ್ಸಾ ಪದ್ಧತಿಗಳಾಗಿವೆ. **ಈ ಚಿಕಿತ್ಸಾ ಕೇಂದ್ರಗಳು ಸರಕಾರೀ ಕ್ಷೇತ್ರದಲ್ಲಿದ್ದರೂ, ಜನಸಾಮಾನ್ಯರಿಗೆ ಅದರ ಮಾಹಿತಿ ಇಲ್ಲ.**

ತಾಯಿ ಮಗು, ತಾರುಣ್ಯ ದಲ್ಲಿರುವವರು, ಅಂಗವಿಕಲರು, ವೃದ್ಧರು ಗುಡ್ಡಗಾಡು ಜನರು, ಮುಂತಾದವರ ಆರೋಗ್ಯ ಸುಧಾರಣೆ ಬಗ್ಗೆ ವಿಶೇಷ ಗಮನದ ಅಗತ್ಯವಿದೆ. ಈ ವರದಿ ಆ ಪ್ರಯತ್ನವನ್ನು ಮಾಡಿದೆ.

ಅನಾರೋಗ್ಯದ ಕೆಲವು ಪ್ರಮುಖ ಕಾರಣಗಳಾದ ತಂಬಾಕು, ಮಧ್ಯಪಾನ ಉಪಯೋಗದ ಹತೋಟಿಯನ್ನು ತರುವುದು ಕಷ್ಟಸಾಧ್ಯದ ವಿಷಯ. ಈ ವರದಿಯಲ್ಲಿ ಅದರ ವಿವರವಾದ ಪ್ರಸ್ತಾಪವಿದೆ.

ನಮ್ಮ ರಾಜ್ಯದಲ್ಲಿ ಕಂಡುಬರುವ ಅನೇಕ ರೋಗಗಳನ್ನು ಹತೋಟಿಗೆ ತರಲು ಇರುವ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಪರಿಶೀಲಿಸಲಾಗಿದೆ. ಅದರಲ್ಲೂ ಮಾನಸಿಕ ಆರೋಗ್ಯ, ದಂತ ಆರೋಗ್ಯದ ಬಗ್ಗೆ ವಿಶೇಷ ಗಮನ ಹರಿಸಲಾಗಿದೆ. ಜೀವನ ಶೈಲಿಗೆ ಸಂಬಂಧಿಸಿದ, ಸಂಕ್ರಾಮಿಕವಲ್ಲದ ರೋಗಗಳ ಹತೋಟಿಗೆ ಸಹಿತ, ಶಿಫಾರಸ್ಸು ಮಾಡಲಾಗಿದೆ. ಈ ವಿವರಗಳು ವೈದ್ಯರಿಗೆ ಹಾಗೂ ವೈದ್ಯಕೀಯ ವಿದ್ಯಾರ್ಥಿಗಳಿಗೆ ಪ್ರಯೋಜನವಾಗಬಹುದು.,

ಇಂದು ನಮ್ಮ ರಾಜ್ಯದಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯಕೀಯ ತರಬೇತಿ ಕೇಂದ್ರಗಳಿದ್ದರೂ ಆ ತರಬೇತಿ ಕೇಂದ್ರಗಳ ಗುಣಮಟ್ಟ ಕಳಪೆ ಮಟ್ಟದಲ್ಲಿಯೇ ಇರುವುದು ಕಂಡುಬರುತ್ತಿದೆ. ವೈದ್ಯಕೀಯ ಶಿಕ್ಷಣ ಹಾಗೂ ಪ್ರಾಮೆಡಿಕ್ಸ್‌ನ (Paramedics) ತರಬೇತಿಗಾಗಿ ಇರುವ ವ್ಯವಸ್ಥೆಗಳಲ್ಲಿ ಸಾಕಷ್ಟು ಬದಲಾವಣೆಗಳನ್ನು ಸೂಚಿಸಲಾಗಿದೆ. ಹೊಸ ವೈದ್ಯಕೀಯ ಕಾಲೇಜುಗಳನ್ನು ನಿಷೇಧಿಸಲಾಗಿದೆ. ಆರೋಗ್ಯ ಸುಧಾರಿಸಲು ನೇರ ಚಿಕಿತ್ಸೆಗೆ ಸಂಬಂಧಿಸಿದ ವಿಷಯಗಳಾದ ಆರೋಗ್ಯ ಸೇವೆಯ ವ್ಯವಸ್ಥೆ, ಆರೋಗ್ಯ ಸಂಶೋಧನೆ, ಹಣಕಾಸು ಪಂಚಾಯತ್ ರಾಜ್, ಆರೋಗ್ಯ ಆಡಳಿತ ಮಾಹಿತಿ ವ್ಯವಸ್ಥೆ, ಆರೋಗ್ಯ ನೀತಿ (Ethics) ಜನರನ್ನು ಸಶಕ್ತಗೊಳಿಸುವುದು, ಆರೋಗ್ಯಕ್ಕಾಗಿ ಅಂತರ ಕ್ಷೇತ್ರೀಯ ಚಟುವಟಿಕೆಗಳು ಮುಂತಾದವುಗಳನ್ನು ಚರ್ಚಿಸಲಾಗಿದೆ.

ಜನಾರೋಗ್ಯ

ಜನಾರೋಗ್ಯ ಸುಧಾರಣೆಯಲ್ಲಿ ಸಾಂಕ್ರಾಮಿಕ ರೋಗಗಳ ಹತೋಟಿ, ರೋಗ ನಿರೀಕ್ಷೆ (Diseas Surviellance) ಸಾಂಕ್ರಾಮಿಕವಲ್ಲದ ರೋಗಗಳ ಹೆಚ್ಚಳದ ಬಗ್ಗೆ ಗಮನಹರಿಸಲು ಒತ್ತಾಯಿಸಲಾಗಿದೆ. ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಸಮಂಜಸ ಜನಪರ ಆರೋಗ್ಯ, ಔಷಧಿ ಹಾಗೂ ಜನಸಂಖ್ಯಾ ನೀತಿ ಇಲ್ಲದಿರುವುದು ಶೋಚನೀಯ ಇಂದಿನ ಆರೋಗ್ಯ ಪರಿಸ್ಥಿತಿ ಸುಧಾರಿಸದೇ ಇರಲು ಇದೊಂದು ಕಾರಣ. ಇದಲ್ಲದೇ ಆರೋಗ್ಯ ಸಾಧನೆ ಸೂತ್ರಗಳಲ್ಲಿ ಅನೇಕ ಬದಲಾವಣೆಗಳು ಕಂಡು ಬಂದುದರಿಂದ (Paradigm Shift) ಆ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಆರೋಗ್ಯ, ಔಷಧಿ ಹಾಗೂ ಜನಸಂಖ್ಯಾ ನೀತಿಯ ಕರಡನ್ನು ತಯಾರಿಸಿ, ವರದಿಯಲ್ಲಿ ಸೇರಿಸಲಾಗಿದೆ.

ಜನಾರೋಗ್ಯ ಸುಧಾರಣೆ ಕೇವಲ ಸರಕಾರದಿಂದ ಮಾತ್ರ ಸಾಧ್ಯವಾಗದು, ಜನರ ಪಾತ್ರವೂ ಹಿರಿದಾಗಿದೆ. ಇಂದಿನ ಆರೋಗ್ಯ ಪರಿಸ್ಥಿತಿಗೆ ಜನರ ಸಹಭಾಗಿತ್ವ ಇಲ್ಲದಿರುವುದು ಒಂದು ಮುಖ್ಯ ಕಾರಣವೆಂದು ತಿಳಿದುಬಂದಿದೆ. ಜನರಿಗೆ ಆರೋಗ್ಯದ ಬಗ್ಗೆ ಅರಿವು ಮೂಡಿಸಬೇಕು, ಆರೋಗ್ಯ ಸೌಲಭ್ಯಗಳು(ಕೇವಲ ಸೇವೆಗಳಲ್ಲ) ಎಲ್ಲರಿಗೂ ದೊರಕಬೇಕು, ಆರೋಗ್ಯ ಸೌಲಭ್ಯ ಲಭ್ಯವಾಗದಿದ್ದಲ್ಲಿ ಜನರು ಮುಂದೆ ಬಂದು ಸರಕಾರವನ್ನು ಕೇಳುವ ಹಕ್ಕು ದೊರಕಬೇಕು ಎಂಬ ಧ್ಯೇಯದಿಂದ ಪ್ರಾರಂಭವಾದ ಆಂದೋಲನವೇ 'ಜನಾರೋಗ್ಯ ಆಂದೋಲನ'. ಈ ಆಂದೋಲನ [illegible] ರಾಜ್ಯಗಳಲ್ಲಿ ಹಾಗೂ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಅನೇಕ ದೇಶಗಳಲ್ಲಿ ಪ್ರಾರಂಭವಾಗಿದೆ. ಈ ಬೆಳವಣಿಗೆ ಜನಾರೋಗ್ಯ ಸುಧಾರಣೆಗೆ ಪೂರಕವಾಗಿದೆ. ಈ ವಿಷಯವನ್ನು ಈ ವರದಿ ಚರ್ಚಿಸಿದೆ.

ನೈಜ ಚಿತ್ರಣ

ಆರೋಗ್ಯ ಕ್ಷೇತ್ರದಲ್ಲಿ ಬದಲಾವಣೆಗಳನ್ನು ಅಪೇಕ್ಷಿಸುವುದು ಸರಿಯೇ? ಏನು ಬದಲಾವಣೆಗಳನ್ನು ಅಪೇಕ್ಷಿಸಬಹುದು ಎಂಬುದನ್ನು ಸ್ಪಷ್ಟಪಡಿಸಬೇಕಾಗುತ್ತದೆ. 2020 ರ ಹೊತ್ತಿಗೆ ಆರೋಗ್ಯ ಕ್ಷೇತ್ರದಲ್ಲಿ ಏನು ಬದಲಾವಣೆಗಳನ್ನು ಅಪೇಕ್ಷಿಸಬಹುದು ಎಂಬುದನ್ನು 2020 ರ ದೃಷ್ಟಿ (Vision 2000) ಯಲ್ಲಿ ಸ್ಪಷ್ಟಪಡಿಸಿದ್ದಾರೆ. ಇದು ಒಂದು ನೈಜ ಚಿತ್ರಣವಾಗಿದೆಯೆಂದು ಹೇಳಲುಬಹುದು.

ಆರೋಗ್ಯ ಸಾಧನೆಯ ಲೋಪದೋಷಗಳನ್ನು ಗಮನಿಸಿ ಸಮಿತಿ ಶಿಫಾರಸ್ಸುಗಳನ್ನು ನೀಡಿದೆ. **ಈ ಶಿಫಾರಸ್ಸುಗಳನ್ನು ಸರಕಾರ ಅನುಷ್ಠಾನಕ್ಕೆ ತರುತ್ತದೆಯೇ, ಕಾದು ನೋಡಬೇಕಾಗಿದೆ.**

ಒಟ್ಟಾರೆ ಹೇಳುವುದಾದರೆ, ಈ ವರದಿ ಜನಾರೋಗ್ಯ ಸುಧಾರಣೆಯ ಇತಿಹಾಸದಲ್ಲಿ ಒಂದು ಮೈಲುಗಲ್ಲೆಂದೇ ಹೇಳಬಹುದು.ಈ ವರದಿಯ ಸರಳ ತಾಂತ್ರಿಕವಲ್ಲದ ಭಾಷೆಯಲ್ಲಿ ನಿರೂಪಣೆಗೊಂಡಿದೆ. ಈ ವರದಿಯಲ್ಲಿರುವ ಅಂಕಿಸಂಖ್ಯೆಗಳು ಬಹಳ ಉಪಯುಕ್ತವಾಗಲಿವೆ. ಈ ವರದಿ ವೈದ್ಯರಿಗೆ ಆಡಳಿತಗಾರರಿಗೆ ಪತ್ರಕರ್ತರಿಗೆ, ಆರೋಗ್ಯ ಕಾರ್ಯಕರ್ತರಿಗೆ, ವಿದ್ಯಾರ್ಥಿಗಳಿಗೆ ಪ್ರಯೋಜನವಾಗಬಲ್ಲದು. ಈ ವರದಿ ಆಧಾರದ ಮೇಲೆ ಇತರೇ ರಾಜ್ಯಗಳು ತಮ್ಮ ಆರೋಗ್ಯ ಪರಿಸ್ಥಿತಿಯನ್ನು ಸುಧಾರಿಸುವ ಪ್ರಯತ್ನಮಾಡಬಹುದು. ಈ ವರದಿಯ ಶಿಫಾರಸ್ಸುಗಳನ್ನು ಸರಕಾರ ಅನುಷ್ಠಾನಕ್ಕೆ ತರುವುದೇ ಎಂಬುದನ್ನು ಸಮಿತಿ ಮೇಲ್ವಿಚಾರಣೆ ನಡೆಸುತ್ತದೆ. ಆದರೆ ಈ ವರದಿ ಅನುಷ್ಠಾನಕ್ಕೆ ಬರಬೇಕಾದರೆ, ಆಸಕ್ತ ಜನರ ಗುಂಪುಗಳಲ್ಲಿ ಚರ್ಚೆಯಾಗಬೇಕು, ಈ ಚರ್ಚೆ ಸರಕಾರದ ಮೇಲೆ ಒತ್ತಡ ತರಲು ಸಹಾಯಕವಾಗಬಹುದು. ಈ ವರದಿಯ ಶಿಫಾರಸ್ಸುಗಳನ್ನು ಸರಕಾರ ಈಗಾಗಲೇ ಜಾರಿಗೊಳಿಸಲು ಪ್ರಾರಂಭಿಸಿದೆ ಎಂದು ಕಾರ್ಯಪಡೆ ಸಮಿತಿ ಅಭಿಪ್ರಾಯಪಟ್ಟಿದೆ. ಅವುಗಳೇನು? ಹಾಗೂ ಸಂಪೂರ್ಣ ಜಾರಿಯಾಗುವುದೇ ಕಾದು ನೋಡಬೇಕಾಗಿದೆ.

ಗಮನಹರಿಸಬೇಕಾದ ಹಲವು ವಿಷಯಗಳು

ಈ ವರದಿ ಪ್ರಗತಿಪರವಾಗಿರುವುದರಲ್ಲಿ ಯಾವ ಅನುಮಾನವೂ ಇಲ್ಲ. ಆದರೂ ಈ ವರದಿ ಆರೋಗ್ಯ ಕ್ಷೇತ್ರದ ಮೇಲೆ ಪ್ರಭಾವ ಬೀರುವ ಇನ್ನೂ ಅನೇಕ ವಿಷಯಗಳತ್ತ ಗಮನ ಹರಿಸಬೇಕಾಗಿತ್ತು. ಅವುಗಳು ಯಾವುವೆಂದರೆ-

ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವ

ಪ್ರಾಥಮಿಕ ಆರೋಗ್ಯ ಪಾಲನೆ ಹಾಗೂ ಜನಾರೋಗ್ಯದ ನೀತಿಗಳು ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣ ನೀತಿಯಿಂದ ಪ್ರಭಾವಿತವಾಗಿವೆ. ಇದರ ಪರಿಣಾಮದಿಂದ ನಮ್ಮ ಆರೋಗ್ಯ ನೀತಿಯು ವಿಶ್ವಬ್ಯಾಂಕ್ ಹಾಗೂ ಐಎಂಎಫ್ ಆದೇಶದಂತೆ ಬದಲಾಗುತ್ತಿದೆ - ಇದು ಬಡಜನರ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಅವರಿಗೆ ಆರೋಗ್ಯ ಸೌಲಭ್ಯ ನಿರಾಕರಿಸಿದಂತಾಗುತ್ತದೆ.

ಆರೋಗ್ಯ ವ್ಯವಸ್ಥೆ ಈಗಾಗಲೇ ಖಾಸಗೀ ಕ್ಷೇತ್ರದ ಹಿಡಿತದಲ್ಲಿದೆ. ಸರಕಾರೀ ಕ್ಷೇತ್ರ ಆರೋಗ್ಯ ಕ್ಷೇತ್ರವನ್ನು ನಿಯಂತ್ರಿಸುವ ಜವಾಬ್ದಾರಿಯಿಂದ ನುಸುಳಿಕೊಳ್ಳುತ್ತಿದೆ. ಇದರಿಂದ ಆರೋಗ್ಯ ಸಾಧಿಸಲು ಜನರು ಖಾಸಗಿ ಕ್ಷೇತ್ರವನ್ನು ಅವಲಂಬಿಸಬೇಕಾಗುತ್ತದೆ. ಈ ತರಹದ ಹಿಡಿತವಿಲ್ಲದ ಖಾಸಗೀಕರಣ ಯಾವುದೇ ಸಮಾಜಕ್ಕೆ ಅಪಾಯ ಉಂಟು ಮಾಡಬಹುದಾಗಿದೆ. ವರದಿಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಆದರೂ ಈ ಹೊಸ ನೀತಿಯನ್ನು ಎದುರಿಸಲು ಹೊಸ ತಂತ್ರದ ಅಗತ್ಯವಿರುವುದನ್ನು ಗಮನಿಸಲಾಗಿಲ್ಲ. ಖಾಸಗೀಕರಣವನ್ನು ನಿಯಂತ್ರಿಸುತ್ತ ಕ್ರಮೇಣ ನಿರ್ಮೂಲನ ಮಾಡುವುದು ಅಗತ್ಯ.

ಬಡಜನರ ಆರೋಗ್ಯ: ನಮ್ಮ ದೇಶದ ಹೆಚ್ಚಿನ

ಪುಟ 9 ಕ್ಕೆ

ಬಿಜೆಪಿ ಸರ್ಕಾರದ ನಾಲ್ಕು ಪ್ರಮುಖ ಜನ-ದ್ರೋಹಿ ನೀತಿಗಳಿಂದ ಜನ ಸಂಕಷ್ಟಕ್ಕೆ ಒಳಗಾಗಿದ್ದಾರೆ. ದೇಶ ದಿನೇ ದಿನೇ ತೀವ್ರ ಬಿಕ್ಕಟ್ಟಿನತ್ತ ಸರಿಯುತ್ತಿದೆ. ಜನ-ವಿರೋಧಿ ಆರ್ಥಿಕ ನೀತಿ, ಸಾಮ್ರಾಜ್ಯಶಾಹಿ-ಪರ ನೀತಿ, ಹಗರಣಗಳ ಮಹಾಪೂರ, ಶಿಕ್ಷಣದಲ್ಲಿ ಕೇಸರೀಕರಣದ ನೀತಿ - ಇವೇ ಆ ನಾಲ್ಕು ಜನದ್ರೋಹಿ ನೀತಿಗಳು. ಈ ನಾಲ್ಕು ನೀತಿಗಳನ್ನು ಬದಲಿಸಿ ಇಲ್ಲವೇ ತೊಲಗಿ ಎಂದು ಒತ್ತಾಯಿಸುವ ಸೆಪ್ಟೆಂಬರ್ 7 ರಿಂದ 21 ರವರೆಗೆ ದೇಶವ್ಯಾಪಿ ಜನಾಂದೋಲನ ನಡೆಯಲಿದೆ. ಆ ಸಂದರ್ಭದಲ್ಲಿ ಬಿಜೆಪಿ ಸಾಮ್ರಾಜ್ಯಶಾಹಿ-ಪರ ನೀತಿಯ ಆ 'ದಾಖಲೆ'ಗಳ ಬಗ್ಗೆ ಲೇಖನ. ಆನೀತಿ ದೇಶಕ್ಕೆ ಎಷ್ಟು ಅಪಾಯಕರ ಮತ್ತು ಜನ ವಿರೋಧಿ ಎಂದು ತೋರಿಸುವ ಪ್ರಯತ್ನ

ಅಮೆರಿಕಕ್ಕೆ ಅಡಿಯಾಳಾಗುವ ವಿದೇಶಾಂಗ ನೀತಿಗಳು

ಶರತ್‌ಚಂದ್ರ

ಬಿಜೆಪಿ ಸರ್ಕಾರ 'ಸ್ವದೇಶಿ' ಮಂತ್ರ ಜಪಿಸುತ್ತಲೇ ಸ್ವತಂತ್ರ ಭಾರತದ ಚರಿತ್ರೆಯಲ್ಲೇ ಅತ್ಯಂತ ಸಾಮ್ರಾಜ್ಯಶಾಹಿ ಪರ 'ಅಮೆರಿಕ ಪರ' ಸರ್ಕಾರವಾಗಿದೆ. ವಿದೇಶಿಯರ ತಾಳಕ್ಕೆ ಪೂರ್ತಿಯಾಗಿ ಕುಣಿಯುತ್ತಿರುವ ಮೊದಲ ಸರ್ಕಾರ ಇದು. ಒಂದು ಕಡೆ 'ಸ್ವದೇಶಿ' ಮಂತ್ರ ಜಪಿಸುತ್ತಲೇ ಇನ್ನೊಂದು ಕಡೆ ಜಗತ್ತಿನ ಏಕಮಾತ್ರ 'ಸೂಪರ್ ಪವರ್' ಆಗಿರುವ ಅಮೆರಿಕ ಮತ್ತು ಅದರ ಮಿತ್ರರ 'ಜೂನಿಯರ್ ಪಾರ್ಟನರ್' ಆಗುವುದು ಭಾರತಕ್ಕೆ ಕ್ಷೇಮಕರ ಎಂಬ ನೀತಿಯನ್ನು ಹೇಳುತ್ತಾ, ಅನುಸರಿಸುತ್ತಾ ಬಂದಿದೆ.

ಈ ನೀತಿಯ ಭಾಗವಾಗಿ ದೇಶಕ್ಕೆ ಅತ್ಯಂತ ಅಪಾಯಕಾರಿಯಾದ ಮತ್ತು ಜನರ ಹಿತಾಸಕ್ತಿಗಳಿಗೆ ವಿರುದ್ಧವಾದ ನಾಲ್ಕು ಪ್ರಮುಖ ಕಾರ್ಯಾಚರಣೆಗಳನ್ನು ಕೈಗೊಂಡಿದೆ.

1. ವಾಜಪೇಯಿ ಸರ್ಕಾರ 1998 ರಿಂದ ಈಚೆಗೆ ಅಮೆರಿಕನ್ ಬಹುರಾಷ್ಟ್ರೀಯ ಕಂಪನಿಗಳಿಗೆ ಅತ್ಯಂತ ಹೆಚ್ಚಿನ ಸವಲತ್ತುಗಳನ್ನು ಒದಗಿಸಿದ್ದು ಮಾತ್ರವಲ್ಲದೆ, ಅವುಗಳಿಗೆ ಶರಣಾಗಿ ಅವುಗಳ ಅನುಕೂಲಕ್ಕಾಗಿ ಎಲ್ಲಾ ನೀತಿಗಳನ್ನು ತಿರುಚಲಾಗುತ್ತಿದೆ.

2. ಐದು ದಶಕಗಳ ಕಾಲ ಭಾರತದ ರಾಷ್ಟ್ರೀಯ ಹಿತಾಸಕ್ತಿ ಕಾಪಾಡುವುದರಲ್ಲಿ ಅತ್ಯಂತ ಸಫಲವಾಗಿರುವ ಮತ್ತು ನಿಜವಾದ ರಾಷ್ಟ್ರೀಯ ಸಹಮತ ಇರುವ ಅಲಿಪ್ತ ವಿದೇಶಾಂಗ ನೀತಿಯನ್ನು ಪೂರ್ಣವಾಗಿ ಬದಲಿಸಿ, ಅಮೆರಿಕದ ಜಾಗತಿಕ ನೀತಿಗೆ ಶರಣಾಗಿರುವ ನೀತಿಯನ್ನು ಅನುಸರಿಸಲಾಗಿದೆ.

3. ಭಾರತ ಮತ್ತು ಪಾಕಿಸ್ತಾನದ ಸಂಬಂಧಗಳ ನಡುವೆ ಅಮೆರಿಕದ ಮಧ್ಯವರ್ತಿ ಪಾತ್ರವನ್ನು ಸ್ವೀಕರಿಸಿದೆ. ಆ ಮೂಲಕ ಭಾರತ-ಪಾಕಿಸ್ತಾನ ದ್ವಿಪಕ್ಷೀಯ ಸಂಬಂಧಗಳಲ್ಲಿ ಯಾವುದೇ ದೇಶ ಮೂಗು ತೂರಿಸುವುದರ ಮೂಲಕ ನಮ್ಮ ಸಾರ್ವಭೌಮತ್ವಕ್ಕೆ ಭಂಗ ಸಹಿಸುವುದಿಲ್ಲ ಎಂಬ ಭಾರತದ ಆರು ದಶಕಗಳ ದಿಟ್ಟ ನೀತಿಗೆ ತಿಲಾಂಜಲಿಯಿತ್ತಿದೆ.

4. ಅಮೆರಿಕದ ಜತೆ ಗಹನವಾದ ಮಿಲಿಟರಿ ಸಹಕಾರದ ಸಂಬಂಧವನ್ನು ಆರಂಭಿಸಿದೆ. ಈ ಸಂಬಂಧಗಳನ್ನು ಅಮೆರಿಕ ತನ್ನ ಹಿತಾಸಕ್ತಿ ಕಾಪಾಡಲು ರೂಪಿಸುತ್ತಿದೆ. ಇದರ ಅಂಗವಾಗಿ ಅಮೆರಿಕದ ಬಾಹ್ಯ ಮತ್ತು ಆಂತರಿಕ ಗೂಢಾಚಾರ ಸಂಸ್ಥೆಗಳು ನಮ್ಮ ಆಂತರಿಕ ವಿಷಯಗಳಲ್ಲಿ ಮೂಗು ತೂರಿಸಲು ವಾಜಪೇಯಿ ಸರ್ಕಾರ ಅವಕಾಶ ಮಾಡಿಕೊಡುತ್ತಿದೆ.

ಈ ನಾಲ್ಕು ಕ್ಷೇತ್ರಗಳಲ್ಲಿ ವಾಜಪೇಯಿ ಸರ್ಕಾರ 'ದಾಖಲೆ'ಗಳು ಮತ್ತು 'ವಿಕ್ರಮ'ಗಳು ಅಪಾಯವನ್ನು ವಿವರವಾಗಿ ಅರಿತುಕೊಳ್ಳುವುದು ಮಹತ್ವದ ಕೆಲಸ.

ವಾಜಪೇಯಿ ಸರ್ಕಾರ ಆರ್ಥಿಕ ಸಾರ್ವಭೌಮತೆಯನ್ನು ಒತ್ತೆ ಇಟ್ಟು ದೇಶವನ್ನು ವಸಾಹತುಶಾಹಿ ಅವಧಿಯಂತಹ ಆರ್ಥಿಕ ಶೋಷಣೆಗೆ ಒಡ್ಡುತ್ತಿದೆ.

ಅಲಿಪ್ತ ವಿದೇಶಾಂಗ ನೀತಿಗೆ ತಿಲಾಂಜಲಿ

50 ರ ದಶಕದಲ್ಲಿ ಸಾಮ್ರಾಜ್ಯಶಾಹಿ- ವಿರೋಧಿ ಹೋರಾಟದ ಮುಂದಿನ ಹೆಜ್ಜೆಯಾಗಿ ಆರಂಭವಾದ ಅಲಿಪ್ತ ಚಳುವಳಿಗೆ ಭಾರತ ನಾಯಕನಾಗಿತ್ತು. ಅಲಿಪ್ತ ವಿದೇಶಾಂಗ ನೀತಿ ಎಂದರೆ ಸಾಮ್ರಾಜ್ಯಶಾಹಿ ಒತ್ತಡಕ್ಕೆ ಸೊಪ್ಪು ಹಾಕದ ಸ್ವತಂತ್ರ ನೀತಿಯಾಗಿತ್ತು. ಭಾರತ ಮಾತ್ರವಲ್ಲ, ಇಡೀ ಮೂರನೇ ಜಗತ್ತಿನ ದೇಶಗಳ ಹಿತಾಸಕ್ತಿಗೆ ಅನುಗುಣವಾದ ನೀತಿಯಾಗಿತ್ತು ಅಲಿಪ್ತ ನೀತಿ. ಇಂತಹ ಅಲಿಪ್ತ ನೀತಿಗೆ ವಾಜಪೇಯಿ ಸರ್ಕಾರ ಹೆಚ್ಚು ಕಡಿಮೆ ತಿಲಾಂಜಲಿ ಇಟ್ಟಿದೆ. ಈ ನೀತಿಯಿಂದಾಗಿ ಭಾರತಕ್ಕೆ ಈಗ ಮೂರನೇ ಜಗತ್ತಿನ ದೇಶಗಳ ನಡುವೆ ಹಿಂದೆ ಇದ್ದ ವರ್ಚಸ್ಸು, ಗೌರವ ಇಲ್ಲ. ಎಲ್ಲಾ ಅಂತರ್ರಾಷ್ಟ್ರೀಯ ಸಂಘಟನೆಗಳು (ಅದು ಹಿಂದಿನ ಗ್ಯಾಟ್ ಇರಲಿ, ಯುನೆಸ್ಕೋ ಇರಲಿ, ಪರಿಸರ ಸಮ್ಮೇಳನಗಳಿರಲಿ) **ಭಾರತ ಇಡೀ ಮೂರನೇ ಜಗತ್ತಿನ ದೇಶಗಳ ಪ್ರಭಾವಿ ಪ್ರತಿನಿಧಿ ನಾಯಕನಾಗಿ ಉಳಿದಿಲ್ಲ.**

ಅಮೆರಿಕದ ಅಧ್ಯಕ್ಷ ಬುಶ್ ಇತ್ತೀಚೆಗೆ ಘೋಷಿಸಿದ ಈ ಹೊಸ ತಾರಾಸಮರದ ಯೋಜನೆಯನ್ನು ಸ್ವಾಗತಿಸಿದ ಮೊದಲ ದೇಶ ಮತ್ತು ಏಕಮಾತ್ರ ಗಮನಾರ್ಹ ದೇಶ ಭಾರತವಾಗಿತ್ತು. 'ಹೊಸ ತಾರಾ ಸಮರ' ನಮ್ಮ ದೇಶದ ಹಿತಾಸಕ್ತಿಗೆ ವಿರುದ್ಧವಾದದ್ದು ಮಾತ್ರವಲ್ಲ ವಿಶ್ವ ಶಾಂತಿಗೂ ವಿರುದ್ಧವಾದದ್ದು. ಅಮೆರಿಕ ತಾನು ಏಕಮಾತ್ರ 'ಸೂಪರ್ ಪವರ್' ಆಗಬೇಕು ಎಂಬ ಕನಸು ಕಾಣುತ್ತಾ ಈಗಿನ ಅಣ್ವಸ್ತ್ರ ಕ್ಷಿಪಣಿಗಳನ್ನು ನಾಶ ಮಾಡಬಲ್ಲ ತಾರಾಸಮರ ಯೋಜನೆಯನ್ನು ರೂಪಿಸುತ್ತಿದೆ. ಇದು ಒಂದು ಹೊಸ ಶಸ್ತ್ರಾಸ್ತ್ರವಾಗಿದ್ದು, ಇದರಿಂದ ಇಂತಹ ಶಸ್ತ್ರಾಸ್ತ್ರ ತಯಾರಿಸಲು ಹೊಸ ಪೈಪೋಟಿ ಆರಂಭವಾಗಿ ವಿಶ್ವಶಾಂತಿಗೆ ಭಂಗ ತರುತ್ತದೆ. ಅಮೆರಿಕ ಮಾತ್ರ ಇದನ್ನು ತಯಾರಿಸಲು ಸಾಧ್ಯವಾದರೆ, ಉಳಿದವರ ಅಣ್ವಸ್ತ್ರವನ್ನು ನಾಶ ಮಾಡಿ, ಅವರ ಮೇಲೆ ಅಣ್ವಸ್ತ್ರ ದಾಳಿ ಮಾಡುವ ಸಾಧ್ಯತೆಯನ್ನು ಇದು ಒದಗಿಸುತ್ತದೆ. **ಅಮೆರಿಕದ ಮಿಲಿಟರಿ ಮಿತ್ರರಾದ ಪಶ್ಚಿಮ ಯುರೋಪ್‌ನ ದೇಶಗಳು, ಜಪಾನುಗಳೇ ಈ ಯೋಜನೆ ಬಗ್ಗೆ ಸಂಶಯ, ಅಸಮ್ಮತಿ ವ್ಯಕ್ತಪಡಿಸಿರುವಾಗ, ಭಾರತವನ್ನು ಅದರ ಬೆಂಬಲಿಗನಾಗುವಂತಹ ಶೋಚನೀಯ ಪರಿಸ್ಥಿತಿಗೆ ವಾಜಪೇಯಿ ಸರ್ಕಾರ ತಂದಿದೆ.**

ಅಮೆರಿಕ ತನ್ನ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ಇತರ ದೇಶಗಳ ಮೇಲೆ ಹೊರಲು ತನ್ನ ಬಾಲಬಡುಕ ದೇಶಗಳನ್ನು ಸೇರಿಸಿ **'ಪ್ರಜಾಪ್ರಭುತ್ವಗಳ ಸಮುದಾಯ'** ಎಂಬ ಸಂಘಟನೆ ನಡೆಸುತ್ತಾ ಬಂದಿದೆ. ಇದು ಅಮೆರಿಕದ ಹಿತಾಸಕ್ತಿಗಳಿಗೆ ಮಣಿಯದೆ ಸ್ವತಂತ್ರವಾಗಿ ನಿಲ್ಲಬಲ್ಲ ದೇಶಗಳಿಗೆ ಕಿರುಕುಳ ಕೊಡಲು ಮತ್ತು ಅವುಗಳನ್ನು ಪ್ರತ್ಯೇಕಗೊಳಿಸಲು ಬಳಸುತ್ತಿದೆ. ಭಾರತ ಹಿಂದೆಂದೂ ಇಂತಹ ಸಂಘಟನೆಗಳಿಗೆ ಸದಸ್ಯವಾಗುವುದನ್ನು ತಿರಸ್ಕರಿಸಿತ್ತು. ವಾಜಪೇಯಿ ಸರ್ಕಾರ ಭಾರತವನ್ನು ಇಂತಹ ದರಿದ್ರ ಸಂಘಟನೆಗಳ ಸದಸ್ಯವಾಗಿಸಿದೆ.

ಇದಲ್ಲದೆ **ಚೀನಾದ ವಿರುದ್ಧ** ಅಮೆರಿಕದ ಸಹಚರನಾಗುವ ಆಮಿಷ ತೋರಿಸುತ್ತಾ ಅಮೆರಿಕದ 'ಜೂನಿಯರ್ ಪಾರ್ಟನರ್' ಆಗುವ ತರಾತುರಿಯನ್ನು ವಾಜಪೇಯಿ ಸರ್ಕಾರ ಹಲವು ಬಾರಿ ತೋರಿಸಿದೆ.

ಪ್ಯಾಲೆಸ್ಟೇನ್ ಜನರ ಸ್ವಯಂ ನಿರ್ಧಾರದ ಹಕ್ಕನ್ನು ಬೆಂಬಲಿಸುವ ನೀತಿ ಯಾವಾಗಲೂ ಭಾರತದ್ದಾಗಿತ್ತು. ಪ್ಯಾಲೆಸ್ಟೇನ್‌ರಿಗೆ ಅವರ ಹಕ್ಕನ್ನು ನಿರಾಕರಿಸುವ ನೀತಿಗಳನ್ನು ಅಂಗೀಕರಿಸುವ ಇಸ್ರೇಲ್ ಜತೆ ತೀರಾ ನಿಕಟ ಸಂಬಂಧ ಹೊಸೆಯದಿರುವುದು ಭಾರತದ ನೀತಿಯಾಗಿತ್ತು. ಆ ಮೂಲಕ ಪ್ಯಾಲೆಸ್ಟೇನ್ ಮಾತ್ರವಲ್ಲ ಇಡೀ ಅರಬ್ ಜನಾಂಗದ ದೇಶಗಳ ಗೌರವ, ಅಭಿಮಾನಕ್ಕೆ ಪಾತ್ರವಾಗಿತ್ತು. ಧರ್ಮದ ಆಧಾರದ ಮೇಲೆ ಭಾರತದ ವಿರುದ್ಧ ಅರಬ್ ದೇಶಗಳನ್ನು ಎತ್ತಿಕಟ್ಟುವುದು ಇದರಿಂದಾಗಿ ಪಾಕಿಸ್ತಾನಕ್ಕೆ ಸಾಧ್ಯವಾಗುತ್ತಿರಲಿಲ್ಲ. ವಾಜಪೇಯಿ ಸರ್ಕಾರ ಈ ನೀತಿಯನ್ನು ಬಿಟ್ಟುಕೊಟ್ಟು ಇಸ್ರೇಲ್ ಜತೆ ನಿಕಟ ಸಂಬಂಧ(ಮಿಲಿಟರಿ ಕ್ಷೇತ್ರವೂ

ಪುಟ 11 ಕ್ಕೆ



ಸದಾ ಹತ್ತಿ ಉರಿಯುತ್ತಿರುವ ಇಂಡೋನೇಶ್ಯಾ



ನಿಲ್ಲದ ಇಸ್ರೇಲ್-ಪ್ಯಾಲೆಸ್ಟೇನ್ ಹೋರಾಟ

ವಿದೇಶಿ ಗೂಢಾಚಾರರಿಗೆ ಮೂಗು ತೂರಿಸಲು ಅವಕಾಶ

ಇವೆಲ್ಲಾ ಸಾಲದೆಂಬಂತೆ 1999 ರಲ್ಲಿ ವಾಜಪೇಯಿ ಸರ್ಕಾರ ಅಮೆರಿಕದ ಆಂತರಿಕ ಗೂಢಚರ್ಯೆ ಸಂಸ್ಥೆ FBI ಗೆ ತನ್ನ ಆಫೀಸನ್ನು ನವದೆಹಲಿಯಲ್ಲಿ ಆರಂಭಿಸಲು ಅನುಮತಿ ಕೊಟ್ಟಿತು. ಅಮೆರಿಕದ ಆಂತರಿಕ ಗೂಢಚರ್ಯೆ ಸಂಸ್ಥೆಗೆ ನವದೆಹಲಿಯಲ್ಲಿ ಆಫೀಸು ಯಾಕೆ ಎಂದು ಯಾರಾದರೂ ಕೇಳಬಹುದಾದ ಪ್ರಶ್ನೆ.

ಮಾದಕ ದ್ರವ್ಯಗಳ ಮತ್ತು ಭಯೋತ್ಪಾದಕತೆ ವಿರುದ್ಧ ಹೋರಾಟದಲ್ಲಿ ಸಹಕಾರ, ತರಬೇತಿ ಹೆಸರಲ್ಲಿ FBI ಗೆ ನಮ್ಮ ಆಂತರಿಕ ಭದ್ರತಾ ಸಂಸ್ಥೆಗಳು ಮತ್ತು ಪಡೆಗಳ ಜತೆ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟಿದೆ ವಾಜಪೇಯಿ ಸರ್ಕಾರ.

ಇದೂ ಸಾಲದೆಂಬಂತೆ ಅಮೆರಿಕದ ಬಾಹ್ಯ ಗೂಢಚಾರ ಸಂಸ್ಥೆ ಸಿಐಎಗೂ ಇಂತಹ ಸಲತ್ತು ಒದಗಿಸುವಂತೆ ಕಾಣುತ್ತಿದೆ. ಪ್ರಧಾನ ಮಂತ್ರಿಗಳ ಮುಖ್ಯ ಕಾರ್ಯದರ್ಶಿ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಬ್ರಿಜೇಶ್ ಮಿಶ್ರಾ ತಮ್ಮ ಭೇಟಿ ನೀಡಿದಾಗ ಸಿಐಎ ಡೈರೆಕ್ಟರ್‌ನ್ನು ಭೇಟಿ ಮಾಡಿದರಂತೆ. ನಮ್ಮ ಮುಖ್ಯ ಕಾರ್ಯದರ್ಶಿಗೆ

ಸಿಐಎ ಡೈರೆಕ್ಟರ್ ಜತೆಏನು ಕೆಲಸ?

ಅಮೆರಿಕದ ಆಳರಸರ ಅಣತಿ ಪಾಲಿಸದ; ಅವರ ಹಿತಾಸಕ್ತಿಗೆ ಅನುಗುಣವಾಗಿ ಕುಣಿಯದ ಇತರ ದೇಶಗಳ ಸರ್ಕಾರವನ್ನು, ನಾಯಕರನ್ನು ಅರಳಿಸುವಲ್ಲಿ ಹಿಂಸಾತ್ಮಕ ಚಳುವಳಿಯಲ್ಲಿ ತೊಡಗುವುದರಲ್ಲಿ, ಸಿಐಎದ್ದು ಎತ್ತಿದ ಕೈ. 50ರ ದಶಕದಲ್ಲಿ ಇರಾನಿನ ಮೊಸಾದೆಕ್, 60 ದಶಕದಲ್ಲಿ ಆಫ್ರಿಕಾದ ನಾಯಕ ಪ್ಯಾಟ್ರಿಕ್ ಲೂಮುಂಬಾ, ಲ್ಯಾಟಿನ್ ಅಮೆರಿಕದ ಚೆಗುವಾರ, 70 ರದಶಕದಲ್ಲಿ ಚಿಲಿಯ ಅಧ್ಯಕ್ಷ ಅಲೆಂದೆಯವರ ಹತ್ಯೆಯಲ್ಲಿ ಸಿಐಎ ಕೈ ಇತ್ತು ಎಂಬುದು ಈಗ ಸಾರ್ವಜನಿಕ ಗುಟ್ಟು. ಅಮೆರಿಕದ ಆಳರಸರ ಅಣತಿ ಪಾಲಿಸದ ಹಲವು ಸರ್ಕಾರಗಳನ್ನು ಅದು ಉರುಳಿಸಿ, ಮಿಲಿಟರಿ ಸರ್ವಾಧಿಕಾರಿಗಳನ್ನು ಅಧಿಕಾರಕ್ಕೆ ತಂದಿದೆ.

ಇಂತಹ ಸಿಐಎ ನಮ್ಮ ಆಂತರಿಕ ಭದ್ರತಾ ಸಂಸ್ಥೆಗಳು ಮತ್ತು ಪಡೆಗಳ ಜತೆ ಕೆಲಸ ಮಾಡಿದರೆ ದೇಶದ ಭದ್ರತೆ, ಸಮಗ್ರತೆ ಗತಿ ಏನಾದೀತು?

ಅಯೋಧ್ಯೆ ವಿವಾದ: ವಂಚಿಸುತ್ತಿರುವ ವಾಜಪೇಯಿ

ಪ್ರಧಾನಿ ವಾಜಪೇಯಿಯವರು ಇತ್ತೀಚೆಗೆ ಮಾರ್ಚ್ 2002 ರ ಹೊತ್ತಿಗೆ ಅಯೋಧ್ಯೆ ವಿವಾದಕ್ಕೆ ಪರಿಹಾರ ಕಂಡು ಹಿಡಿಯಲಾಗುವುದೆಂದು ಘೋಷಿಸಿದ್ದಾರೆ. ಇದು ದೇಶದ ಶಾಂತಿಪ್ರಿಯ ಜನತೆಯನ್ನು ಸ್ಪೂರ್ತಿಗೊಳಿಸುವದರ ಬದಲು ದಂಗುಬಡಿಸಿದೆ. ಇದು ಸುಧಾರಿತ ನಾಯಕರೆಂದು ಇದುವರೆಗೆ ಹೇಳಿಕೊಂಡು ಬಂದಿದ್ದ ವಾಜಪೇಯಿಯವರ ಮುಖವಾಡವನ್ನು ಹರಿದುಹಾಕಿದೆ.

ಸಮಯದ ಪ್ರಾಮುಖ್ಯತೆ

ಈ ಘೋಷಣೆಯನ್ನೂ ಉತ್ತರ ಪ್ರದೇಶ, ಉತ್ತರಾಂಚಲ ಪಂಜಾಬ, ಜಮ್ಮು ಮತ್ತು ಕಾಶ್ಮೀರದಲ್ಲಿ ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹೊರಡಿಸಲಾಗಿದೆ. ಉತ್ತರ



ಪ್ರದೇಶ ಮತ್ತು ಉತ್ತರಾಂಚಲಗಳಲ್ಲಿ ಅಕ್ಟೋಬರ್ ತಿಂಗಳ ಹೊತ್ತಿಗೆ ಚುನಾವಣೆ ನಡೆಯಬೇಕಿದೆ. ಆದರೆ ಯಾವುದಾದರೂ ಕಾರಣಕ್ಕೆ ಫೆಬ್ರವರಿ 2002 ಕ್ಕೆ ನಡೆಯಬಹುದು. ಉತ್ತರ ಪ್ರದೇಶದಲ್ಲ ಬಿಜೆಪಿಯು ಅತ್ಯಂತ ದಯನೀಯ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಆದ್ದರಿಂದಲೇ ಆರ್.ಎಸ್.ಎಸ್. ನ ಸಂಘಟನೆಗಳು ಏನಾದರೂ ಮಾಡಿ ಜನತೆಯಲ್ಲಿ ಒಡಕನ್ನು ಉಂಟು ಮಾಡಲು ಪ್ರಯತ್ನಿಸುತ್ತಿವೆ. ಈಗಾಗಲೇ ರಾಜಸ್ತಾನ ಮತ್ತು ಉತ್ತರ ಪ್ರದೇಶದಲ್ಲಿ ಗಲಭೆಗಳು ಆರಂಭಗೊಂಡಿವೆ. ಆದ್ದರಿಂದ ಆಯೋಧ್ಯೆ ವಿವಾದವನ್ನು ಪರಿಹರಿಸಲು ಮಾರ್ಚ್ 2002 ಯನ್ನು ನಿಗದಿಪಡಿಸಿರುವುದು ಈ ಹಿನ್ನೆಲೆಯಲ್ಲಿ ಮಹತ್ವದ್ದಾಗಿದೆ ಮತ್ತು ಇದು ಕೋಮುವಾದಿ ಶಕ್ತಿಗಳನ್ನು ಸಾಂತ್ವನಗೊಳಿಸಲು ಮುಂದಿಟ್ಟ ಹೆಜ್ಜೆಯಾಗಿದೆ. ಗಮನಾರ್ಹ ಅಂಶವೆಂದರೆ ಬಿಜೆಪಿಯ ಕುತಂತ್ರ ನಾಯಕ, ಗೃಹಸಚಿವ ಎಲ್.ಕೆ.ಅಡ್ವಾಣಿ ಮತ್ತು ಸ್ವತಃ ವಾಜಪೇಯಿಯವರಿಗೆ ಉತ್ತರ ಪ್ರದೇಶದ ಚುನಾವಣೆ ಪ್ರಚಾರದ ಜವಾಬ್ದಾರಿ ನೀಡಲಾಗಿದೆ.

ಅಪಖ್ಯಾತಿ ಸರ್ಕಾರ

ನಿಜವಾಗಿ ವಾಜಪೇಯಿ ಸರಕಾರ ಅಪಖ್ಯಾತಿಗೆ ಒಳಗಾದಷ್ಟು ಕಡಿಮೆ ಸಮಯದಲ್ಲಿ ಬೇರಾವ ಸರ್ಕಾರವೂ ಅಪಖ್ಯಾತಿಗೆ ಒಳಗಾಗಿಲ್ಲ. ಇದು ಆಶ್ಚರ್ಯಪಡುವಂತಹದೇನೂ ಅಲ್ಲ. ಏಕೆಂದರೆ ವಾಜಪೇಯಿಯವರು ತಾವೇ ಹೇಳಿಕೊಂಡಂತೆ ಉತ್ತರಪ್ರದೇಶ ಚುನಾವಣೆಗಳು ಅವರ ಪಕ್ಷಕ್ಕೆ ಅತ್ಯಂತ ಕಠಿಣವಂತೆ.

ಜನತೆಯನ್ನು ಮೋಸಗೊಳಿಸಲು ಹುನ್ನಾರ

ಬಿಜೆಪಿ ಈಗಿರುವ ಅಸಹಾಯಕ ಸ್ಥಿತಿಯಿಂದ ಈ ಹೇಳಿಕೆಯನ್ನು ಗಮನಿಸಬೇಕಾಗುತ್ತದೆ. ಒಂದಂಶವಂತೂ ಸ್ಪಷ್ಟ ಈ ತಂತ್ರದಿಂದ ಭಾರತದ ಯಾವೊಬ್ಬ ನಾಗರೀಕರನ್ನು ಮೋಸಗೊಳಿಸಲು ಸಾಧ್ಯವಿಲ್ಲ. ಕಾರಣ ಅತ್ಯಂತ ಸ್ಪಷ್ಟವಾಗಿದೆ. ಏನೆಂದರೆ ಆಯೋಧ್ಯೆ ವಿವಾದಕ್ಕೆ ಸಂಬಂಧಿಸಿ ಮಾತುಕತೆ ನಡೆಸುತ್ತೇನೆಂದು ಹೇಳುವಾಗಲೇ ಯಾರು ಯಾರೊಡನೆ ಮಾತನಾಡುತ್ತಾರೆ ಎಂದು ಹೇಳದೆ ಬುದ್ಧಿವಂತಿಕೆಯಿಂದ ನುಣುಚಿಕೊಂಡಿದ್ದಾರೆ. ಪ್ರಮುಖ ಮುಸ್ಲಿಂ ಸಂಘಟನೆಗಳೆಲ್ಲ ಮಾತುಕತೆಗೆ ಸಂಬಂಧಿಸಿ ನಮ್ಮನ್ನು ಯಾರೂ ಸಂಪರ್ಕಿಸಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಪ್ರಸ್ತುತ ಸನ್ನಿವೇಶದಲ್ಲಿ, ವಿವಾದವನ್ನು ಪರಿಹರಿಸಲು ನ್ಯಾಯಾಲಯದ ತೀರ್ಮಾನವೇ ಉಳಿದಿರುವ ದಾರಿ ಎಂದು ಪ್ರತಿಯೊಬ್ಬರಿಗೂ ತಿಳಿದ ವಿಷಯವಾಗಿದೆ. ಆದರೆ ಪ್ರಶ್ನೆ ವಾಜಪೇಯಿ ನಿಜವಾಗಿಯೂ ನ್ಯಾಯಾಂಗಕ್ಕೆ ಕಲಾಪಗಳನ್ನು ಮುಗಿಸಲು ಒತ್ತಾಯಿಸುತ್ತಾರೆಯೇ? ಅದಲ್ಲದಿದ್ದರೆ, ಮಾರ್ಚ್ 2002 ರ ಒಳಗೆ ವಿವಾದವನ್ನು ಬಗೆಹರಿಸಲಾಗು ವುದೆಂದು ಯಾವ ಆಧಾರದ ಮೇಲೆ ಹೇಳಿದರು.

ಎಲ್ಲಕ್ಕಿಂತ ಹೆಚ್ಚಾಗಿ, ವಿಹೆಚ್‌ಪಿ,ಭಜರಂಗದಳ ತಮ್ಮ ಹಳೆಯ ಚಾಳಿಯನ್ನೇನೂ ಬಿಟ್ಟುಕೊಟ್ಟಿಲ್ಲ. ಅವು ನ್ಯಾಯಾಲಯದ ತೀರ್ಪು ತಮ್ಮ ಪರವಾಗಿ ಬಂದರೆ ಮಾತ್ರ ನಾವದನ್ನು ಒಪ್ಪಿಕೊಳ್ಳುತ್ತೇವೆ ಎಂದು ಹೇಳುತ್ತಿವೆ. ಈ ಸಂಘಟನೆಗಳು ನ್ಯಾಯಾಲಯದ ತೀರ್ಪು ತಮ್ಮ ಪರವಾಗಿ ಬರ ದಿದ್ದರೆ ಈ ನೆಲದ ಕಾನೂನನ್ನು ಗೌರವಿಸುತ್ತವೆಯೇ?

ಆದ್ದರಿಂದ ವಾಜಪೇಯಿಯವರ ಹೇಳಿಕೆಯು ಜನತೆಯನ್ನು ಮೋಸಗೊಳಿಸುವ ಒಂದು ಹುನ್ನಾರವೇ ಆಗಿದೆ.

ಈ ನಾಟಕಕ್ಕೆ ನಿಜವಾದ ಕಾರಣ ಬೇರೆಲ್ಲೋ ಇರುವಂತಿದೆ. 'ಟೈಮ್ಸ್ ಆಫ್ ಇಂಡಿಯಾ' ಸಂಪಾದಕೀಯ ಹೇಳುವಂತೆ 'ಸರ್ಕಾರದ ಮುಖ್ಯಸ್ತರೇ ಅತ್ಯಂತ ಸಮಯಸಾಧಕರಂತೆ ತೋರಿಸಿಕೊಳ್ಳುತ್ತಿದ್ದಾರೆ, ಅಂತಿಮ ಗಡುವು ಡಿಸೆಂಬರ್ ಅಲ್ಲ, ಜನವರಿ ಅಲ್ಲ, ಮಾರ್ಚ್. ಅದೂ ವಿಹೆಚ್‌ಪಿ ಮಂದಿರ ನಿರ್ಮಾಣವನ್ನು ಆರಂಭಿಸುವ ಸಮಯ"

'ಟೈಮ್ಸ್ ಆಫ್ ಇಂಡಿಯಾ' ಸಂಪಾದಕೀಯ ಹೇಳುವಂತೆ 'ಸರ್ಕಾರದ ಮುಖ್ಯಸ್ತರೇ ಅತ್ಯಂತ ಸಮಯಸಾಧಕರಂತೆ ತೋರಿಸಿಕೊಳ್ಳುತ್ತಿದ್ದಾರೆ, ಅಂತಿಮ ಗಡುವು ಡಿಸೆಂಬರ್ ಅಲ್ಲ, ಜನವರಿ ಅಲ್ಲ, ಮಾರ್ಚ್. ಅದೂ ವಿಹೆಚ್‌ಪಿ ಮಂದಿರ ನಿರ್ಮಾಣವನ್ನು ಆರಂಭಿಸುವ ಸಮಯ"

ಈ ವರ್ಷದ ಆರಂಭದಲ್ಲಿ ಮಹಾಕುಂಭದ ಸಮಯದಲ್ಲಿ ಸಂತರ ಸಮಾವೇಶದಲ್ಲಿ ವಿಹೆಚ್‌ಪಿ ಹೇಳಿಕೆ ಕೊಟ್ಟನಂತರ ಈ ಘೋಷಣೆ ಹೊರಬಿದ್ದಿದೆ ಎಂಬಂಶವನ್ನು ಗಮನಿಸಬೇಕು.

ವಾಜಪೇಯಿ ಹೇಳಿಕೆಯ ಈ ಅಂಶಕ್ಕೆ ದೇಶದ ಬಹುತೇಕ ಎಲ್ಲಾ ಪತ್ರಿಕೆಗಳು ತಮ್ಮ ಸಂಪಾದಕೀಯದಲ್ಲಿ ಪ್ರತಿಕ್ರಿಯಿಸಿವೆ.

'ಟೈಂಸ್ ಆಫ್ ಇಂಡಿಯಾ' ಗುರುತಿಸುವಂತೆ "ಭಗವಾ ಧ್ವಜಕ್ಕೆ ವಂದಿಸಿ, ಆರ್‌ಎಸ್‌ಎಸ್ ಮುಖಂಡರೊಡನೆ ಸಾಂತ್ವಾನದ ಸಭೆ ಈಗ ಅಯೋಧ್ಯೆಯ ಮೇಲಿನ ನಿರುತ್ತೇಜನಗೊಳಿಸುವ ಹೇಳಿಕೆ"

ಇದೇ ದಿನದ ಹಿಂದು ಪತ್ರಿಕೆಯ ಸಂಪಾದಕೀಯದಲ್ಲಿ 'ಈ ತಕ್ಷಣದ ಸನ್ನಿವೇಶದಲ್ಲಿ ನಿರೀಕ್ಷಿಸುವುದೇನೆಂದರೆ ವಾಜಪೇಯಿಯವರು ಹೇಳಿರುವಂತೆ ಸಿಹಿಯಾದ ಕಾರಣಗಳನ್ನು ನೀಡುವುದಲ್ಲ, ಆದರೆ ನಿರ್ದಿಷ್ಟವಾದ, ನಿಷ್ಠುರವಾದ ಕ್ರಮಗಳು, ಕನಿಷ್ಟ ವಿಹೆಚ್‌ಪಿಯ ಪ್ರಚೋದಾನಾತ್ಮಕ ಮತ್ತು ಬಾಲಿಷ ಪ್ರಕ್ಷೋಭೆಯನ್ನು ನಿಲ್ಲಿಸಲು, ಅತಿಮುಖ್ಯವಾಗಿ ಮಂದಿರ ನಿರ್ಮಾಣಕ್ಕೆ ಸಂಬಂಧಿಸಿ ವಿವಿಧ ಸ್ಥಳಗಳಲ್ಲಿ ನಡೆಯುತ್ತಿರುವ ವಿವಿಧ ಕೆಲಸಗಳನ್ನು ನಿಲ್ಲಿಸಲು" ಕ್ರಮ.

ಸುಧಾರಣಾವಾದಿ! ಎಂತಹ ಸುಧಾರಣಾವಾದಿ

ಸಂಘ ಪರಿವಾರದ ಗುಣಗಳಿಗೆ ವ್ಯತಿರಿಕ್ತವಾದ ವ್ಯಕ್ತಿತ್ವ, ಸುಧಾರಣಾವಾದಿ ಎಂಬ ಕಂ... ಮುಗಿದು ನಿಜಬಣ್ಣ ಅನಾವರಣ ಗೊಂಡಿದೆ. ಇದು ವರ್ಷಾನುಗಟ್ಟಲೆ ಬಂಡವಾಳಶಾಹಿ ಮಾಧ್ಯಮ ಅತಿ ಎಚ್ಚರಿಕೆಯಿಂದ ರೂಪಿಸಿದ್ದ ಅಭಿಪ್ರಾಯ. ಮಾಧ್ಯಮದ ಈ ಪ್ರಚಾರ ಜನತೆಯನ್ನು ವಂಚಿಸಿತ್ತು.

ಸ್ವಂತ ವಾಜಪೇಯಿ ಕೂಡ ಹಲವಾರು ವರ್ಷಗಳ ಕಾಲ ಇಂತಹ ಇಮೇಜನ್ನು ರೂಢಿಸಿಕೊಂಡಿದ್ದರು, ಉ.ದಾ: ಬಾಬರಿ ಮಸೀದಿ ಧ್ವಂಸ ಗೊಂಡಾಗ ದೂರವಿದ್ದುದು, ಆ ಕರಾಳ ಭಾನುವಾರ ಅಡ್ವಾಣಿ, ಜೋಷಿ, ಉಮಾಭಾರತಿ ಮಸೀದಿ ಧ್ವಂಸ ಮಾಡುವಾಗ ಅವರು ಲಕ್ನೋದಲ್ಲೇ ಉಳಿದಿದ್ದು, ಈ ಹೀನ ಕೃತ್ಯವು ನಡೆಯುವಾಗ ಅಥವಾ ತನ್ನ ಪಕ್ಷದ ಸಹೋದ್ಯೋಗಿಗಳು ಈ ಕೃತ್ಯದಲ್ಲಿ ತೊಡಗಿಕೊಂಡಿದ್ದಾಗ ವಾಜಪೇಯಿ ಒಮ್ಮೆಯೂ ಆಕ್ಷೇಪಿಸಲಿಲ್ಲ, ಮಸೀದಿ ಧ್ವಂಸಗೊಂಡ ನಂತರವೇ ಅವರು ಇದಕ್ಕೆ ವಿಷಾದ ವ್ಯಕ್ತಪಡಿಸಿದ್ದು.

ಬಡ ಗೋವಿಂದಾಚಾರ್ಯ ಹೇಳಿದ್ದಂತೆ ವಾಜಪೇಯಿ ಸಂಘ ಪರಿವಾರದ ಮುಖವಾಡ, ಅವರು ಸರಿಯಾಗಿಯೇ ಹೇಳಿದ್ದರು, ಆದರೆ ಪರಿವಾರದ ದೃಷ್ಟಿಯಲ್ಲಿ ಅವರು ಆಗ ಅದನ್ನು ಹೇಳಬಾರದಿತ್ತಷ್ಟೇ.

ಆಗಿಂದ್ದಾಗೆ, ಅವರ ನಿಜವಾದ ಅನುಕಂಪ ಯಾವಕಡೆಗಿದೆ ಎಂಬುದನ್ನು ಅತ್ಯಂತ ಸ್ಪಷ್ಟವಾಗಿ ತೋರಿಸಿದ್ದಾರೆ. ಆರ್.ಎಸ್.ಎಸ್. ಮುಖಪತ್ರ ಪಾಂಚಜನ್ಯದಲ್ಲಿ ಹೇಳಿರುವಂತೆ ಅವರಿಗೆ ಸ್ವಯಂ ಸೇವಕ(ಆರ್.ಎಸ್.ಎಸ್ ಸದಸ್ಯ) ನಾಗಿರುವುದು ಹೆಮ್ಮೆಯ ವಿಚಾರವಂತೆ. ನ್ಯೂಯಾರ್ಕ್‌ನ ಸಂತರ ಸಭೆಯೊಂದರಲ್ಲಿ ಅವರೇ ಘೋಷಿಸಿಕೊಂಡಿರುವಂತೆ ಪ್ರಧಾನಿ ಪಟ್ಟವನ್ನು ಬೇಕಾದರೂ ಅವರು ಬಿಡಲು ಸಿದ್ಧ, ಆದರೆ ಸ್ವಯಂ ಸೇವಕ ಎಂಬುದನ್ನು ಕಳಕೊಳ್ಳಲು ಆಗುವುದಿಲ್ಲ. ಮತ್ತೊಮ್ಮೆ ಕೇರಳದ ಕುಮಾರಕೋಂನಲ್ಲಿ ಉದ್ದೇಶಿತ ಮಂದಿರ ನಿರ್ಮಾಣವು ಇನ್ನೂ ಮುಗಿಯದ 'ರಾಷ್ಟ್ರೀಯ ಹೆಬ್ಬಯಕೆ' ಅದಿನ್ನೂ ಪೂರ್ಣಗೊಳ್ಳಬೇಕಿದೆ. ಇದೇ ವಾಜಪೇಯಿ ಕ್ರಿಶ್ಚಿಯನ್ನರ ಮೇಲೆ ಮರಣಾಂತಿಕ ದಾಳಿ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳ ಬೇಕಾದ ಸಮಯದಲ್ಲಿ 'ಮತಾಂತರದ ಮೇಲಿನ ರಾಷ್ಟ್ರೀಯ ಚರ್ಚೆಗೆ ಕರೆಕೊಟ್ಟರು'

ಆದ್ದರಿಂದ ತಾವೇ ಬೆಳೆಸಿಗೊಂಡಿದ್ದ ಸುಧಾರಣಾವಾದಿ ಇಮೇಜು ಕಳಚಿ ಹೋಗುತ್ತಿರುವುದು ಆಶ್ಚರ್ಯವೇನಲ್ಲ. ಮತ್ತು ಹೆಚ್ಚಿನ ಸಮಯ ಯಾರನ್ನೂ ಮೋಸ ಗೊಳಿಸಲಸಾಧ್ಯ.

ಸಿದ್ದಿ ಯುವತಿಯರ ಕ್ರೀಡಾ ಬದುಕು....

ಪುಟ 12 ರಿಂದ

ಗಳಲ್ಲಿ ಸಹ ಉತ್ತಮ ಮೈದಾನವಿಲ್ಲ. ಈಜು ಕೊಳಗಳಿಲ್ಲ, ಮಲ್ಟಿ ಜಿಮ್ನಾಶಿಯಂ ಇಲ್ಲ. ಕ್ರೀಡಾ ಪಟುಗಳನ್ನು ಗುರುತಿಸುವ ತಯಾರಿ ಮಾಡುವ ವೈಜ್ಞಾನಿಕ ಕಣ್ಣೋಟವಿಲ್ಲ ದೈಹಿಕ ಶಿಕ್ಷಕರಂತೂ ಬಹುತೇಕ ಕಡೆಗಳಲ್ಲಿ ಇಲ್ಲವೇ ಇಲ್ಲ ಒಳಾಂಗಣ ಹೊರಾಂಗಣ ಕ್ರೀಡಾ ಸಾಮಗ್ರಿ ಪೂರೈಕೆ ಇಲ್ಲ.

ಕಾಟಾಚಾರಕ್ಕೆಂಬಂತೆ ದಸರಾಕ್ರೀಡಾ ಕೂಟ, ಮಹಿಳಾ ಕ್ರೀಡಾ ಕೂಟ, ಗ್ರಾಮೀಣ ಕ್ರೀಡಾಕೂಟ ಮಾಡುತ್ತಾರೆ. ದಿನವೊಂದಕ್ಕೆ ಕ್ರೀಡಾಳುವಿಗೆ ನೀಡುವ ಆರ್ಥಿಕ ಸಹಾಯ ಸರ್ಕಾರಗಳ ಕಣ್ಣೊರೆಸುವ ತಂತ್ರವೇ ಮಳೆಗಾಲದ ಕಿಚಿಪಿಚಿ ಕೆಸರಿನಲ್ಲಿ ದಸರಾಕ್ರೀಡಾಕೂಟ, ಒಂದು ರೀತಿಯಲ್ಲಿ ಕೆಸರುಗದ್ದೆ ಓಟವಿದ್ದಂತೆ! ಮಹಿಳಾ ಕ್ರೀಡಾಕೂಟ ಪ್ರತ್ಯೇಕವಾಗಿ ನಡೆಸಬೇಕಿತ್ತಾದರೂ ಗ್ರಾಮೀಣ ಕ್ರೀಡಾಕೂಟದ ಜೊತೆಗೆ ಒಂದೇ ದಿನದಲ್ಲಿ ಅಯ್ಕೆ ಮಾಡಿ ಕೈತೊಳೆದುಕೊಳ್ಳುತ್ತಾರೆ. ವಿ.ವಿ. ಕ್ರೀಡೆಗಳಲ್ಲಿ ಭಾಗವಹಿಸಿ ದಾಖಲೆ ಮಾಡಿದರೂ ಸರ್ಕಾರ ಹಾಗೂ ಶಿಕ್ಷಣ ಸಂಸ್ಥೆಗಳು ಸಹಾಯಹಸ್ತ ಚಾಚಿಲ್ಲ. ಒಂದು ಶೂ, ಸ್ಪೈಕ್ಸ್, ಕಾಸ್ಟ್ಯೂಮ್ಸ್, ಪೌಷ್ಟಿಕ ಆಹಾರ ನೀಡುವವರೂ ಇಲ್ಲ, ಎಲ್ಲವೂ 'ಇಲ್ಲ'ಗಳೇ ಇರುವಾಗ ಒಲಂಪಿಕ್ಸ್‌ನಲ್ಲಿ ಪದಕ ಬಂದೀತು ಹೇಗೆ? ಏಷ್ಯಾಡ್‌ನಲ್ಲಿ ಚಿನ್ನ ಬಂದೀತೂ ಹೇಗೆ? ನ್ಯಾಷನಲ್ ಗೇಮ್ಸ್‌ನಲ್ಲಿ ದಾಖಲೆಯಾದೀತು ಹೇಗೆ? ಹೌದು ಕ್ರೀಡಾನೀತಿ ಇಲ್ಲೇ 'ಟ್ರ್ಯಾಕ್' ತಪ್ಪಿದೆ.

ಜಿಲ್ಲೆಗೊಬ್ಬ ಯುವಜನ ಸೇವಾ ಕ್ರೀಡಾಧಿಕಾರಿ (DYSSO)ತಾಲೂಕಿಗೊಬ್ಬ ಅಧಿಕಾರಿಯೂ, ತರಬೇತುದಾರ ಇರಬೇಕಿತ್ತು. ಘನಸರ್ಕಾರಗಳ ಉದ್ಯೋಗ ಕಡಿತದ ಪರಿಣಾಮವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವ ತಾಲೂಕಿಗೂ ಕ್ರೀಡಾಧಿಕಾರಿ ಇಲ್ಲ, ಜಿಲ್ಲೆಗೆ DYSSO ಇಲ್ಲ. ಎಲ್ಲರೂ 'ಪ್ರಭಾರಿ'ಗಳೇ.

ಎಂಥ ಹಿಂದುಳಿದ ಜಿಲ್ಲೆಯಲ್ಲಿಯೂ ಚಿನ್ನತರುವ ಕ್ರೀಡಾಳುಗಳನ್ನು ಬೆಳೆಸಬಹುದು. ಅವಕಾಶ ಸಿಕ್ಕರೆ ಸಾಕು ನಮ್ಮ ತಾಕತ್ತು ತೋರುತ್ತೇವೆಂದು ಕಾದುಕುಳಿತ ಯುವಜನರಿದ್ದಾರೆ. ಉ. ಕ. ದಂಥ ಗುಡ್ಡಗಾಡು ಜಿಲ್ಲೆಯಲ್ಲಿ ಕೂಡ ವಿವಿಧ ಕ್ರೀಡಾಪಟುಗಳು ಬೆಳೆಯುತ್ತಿದ್ದಾರೆ. ಆದರೆ ಸರ್ಕಾರಗಳು ಇಂಥ ಗುಡ್ಡಗಾಡು, ಆದಿವಾಸಿ ಜನರಿಗೆ, ಆಸಕ್ತ ಕ್ರೀಡಾಳುವಿಗೆ ಅವರಿರುವ ಪ್ರದೇಶದಲ್ಲೇ ಹೆಚ್ಚು ಸೌಲಭ್ಯ ಒದಗಿಸಬೇಕು. ಕಾಡಿನ ಮಧ್ಯೆ ಹೊಂದಿಕೊಂಡಿರುವವರನ್ನು ದಿಢೀರನೆ ನಗರಕ್ಕೆ ತಂದರೆ ಅಲ್ಲಿಯ ವಾತಾವರಣ, ಆಹಾರ, ಭಾಷೆ ಸರಿಹೊಂದದೇ ಮತ್ತಷ್ಟು ಕೀಳರಿಮೆಗೆ ಕಾರಣವಾಗುತ್ತದೆ. ಅವರವರ ಆಸಕ್ತಿಗೆ ಅನುಗುಣವಾಗಿ ತರಬೇತಿ ನೀಡಬೇಕೆ ವಿನಃ ಕ್ರೀಡೆಯನ್ನು ಹೇರಬಾರದು.

ಭಾರತದಂಥ ಸಂದರ್ಭದಲ್ಲಿ ಜಾತಿ, ಧರ್ಮದ ಹೆಸರಿನಲ್ಲಿ ನಡೆಯುವ ಅಸ್ಪೃಶ್ಯತೆಯ ತಾರತಮ್ಯ ಕ್ರೀಡೆಗೂ ತಾಗುತ್ತಿದೆ. ಇವು ನಿಲ್ಲದಿದ್ದರೆ ಸರ್ಕಾರ ಎಷ್ಟೇ ನೀತಿ ತಂದರೂ ವಾಸ್ತವಿಕವಾಗಿ ಸರಿಹೊಂದಲಾರದು.

ಉತ್ತರಕನ್ನಡದಲ್ಲಿ ಮಹಿಳೆಯರಿಂದ ಭಾರಎತ್ತುವ ಕ್ರೀಡೆ ಪ್ರಾರಂಭವಾದುದು ಹೀಗೆ...

ಓಟ, ಎಸೆತ, ಗುಂಪು ಆಟಗಳಲ್ಲಿ 90ರ ದಶಕದ ಪ್ರಾರಂಭದಲ್ಲಿ ಉ.ಕ.ಜಿಲ್ಲೆಯ ಹೆಣ್ಣು ಮಕ್ಕಳು ದೊಡ್ಡ ಹೆಸರು ಗಳಿಸುತ್ತಿದ್ದರು. ಆಗ ಆಟೋಟಕ್ಕೆ ಪೂರಕ ಉಪಕರಣಗಳು ಯಾವ ಶಿಕ್ಷಣ ಸಂಸ್ಥೆಗಳಲ್ಲಿಯೂ ಸರಿಯಾಗಿರಲಿಲ್ಲ. ಜಿಲ್ಲಾಕೇಂದ್ರ ಕಾರವಾರದಲ್ಲಿ Young Star Sports Club ನಲ್ಲಿ ವ್ಯಾಯಾಮಕ್ಕೆ ದೇಹದಾರ್ಢ್ಯಕ್ಕೆ, ಭಾರ ಎತ್ತುವಿಕೆಗೆ ಬೇಕಾದ ಕೆಲವೇ ಕೆಲವು ಡಂಬೆಲ್ಸ್, ಬೇಂಚ್‌ಪ್ರೆಸ್, ವೇಟ್‌ಲಿಫ್ಟಿಂಗ್ ಸೆಟ್ ಇತ್ಯಾದಿ ಇತ್ತು. ನಾನಾಗ ಅಥ್ಲೆಟಿಕ್ಸ್ ನಲ್ಲಿದ್ದವಳಿ ಸ್ನೇಹಿತೆಯರನ್ನು ಕರಕೊಂಡು ಕೆಲವು ವ್ಯಾಯಾಮಕ್ಕೆ ಹೋಗುತ್ತಿದ್ದೆ. ಅಲ್ಲಿ ಎಸ್.ಎ.ಐ ತರಬೇತುದಾರರಾದ ಜಿ. ಪಾರ್ಥಿಬನ್ (ಊಲ್ಲು)ರ ವಿಶೇಷ ಕಾಳಜಿಯಿಂದಾಗಿ ನಾವು ಭಾರ ಎತ್ತುವಿಕೆ ಪ್ರಾರಂಭಿಸಲು ನಿರ್ಧರಿಸಿದೆವು. ಆಗಷ್ಟೇ ಬೆಂಗಳೂರಲ್ಲಿ ಎಸ್.ಎ.ಐದಲ್ಲಿ ತಬೇತಿಪಡೆದು ಕಾರಣಾಂತರಗಳಿಂದ ಹೊರಬಿದ್ದು ಅರ್ಧದಲ್ಲಿಯೇ ನಿಲ್ಲಿಸಿದ ರೂಪಾಸಿದ್ದಿಯನ್ನು ಹುಡುಕಿ ತಂದರು. ಅವರ ಶಿಕ್ಷಣವನ್ನು ಕಾರವಾರದಲ್ಲಿಯೇ ಮುಂದುವರೆಸುವ ವ್ಯವಸ್ಥೆ ಕಲ್ಪಿಸಲಾಯಿತು. ಕ್ರೀಡೆಯಲ್ಲಿ ಮುಂದಕ್ಕೆ ತರಲು ತೀರ್ಮಾನಿಸಿ ಬಿಸಿಎಂ ಹಾಸ್ಟೆಲಿಗೆ ಸೇರಿಸಲಾಯಿತು. ಅಂತೂ ಉ. ಕನ್ನಡದಲ್ಲಿ ಭಾರ ಎತ್ತುವಿಕೆಯು 1992ರ ಆಗಸ್ಟ್ 14 ರಂದು ಪ್ರಾರಂಭಿಸಿದೆವು. ಮೊದಲ ದಿನ ರೂಪಾಸಿದ್ದಿ, ಯಮುನಾ ಗಾಂವ್ಕಾರ, ಎರಡನೇ ದಿನ ಎಸ್. ಉಷಾ, ಎಸ್. ಸಂಧ್ಯಾ, ಮೂರನೇ ದಿನ ಸುಮತಿ ಗುನಗಿ ಹೀಗೆ 5 ಜನರ ಒಂದು ಗುಂಪಾಗಿ ಉ.ಕ. ಜಿಲ್ಲೆಯಲ್ಲಿ ಮೊದಲನೇ ಬಾರಿಗೆ ಭಾರ ಎತ್ತುವಿಕೆ ಯನ್ನು ಮಹಿಳೆಯರಿಗಾಗಿ ಪ್ರಾರಂಭಿಸಲಾಯಿತು. ಅಂದು ರೂಪಾ ಸಿದ್ದಿ ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿ ಪಡೆದಿದ್ದಳು. ಈಗ ಪೋಲಿಸ್ ನೌಕರಿ ಮಾಡುತ್ತಿದ್ದಾರೆ. ಕರ್ನಾಟಕ ವಿ.ವಿ. ಧಾರವಾಡ ಮಟ್ಟದಲ್ಲಿ ವೇಟ್ ಲಿಫ್ಟಿಂಗ್ ನಡೆಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ನಿಂದ ಒತ್ತಾಯಿಸಿ ಯಶಸ್ಸು ಪಡೆಯಲಾಯಿತು. ಇಂದಿಗೂ ಕರ್ನಾಟಕ ವಿ.ವಿ. ಮಟ್ಟದಲ್ಲಿ ಮಹಿಳೆಯರಿಗೆ ಭಾರ ಎತ್ತುವ ಸ್ಪರ್ಧೆ ನಡೆಸುತ್ತಿದ್ದಾರೆ. ಅಂದು ನಮ್ಮ ತಂಡ ರಾಜ್ಯ ಹಾಗೂ ದಕ್ಷಿಣ ಭಾರತ ಮಟ್ಟದಲ್ಲಿ ಪ್ರಶಸ್ತಿಗಳಿಸಿತ್ತು. ರಾಷ್ಟ್ರಮಟ್ಟದಲ್ಲಿ ಹಲವಾರು ಬಾರಿ ಭಾಗವಹಿಸಿತ್ತು. ಇಂದಿಗೂ ಎಲ್ಲರ ಪ್ರೋತ್ಸಾಹ ಸಿಕ್ಕಿದರೆ ಉತ್ತಮ ಸಾಧನೆ ಮಾಡಬಹುದಾಗಿದೆ.


ಭೂಮಾಲೀಕರ ಬರ್ಬರ ಕೃತ

ಬಳ್ಳಾರಿ ದಲಿತ ಮಹಿಳೆಯ ಬೆತ್ತಲ


ಬಳ್ಳಾರಿಯ ವಣೇನೂರು ಗ್ರಾಮದಲ್ಲಿ ನಡೆದ ದಲಿತ ಮಹಿಳೆಯ ಬೆತ್ತನೆ ಮೆರವಣಿಗೆ, ಅತ್ಯಂತ ಬರ್ಬರ, ಅಮಾನವೀಯ ಘಟನೆ... ಇಡೀ ನಾಗರಿಕ ಸಮಾಜವೇ ತಲೆತಗ್ಗಿಸುವಂತಹದ್ದು. ಇಂತಹ ಘಟನೆಗಳು ಈ ಪ್ರದೇಶದಲ್ಲಿ ನಡೆಯುತ್ತಲೇ ಬಂದಿವೆ. ಇಲ್ಲಿನ ಜಮೀನ್ದಾರರ ಅಟ್ಟಹಾಸ ಮಿತಿಮೀರುತ್ತಿದೆ. ಪೋಲೀಸ್ ಮತ್ತು ಆಡಳಿತ ಡೊಗ್ಗು ಸಲಾಮು ಹೊಡೆದು ಇವರಿಗೆಲ್ಲಾ ರಾಜಕೀಯ ಆಶ್ರಯವೂ ಇದೆ. ಪಾಳೆಗಾರರ, ಊಳಿಗಮಾನ್ಯ ಮೌಲ್ಯಗಳ ಕ್ರೂರ ನರ್ತನಕ್ಕೆ ಮಹಿಳೆಯರೇ ಅತ್ಯಧಿಕ ಬಲಿಗಳು.... ಈ ಘಟನೆ ಬಯಲಿಗಿಟ್ಟ ಹಲವು ಸಂಗತಿಗಳು ಈ ಲೇಖನದಲ್ಲಿ

ಪಿ.ಆರ್.ವೆಂಕಟೇಶ್

510 ಮನೆಗಳು, ಸುಮಾರು 1250 ಕ್ಕೂ ಜನ, ಇವರಲ್ಲಿ ಶೇಕಡ 52 ಕೂಲಿಕಾರರು, ಶೇ. 40 ಬಡರೈತರು, ಶೇ. 6 ಶ್ರೀಮಂತರು, ಶೇ.4 ಭೂಮಾಲಿಕರು, ಜಾತಿ ಆಧಾರದಲ್ಲಿ ವಿಂಗಡಿಸಿದರೆ 300 ಮನೆ ವಾಲ್ಮೀಕಿ, 50 ಮನೆ ಲಿಂಗಾಯತ, 40 ಮನೆ ಚನ್ನದಾಸರು, (ಹರಿಜನ) 26 ಮನೆ ಕುರುಬರು, 20ಮನೆ ರೆಡ್ಡಿಗಳು, 18 ಮನೆ ಮುಸ್ಲಿಂ, ಚಲುವಾದಿ 15 ಮನೆ, 15 ಮನೆ ಹರಿಜನ, ಕುಂಬಾರರು 10 ಮನೆ, ಅಗಸರು 8, ನಂಬೇರು 8 ಮನೆಗಳಿರುವ ವಣೇನೂರು ಗ್ರಾಮದ ಸುದ್ದಿ ಬಳ್ಳಾರಿ ಜಿಲ್ಲೆಯ ರಾಜ್ಯ-ರಾಷ್ಟ್ರದಲ್ಲಿನ ಬಾಯಿಗೆ ಎಲಡಿಕೆಯಾಗಿಸಿಕ್ಕು, ಜೊತೆಗೆ ಸಾಕಷ್ಟು ಸುಣ್ಣವೂ ಸೇರಿ ತಮ್ಮಿಷ್ಟದಂತೆ ಜಗಿದು ಬಣ್ಣ ಬಣ್ಣದ ಚಿತ್ತಾರಗಳಾಗಿ ಮೂಡಿದೆ. ಪ್ರತಿದಿನದ ವೃತ್ತ ಪತ್ರಿಕೆಗಳು "ಎಂಥಾ ಭಯಾನಕ ಘಟನೆ ಎಂದವು. ಅಂತೆ ಕಂತೆಗಳನ್ನು ಕೇಳಿದ ಜನ ತಮ್ಮ ಕಲ್ಪನೆಗಳನ್ನು ಸೇರಿಸಿ ಸಂಶಯಾತ್ಮಕ ಚಿತ್ರ ಬಿಡಿಸಿದರು. ಆದರೆ ವಾಸ್ತವವೇನು? ಎಂಬುದು ಹಳ್ಳಿಯನ್ನು ಹೊಕ್ಕು ಹೆಕ್ಕಿದಾಗಲೇ ತಿಳಿದದ್ದು.


ಬಳ್ಳಾರಿ ಆಸ್ಪತ್ರೆಯಲ್ಲಿ ಯರಮ್ಮ ಮತ್ತು ಗಂಡ ಎನ್ನಪ್ಪ

ಮೊನ್ನೆ ತಾನೆ, ಭಾರತ ನಾರಿಯ ಪರಂಪರೆಯ ಉತ್ತರಾಧಿಕಾರಣಿ ತಾನೊಬ್ಬಳೇ ಎಂಬ ಬಿಂಕ ಹೊತ್ತ ಬಿ.ಜೆ.ಪಿಯ ಸುಷ್ಮಾಸ್ವರಾಜ್ ಬಳ್ಳಾರಿಗೆ ಬಂದು, ವರಮಹಾಲಕ್ಷ್ಮಿ ಪೂಜೆ ಮಾಡಿ, ಸ್ತ್ರೀ ಸಮಾನತೆಗಾಗಿ ಎನ್.ಡಿ.ಎ ಕೇಂದ್ರ ಸರಕಾರ ಏನೆಲ್ಲಾ ತಿಣುಕುತ್ತಿದೆ ಎಂದು ಹೇಳಿದ್ದರು. ನಂತರದ ಕೆಲವು ದಿನಗಳಲ್ಲಿ ರಾಜ್ಯ ಮುಖ್ಯಮಂತ್ರಿಗಳು ಸ್ತ್ರೀ ಶಕ್ತಿ ಯೋಜನೆ ಸ್ತ್ರೀಯರಿಗೆ ನಿಜವಾದ ಶಕ್ತಿಯನ್ನು ಕೊಡುತ್ತದೆ ಎಂದು ಹೇಳಿಹೋದರು. ನಮ್ಮ ಜಿಲ್ಲೆಯ ಮೂರು ಮಂತ್ರಿಗಳು ಸ್ತ್ರೀಯರ ಉದ್ದಾರಕ್ಕಾಗಿ ಹಲವಾರು ಯೋಜನೆಗಳನ್ನು ಕಾಂಗ್ರೆಸ್ ಕಂಪನಿ ತಯಾರಿಸಿದ ಅಚ್ಚಹೊಸ 'ಟಾಣಿಕ್' ಎಂಬಂತೆ ಪ್ರಚಾರ ಮಾಡಿದರು. ಜನರಿಗೆ ತಿಳಿಯದ ಕೋಟಿ ಕೋಟಿಗಳ ಲೆಕ್ಕಾಚಾರಗಳನ್ನು ಕೊರೆದದ್ದೆ ಕೊರೆದದ್ದು ಈ ಕೊರೆತಗಳ ಕಾವು ಇನ್ನೂ ಆರಿಲ್ಲ **ವಣೇನೂರು ಗ್ರಾಮದ ಸ್ತ್ರೀಯೊಬ್ಬಳನ್ನು 26-8-2001 ರಂದು 3 ತಾಸುಗಳ ತನಕ ಬೆತ್ತಲೆ ಮಾಡಿ ಊರ ತುಂಬ ಮೆರಸಿದ ಘಟನೆ ನಡೆಯಿತು. ನಾಗರೀಕ ಸಮಾಜ ನಾಚಿಕೆಯಿಂದ ತಲೆತಗ್ಗಿಸಿತು. ಸ್ತ್ರೀ ಸ್ವಾತಂತ್ರ್ಯದ ಕಲ್ಪನೆ ಕಮರಿತು. ಸ್ತ್ರೀ ಸಮಾನತೆಯ ಆದರ್ಶ ಗಾಳಿಗೆ ತೂರಿತು. ಹಳೇ ಪಾಳೇಗಾರಿ ಸಮಾಜದ ಕ್ರೌರ್ಯ ಶಕ್ತಿ ದರ್ಪದಿಂದ ಗಹಗಹಿಸಿತು.**


ದೌರ್ಜನ್ಯಕ್ಕೀಡಾದ ಎರ್ರೆಮ್ಮ

ಈ ಗ್ರಾಮದಿಂದ 7 ಕಿ.ಮಿ ದೂರದ ಮೋಕಾದಲ್ಲಿ ಪೊಲಿಸ್ ಠಾಣೆ ಎಂಬ ಒಂದು ರೂಂ ಇದೆ. ಇದರಲ್ಲಿ ದಪ್ಪ ಮೀಸೆ ಬಿಟ್ಟು ಕಾಕಿ ತೊಟ್ಟು, ಲಾಠಿ ಹಿಡಿದ, ಸೂತ್ರದ ಗೊಂಬೆಗಳಿವೆ. ಈ ಗೊಂಬೆಗಳ ಜೇಬು ಸದಾ ತೆರೆದಿರುತ್ತದೆ. ಯಾವುದೋ ದೇವರಿಗೆ ಸಲ್ಲಬೇಕಾದ ಕಾಣಿಕೆ ಡಬ್ಬಿಯಂತೆ. ಈಗ್ರಾಮದಲ್ಲಿ ಗ್ರಾಮದ ಆಡಳಿತವನ್ನು ಮರೆತು ಸದಾ ದುರಾಡಳಿತವನ್ನು ಕಣ್ಣು ತುಂಬಾ ನೋಡುವ ಪಂಚಾಯ್ತಿ ಕಛೇರಿಯಿದೆ. ಅಲ್ಲಿಯೂ ಕುರ್ಚಿಗಳಿವೆ ಅವುಗಳ ಮೇಲೆ ಸೂತ್ರದ ಗೊಂಬೆಗಳು ಹಲ್ಲು ಗಿಂಜುತ್ತಾ ಕೂತಿರುತ್ತವೆ. ಆಡಳಿತ ವಿಕೇಂದ್ರೀಕರಣವು ವಿಕಾರರೂಪ ತಾಳಿ ಆಕಾರ ವಿಲ್ಲದೆ ಆಡಳಿತವಿಲ್ಲದೆ ಯಾವುದೊ ಶಕ್ತಿಯ ಆಳ್ವಿಕೆಗೆ ಒಳಪಟ್ಟಿದೆ.

ಇಂಥಹ ಕಾಡಿನಂತಹ ಊರಲ್ಲಿ ಮನುಷ್ಯರು ಬದುಕಲು ಸಾಧ್ಯವೇ? ಒಂದು ವೇಳೆ ಇದ್ದರೆ ಅವರಗತಿ ಏನಾಗಿರಬಹುದು! **ಈ ಅಮಾನವೀಯ ಪರಿಸರದಲ್ಲಿ ಜಾತಿ, ಮತ, ಅಂತಸ್ತುಗಳಾಚೆ ನಿಂತ ಯುವಕ, ಯುವತಿಯರ ಮನಸ್ಸಿನ ಕನಸಿನ ಲೋಕದ ಸಹಜ ಆಕಾಂಕ್ಷೆಗಳು ಮೊಳಕೆ ಯೊಡೆದವು. ಸ್ನೇಹ, ಪ್ರೀತಿಗಳ ಮೆಟ್ಟಿಲೇರಿ ಕೂಡಿ ಬಾಳುವ ಹೂಡು ಹುಡುಕಿದವು, ಅಸಾಧ್ಯವೆಂದಾಗ ಊರು ಬಿಟ್ಟವು ತಮ್ಮದೇ ಆದ ಜಾಗ ಹುಡುಕಿದವು.**

ನಡೆದದ್ದು ಇಷ್ಟೆ, ಕೇಶವಪ್ಪ ಎಂಬ ಯುವಕ ಹೊನ್ನೂರಪ್ಪ ಎಂಬ ಶ್ರೀಮಂತರ ಮನೆಯಲ್ಲಿ ಟ್ರಾಕ್ಟರ್ ಡ್ರೈವರ್ ಆಗಿ ಕೆಲಸ ಮಾಡುತ್ತಿದ್ದ. ಹೊನ್ನೂರಪ್ಪನ ಮಗಳು ಚೆನ್ನವ್ವನಿಗೂ ಕೇಶವಪ್ಪನಿಗೂ ಸ್ನೇಹ ಬೆಳೆದು ಪ್ರೀತಿಗೆ ದಾರಿಯಾಗಿ ಹಾಗೇ ಅನೇಕ ದಿನಗಳು ಕಳೆದು ಕೊನೆಗೆ 1 ತಿಂಗಳಿನಿಂದ ಊರು ಬಿಟ್ಟು ಹೋದರು. ಹೊನ್ನೂರಪ್ಪ ಮತ್ತವನ ಸಂಗಡಿಗರು ಹುಡುಕಾಡಿದರು. ಕೊನೆಗೆ ಆಂಧ್ರದ ಕರ್ನೂಲ್‌ನಲ್ಲಿ ಸಿಕ್ಕಿದರು. ಮಗಳನ್ನು ಎಳೆದು ತಂದು ಭಯವೆಂಬ ಬೂತವನ್ನು ತುಂಬಿದರು, ಬಡಿದರು. ಹುಡುಗ ಕೇಶವಪ್ಪ ಏನಾದನೋ ಎಂಬುದು ಇಂದಿಗೂ ತಿಳಿದಿಲ್ಲ! ತನ್ನ ಮಗಳು ಹೀಗೆ ಮಾಡಲು ಕಾರಣ ಯಾರು ಎಂದು ವಿಚಾರಿಸಿದರು. ತನ್ನ ಮಗಳು ಓಡಾಡುತ್ತಿದ್ದ ಓಣಿ, ಯಾರ ಯಾರ ಜೊತೆಗೆ ಮಾತನಾಡುತ್ತಿದ್ದಳೊ ಆ ಜನರನ್ನು ಜಾಲಾಡಲು ಪ್ರಾರಂಭಿಸಿದರು. ದೌರ್ಜನ್ಯ ವೆಂದರೆ ಹೇಗಿರಬೇಕು ಎಂಬುದನ್ನು ತೋರಿಸಿದರು. ಈ ಘಟನೆಯಲ್ಲಿ ಇವರ ದೌರ್ಜನ್ಯಕ್ಕೆ ಸಿಕ್ಕ ಬಡಪಾಯಿಗಳು ಅಗಸರು. ಅವರ ಮನೆಗಳಿಗೆ ನುಗ್ಗಿ ಮನೆ ಮಂದಿಯನ್ನೆಲ್ಲಾ ಮೇಲೇಳದಂತೆ ಚೆನ್ನಾಗಿ ಥಳಿಸಿದರು, ತುಳಿದರು, ಒದ್ದರು, ಹಣ್ಣುಗಾಯಿ ನೀರುಗಾಯಿ ಮಾಡಿ ಬಿಸಾಕಿದರು. (ಈಗ ಅವರು ಪೂರ ಮನೆ ಖಾಲಿ ಮಾಡಿ ಎಲ್ಲಿಗೋ ಓಡಿ ಹೋಗಿದ್ದಾರೆ) **ಹೀಗೆ ಅನುಮಾನ ಬಂದ ಬಂದವರನ್ನು ಇದೇ ಗತಿಕಾಣಿಸುತ್ತಾ ಹೋದರು. ಕೊನೆಗೆ ಸಿಕ್ಕಿದ್ದು 35 ವರ್ಷದ 1 ಹೆಣ್ಣು 2 ಗಂಡು ಮಕ್ಕಳ ತಾಯಿ ಯರ್ರೆಮ್ಮ ಎಂಬ ಮಹಿಳೆ.** ಚಲುವಾದಿ ಜಾತಿಗೆ ಸೇರಿದ ಈ ಮಹಿಳೆ ತಾಡಪಲ್‌ಗಳನ್ನು ಹೊಲೆದು ಜೀವನ, ಸಾಗಿಸುತ್ತಾಳೆ ಮಕ್ಕಳು ಕೂಲಿ ಕೆಲಸ. ವಾಸಿಸಲು ಅಸಾಧ್ಯವಾದ ಮುರುಕು ಗುಡಿಸಲುಗಳಲ್ಲಿ ವಾಸ ಮಾಡುತ್ತಾಳೆ. ಹೆಣ್ಣು ಮಗಳನ್ನು ಪಕ್ಕದ ಊರಿಗೆ ಕೊಟ್ಟು ಮದುವೆ ಮಾಡಿದ್ದಾಳೆ. ಮಗಳ ಹೆರಿಗೆಗೆ ಊರಿಗೆ ಹೋದವಳು ಹಡವಣಿಗೆ ಮುಗಿಸಿ ಒಂದು ತಿಂಗಳ ಕೂಸಿನೊಂದಿಗೆ ವಣೇನೂರಿಗೆ ಬಂದಳು. ಒಂದು ತುಂಡು ಭೂಮಿಯೂ ಇಲ್ಲ. ಈಕೆಯ ಗುಡಿಸಲು ಮುಂದೆ ದೌರ್ಜನ್ಯದ ಗುಂಪು ಸೇರಿತು. ಬಾಯಿಗೆ ಬಂದಂತೆ ಬೈಯಲು ಪ್ರಾರಂಭಿಸಿತು. ಗುಂಪಿಗೆ ಹೆದರಿದ ಯರ್ರೆಮ್ಮ ತಪ್ಪಿಸಿಕೊಂಡಳು. ತಪ್ಪಿಸಿಕೊಂಡ ಈಕೆಯನ್ನು ಯಾವನೋ ಒಬ್ಬ ಮೋಟರ್ ಬೈಕ್‌ನಲ್ಲಿ 2 ಕಿ.ಮೀ ಬೆನ್ನಟ್ಟಿಕೊಂಡು ಹಳ್ಳಿಯ ಪಕ್ಕದಲ್ಲಿರುವ ಕಾಡಿನವರೆಗೂ ಹೋದ. ಸಿಕ್ಕವಳನ್ನು ಹಿಡಿದೆಳೆದು ತಂದ ಬಟ್ಟೆ ಬಿಚ್ಚಿ ಬೆತ್ತಲು ಮಾಡಿ ಲಂಗದ ಲಾಡಿ ಬರದಿದ್ದಕ್ಕೆ ಎರ್ರಾಬಿರ್ರಿ ಎಳೆದು ಲಾಡಿ ಹರಿದು ಸಂಪೂರ್ಣ ಬೆತ್ತಲೆ ಮಾಡಿ **100ಕ್ಕೂ ಹೆಚ್ಚು ಜನರನ್ನು ಅಣಿನೆರಸಿ ಮೆರವಣಿಗೆ ಹೊರಟ. ಬೆತ್ತಲೆಯಾದ ಯರ್ರೆಮ್ಮ ಯಾತನೆ ಪಟ್ಟು ಸಂಕಟದಿಂದ ಹೆಜ್ಜೆ ಇಟ್ಟಳು. ಹಿಂದೆ ತಲೆ ತಗ್ಗಿ ನಡೆದ ಗಂಡ, ನೋಡಲಾರದೆ ಹೆಗಲ ಮೇಲಿನ ಟವಲ್ ಕೊಟ್ಟ, ಟವಲ್‌ನ್ನು ಕಸಿದು ಆತನಿಗೆ ಒದ್ದರು. ತಾಯಿಯ ಸ್ಥಿತಿಯನ್ನು ನೋಡಲಾರದ ಮಗಳು ಸೀರೆ ಸೆರಗನ್ನು ಹರಿದು ತುಂಡು ಕೊಟ್ಟರೆ ಮಗಳನ್ನೂ ಚೆನ್ನಾಗಿ ಒದ್ದು ತುಂಡನ್ನೂ ಕಸಿದರು. ದಾರಿ ಕಾಣದ ಯರ್ರೆಮ್ಮ ತನ್ನ ಕೈಗಳಿಂದ ಮಾನ ಮುಚ್ಚಿಕೊಳ್ಳಲು ಯತ್ನಿಸಿದರೆ ಎರಡೂ ಕೈಗಳನ್ನು ಎಳೆದು ಬೆನ್ನ ಹಿಂದೆ ಕಟ್ಟಿದರು, ಬಡಿದರು.**

ಕಟ್ಟೆಯೇರಿಸಿ ಚಪ್ಪಲಿ ಹೊಡೆದರು

ಯರ್ರೆಮ್ಮನ ಚಿತ್ಕಾರ ಗುಂಪಿನ ಕೇಕೆ ಕೂಗುಗಳಲ್ಲಿ ಕರಗಿ ಹೋಯಿತು. ದೌರ್ಜನ್ಯದ ಗುಂಪು ಕೈಯಲ್ಲಿ ಬಡಿಗೆ, ಚೈನು, ಚಾಕು ಆಯುಧಗಳನ್ನು ಹಿಡಿದು "ಯಾವ ಗಣಮಕ್ಕಳಿದಿರಿ ಈಕೆನ ಕಾಪಾಡರೋ ಬರ್ರೆಲೇ" ಎಂದು ಕೇಕೆ ಹಾಕುತ್ತಾ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡುತ್ತ ಹೊರಟರು. ಅಲ್ಲಲ್ಲಿ ನಿಲ್ಲಿಸಿ ಕೇಕೆ ಹಾಕುತ್ತಾ ಸಾಗಿದರು, ಕೊನೆಗೆ ಆಂಜನೇಯ ಗುಡಿ ಕಟ್ಟೆಯ ಮೇಲೆ ಯರ್ರೆಮ್ಮನನ್ನು ಹತ್ತಿಸಿ ಕೇಕೆ ಹಾಕಿ ನಂತರ ಗ್ರಾಮ ಪಂಚಾಯ್ತಿಯ ಮುಂದೆ ಹೋಗಿ ಎಲ್ಲರೂ ಸುತ್ತಲು ನಿಂತು ಆಗಸ್ಟ್ 15 ರಂದು ಹಾರಿಸುವ ಭಾರತ ದೇಶದ ತ್ರಿವರ್ಣ **ಧ್ವಜದಸ್ಥಂಭದ ಕಟ್ಟೆ ಏರಲು ಬೆದರಿಸಿ, ಕಟ್ಟೆಹತ್ತಿಸಿದ ಗುಂಪು ತಮ್ಮ ಕಾಲ ಮೆಟ್ಟುಗಳನ್ನು ಕಿತ್ತು ರಪರಪನೇ ಹೊಡೆದು ಕೆಳಕ್ಕೆ ಕೆಡವಿ ತಕತಕನೇ** ಎಲ್ಲೆಂದರಲ್ಲೇ ಒದ್ದು ಹೊಟ್ಟೆ, ಗೆಜ್ಜೆ, ಎದೆಗಳಿಗೆ ಗುದ್ದಿ ಗುದ್ದಿ ಆಕೆಗೆ ಎಚ್ಚರ ತಪ್ಪುವವರೆಗೂ ಬಹಳ ಎಚ್ಚರದಿಂದ ಕಾರ್ಯ ನಡಸಿದರು. ಈ ನಡುವೆ ಸಂಕಟವನ್ನು ತಾಳಲಾರದ ಸಂಬಂಧಿಯೊಬ್ಬ ಬಳ್ಳಾರಿಯಲ್ಲಿ ನೆಚ್ಚಿಗೆ ಇರುವವರನ್ನು ಹುಡುಕಾಡಿ, ಕೊನೆಗೆ - 7 ಕಿ.ಮಿ. ದೂರವಿರುವ ಮೋಕಾ ಪೊಲೀಸ್ ಠಾಣೆಗೆ ದೂರು ನೀಡಿದ. ಪೊಲೀಸರು ಬಂದರು. ರಾತ್ರಿ 8 ಗಂಟೆಯಾಗಿತ್ತು ಆದರೆ ಆಕೆಗೆ ಅವರೇ ಬಟ್ಟೆಕೊಟ್ಟು "ಆಮೇಲೆ ಮಾತಾಡು. ಮೊದಲು ಆಯಮ್ಮಗೆ ಬಟ್ಟೆ ಕೊಡಿ, ಎಂದು ಹೇಳುವವರೆಗೂ ಈ ಘನಕಾರ್ಯ ಜರುಗಿತು. ಸಂಜೆ 4 ಗಂಟೆಗೆ ಪ್ರಾರಂಭವಾದ ಈ ಬರ್ಬರ ಘಟನೆ ರಾತ್ರಿ 8 ಗಂಟೆಯ ತನಕ ಜರುಗಿತು.

ಬಲಿತುಕೊಂಡಿರುವ ಜಮೀನ್ದಾರರು

150 ಕುರಿಗಳ ಮಂದೆ, ಬಡ್ಡಿ ವ್ಯವಹಾರಗಾರ, 70 ಎಕ್ರೆ 11 ತಿಂಗಳು ನಿರಾವರಿ ಜಮೀನನ ಒಡೆಯ ಸಿವಯ್ಯ, ಬಡ್ಡಿ ವ್ಯಾಪಾರಸ್ತ, ಕಾಂಟ್ರಾಕ್ಟರ್ ಕೆಲಸ, 32 ಎಕ್ರೆ 11 ತಿಂಗಳು ನೀರಾವರಿ ಜಮೀನಿನ ಒಡೆಯ ಹಾಗೂ ಟ್ರಾಕ್ಟರ್ ಮೂಲಕ, ಪ್ರೇಮ ಪ್ರಕರಣದಲ್ಲಿ ಸಿಲುಕಿದ ಹುಡಿಗಿಯ ತಂದೆ ಹೊನ್ನೂರಪ್ಪ. 8 ಎಕ್ರೆ 11 ತಿಂಗಳು ನೀರಾವರಿ ಜಮೀನಿನ ಒಡೆಯ, ಮೇಲಿನವರ ಬಲಗೈ ಭಂಟರು ಗಳಾದ ಇನ್ನೊಬ್ಬ ಹೊನ್ನೂರಪ್ಪ ಹಾಗೂ ಈಶ್ವರಪ್ಪ ಇವರೊಟ್ಟಿಗೆ ತಮ್ಮ ಗಂಡಂದಿರನ್ನು ಸರಿಗಟ್ಟಿದ ಹೊನ್ನೂರಪ್ಪನ ಹೆಂಡತಿ ಚಂದ್ರಮ್ಮ ಈಶ್ವರಪ್ಪನ ಹೆಂಡತಿ ಪಾರ್ವತಿ ಮತ್ತು ತಂಗಿ ಶಿವಲಿಂಗಮ್ಮ ಈ ಘನ ಕಾರ್ಯದ ಮುಖಂಡತ್ವವನ್ನು ವಹಿಸಿದ್ದರು.



ಕಾಡುಮೃಗಗಳಿಗೆ ಅರ್ಥವಾದೀತು ಹೇಗೆ?

ಈ ಕಾಡು ಮೃಗಗಳು ಭವ್ಯ ಬಂಗಲೆಗಳಲ್ಲಿ ವಾಸಿಸುತ್ತವೆ. ಜಣಜಣ ಹಣದ ಸದಾ ಸದ್ದಿನ ಮತ್ತಿನಲ್ಲಿ ಬೀಗಿ ಗ್ರಾಮವನ್ನೇ ತಮ್ಮ ಬಂದೋಬಸ್ತಿನಲ್ಲಿರಿಸಿ ತಮ್ಮಿಷ್ಟಕ್ಕೆ ತಕ್ಕಂತೆ ಜನರನ್ನು ಸುಲಿದು ಸಿಪ್ಪೆಮಾಡಿ, ಸಿಪ್ಪೆಗಳನ್ನು ತಿಪ್ಪೆಗೆ ತಳ್ಳಿ ತಮ್ಮ ಕೇವಲಿಗೆ ಹಸನಾದ ಗೊಬ್ಬರವಾಗಿಸಿಕೊಂಡಿದ್ದಾರೆ. ಕ್ರೂರವಾಗಿ ಬದುಕುವ ಕ್ರೂರ ಮೃಗಗಳಿಗೆ ಜಾತಿ, ಮತ, ಮಂತಶ್ತುಗಳಾಚೆ ಯುವಕಯುವತಿಯರಲ್ಲಿ ಅರಳಿದ ಪ್ರೀತಿ ಎಂಬ ಬಳ್ಳಿ ಇವರಿಗೆ ಹೆಬ್ಬಾವಾಗಿ ಕಾಣದೆ ಇದ್ದೀತೆ?

ಬಜಾರ್‌ಗುಂಟಾ ಬಡುಕೊಂತ, ಕೇಕೆ ಹೊಡಕಂತ ಮೆರವಣಿಗೆ ಮಾಡಿದ್ರು ಸಾರ್...

ನನ್ನ ಬಟ್ಟೆಗಳನ್ನೆಲ್ಲಾ ಬಿಚ್ಚಿ, ಹರಿದು ಬಿಸಾಡಿ, ಬಜಾರ್‌ಗುಂಟಾ ಬಡಕಂತ, ಕೇಕೆ ಹೊಡಕೊಂತ ಮೆರವಣಿಗೆ ಮಾಡಿದ್ರು ಸಾರ್. ನಡು ಬಜಾರಿನಲ್ಲಿ ಸೀರೆ, ಕುಪ್ಪಸ ಎಲ್ಲಾ ಬಿಚ್ಚಿಸಿ ಬೆತ್ತಲೆ ಮಾಡಿ ಎಳೆದಾಡುತ್ತಾ ಕರೆದು ಕೊಂಡು ಹೋಗುತ್ತಿದ್ದಾಗ, ಮನದ ನೋವು ತಾಳಲಾರದೆ ಮಾನಮುಚ್ಚಿಕೊಳ್ಳಲು ಒದ್ದಾಡುತ್ತಾ ಹೋಗುವಂತ ಪರಿಸ್ಥಿತಿ ಬಂದೊದಗಿತ್ತು. ಇಡೀ ಊರಿನಲ್ಲಿ ಅಷ್ಟು ಜನರು ಇದ್ದರೂ ಯಾಕಪ್ಪಾ ಈ ರೀತಿ ಮಾಡುತ್ತೀರಾ? ಎಂದು ಕೇಳುವವರು ಒಬ್ಬರಾದರೂ ನನ್ನ ಪಾಲಿಗೆ ಸಿಕ್ಕಲಿಲ್ಲ ಸಾರ್, ಆ ಸಂದರ್ಭದಲ್ಲಿ ಗಂಡುಮಕ್ಕಳ ಕೈಗಳ ರೆಟ್ಟೆಗಳನ್ನು ಹಿಡಿದು, ತಲೆಯಲ್ಲಿನ ಕೂದಲು ಹಿಡಿದು ಬಡಿಯುತ್ತಾ, ಹೊಡೆಯುತ್ತಾ ಎಳೆದೊಯ್ದರು. ಒಟ್ಟಿನಲ್ಲಿ ಹೇಳಬಾರದು ಆ ತಿಪ್ಪಲ.

...ಮೆರವಣಿಗೆ

ರಾಜಕೀಯ ನೆಂಟಸ್ತಿಕೆ

ಇವರು ಸಾಮಾನ್ಯರಲ್ಲ 1982ಕ್ಕಿಂತ ಮುಂಚೆ ಕಾಂಗ್ರೆಸ್ ನಾಯಕರಾಗಿ ನಂತರ ಜನತಾ ಪಾರ್ಟಿಗೆ ಸೇರಿ. ನಂತರ ಬಿಜೆಪಿಗೆ ನೆಂಟರಾಗಿ ಕೊನೆಗೆ ಈ ಎಲ್ಲರೂ ಮಾತಾಡಿಕೊಂಡು ಎಲ್ಲಾ ಪಾರ್ಟಿಯಲ್ಲೂ ನಾವೇ ಇರೋಣವೆಂದು ಇಬ್ಬರು ಕಾಂಗ್ರೆಸ್, ಇಬ್ಬರು ಬಿಜೆಪಿ, ಇನ್ನಿಬ್ಬರು ಜೆ.ಡಿಯು(ಯು) ಹಾಗೂ ಜೆ.ಡಿ (ಎಸ್)ಗಳಿಗೆ ನೆಂಟಸ್ತಿಕೆ ಬೆಳೆಸಿ ಜೆ.ಡಿ. (ಎಸ್)ನ ಮುಖಂಡ ಶಿವರಾಮರೆಡ್ಡಿಯವರಿಗೂ ಬೇಕಾಗಿ, ಹಾಲಿ ಶಾಸಕ, ಕಾಂಗ್ರೆನ ಅಧ್ಯಕ್ಷ ಅಲ್ಲಂ ವೀರಭದ್ರಪ್ಪ ಧಣಿಗೂ ಬಲಗೈ ಭಂಟರಾಗಿ ಬಳ್ಳಾರಿ ಬಿಜೆಪಿ ನಾಯಕ ಶ್ರೀರಾಮುಲು ಮುಂತಾದವರಿಗೆ ಮಾನ್ಯರಾಗಿ ಮೆರೆಯುತ್ತಿ ದ್ದಾರೆ. ಎಲ್ಲರಿಗೂ ಬೇಕಾದ ಇವರ ಕಾರ್ಯಕಲಾಪಗಳಿಗೆ ಯಾರು ತಾನೆ ಅಸ್ತು ಎನ್ನುವುದಿಲ್ಲ. ನೀವು ಏನಾದ್ರೂ ಮಾಡಿ, ನಮ್ಮಕೈ ಹಿಡಿಯಿರಿ ಎನ್ನುವ ಬಲ ಪಂಥೀಯ ರಾಜಕಾರಣಿಗಳಿಗೆ ಇಡೀ ಗ್ರಾಮವನ್ನೇ ಓಟು ಬ್ಯಾಂಕ್ ಮಾಡಿಸುವ ಮಹಾನ್ ಯಂತ್ರಗಳಲ್ಲವೇ ಇವರು.

ಜಮೀನ್ದಾರರದ್ದೇ ನಂಟು

ಇವರ ವೈಯುಕ್ತಿ ಸಂಬಂಧಗಳೂ ಬೆಳೆದಿರುವುದು ಬಾರಿ ಕುಳ ಗಳೊಡನೆಯೇ. ವಣೆನೂರಿನ ಸುತ್ತಮುತ್ತ ವಿರುವ ದಮ್ಮೂರು ಮುಂತಾದ ಹಳ್ಳಿಗಳಲ್ಲಿ ಭಾರಿ ಭೂಮಾಲಿಕರ ಮನೆಗಳಲ್ಲಿ ಇವರ ಬೀಗರಾದ ದರೂರಿನ ನಾಗಪ್ಪ ಭಾರಿ ಭೂಮಾಲಿಕ, ಬಳ್ಳಾರಿ ಪಟ್ಟಣಗಳಲ್ಲಿ ಭಾರಿ ಬಂಡವಾಳದಾರರು ಇವರ ನೆಂಟರೆ ವಕೀಲರು, ಜಡ್ಜಗಳೇ ಸ್ನೇಹಿತರು. ನಾವು ಕೆಲವರನ್ನು ಭೇಟಿಯಾದಾಗ ದೌರ್ಜನ್ಯಕ್ಕೆ ಹೆಸರಾದ ಈ ಮಹಾ ಮಹಿಮರ ಕುಕೃತ್ಯಗಳ ಕೆಲವು ಸಾಂಪಲ್‌ಗಳನ್ನು ವಿವರಿಸಿದರು.

ದೌರ್ಜನ್ಯಗಳ ಸರಮಾಲೆ

ಐದಾರು ತಿಂಗಳ ಹಿಂದೆ ಒಬ್ಬ ಮುಸ್ಲಿಂ ಯುವತಿಯನ್ನು ಈ ಹೇಮಾ ಹೇಮಿಗಳಿಗೆ ಸೇರಿದವರ ಪೈಕಿ ರೇಪ್ ಮಾಡಿದ ಕೇಸು ದಾಖಲಾಗಿಲಿಲ್ಲ. ನಂತರ ಜಂಗಮರ



ಮಗಳೊಂದಿಗೆ ಎರ್ರೆಮ್ಮ

ಯುವತಿಯನ್ನು ಕೆಡಿಸಿದರು, ಎಲ್ಲರಿಗೂ ತಿಳಿಯುವ ಹಾಗೆ. ಆದರೆ ಯಾರೂ ಚಕಾರ ಎತ್ತಲಿಲ್ಲ, ಕೇಸಾಗಲಿಲ್ಲ, ಈ ಗುಂಪಿಗೆ ಸೇರಿದ ಗಂಗಾಧರ ಎಂಬುವವನು ಈರಮ್ಮ ಎಂಬ ಮಹಿಳೆ (ಒಂದು ಮಗಳ ತಾಯಿ) ಬಲಾತ್ಕಾರವಾಗಿ ಎಗರಿಸಿಕೊಂಡು ಹೋದ, ಕೇಸಾಗಲಿಲ್ಲ, ಇತ್ತೀಚೆಗೆ ಇನ್ನೊಬ್ಬ ಈ ವೀರರ ಕೃಪಕಟಾಕ್ಷ ಪಡೆದು ವೀರಶೈವರ ಹುಡುಗಿಯನ್ನು ಕೆಡಿಸಿ, ಕಾಯಂ ಆಗಿಸಿಕೊಂಡ. ದೌರ್ಜನ್ಯಕ್ಕೆ ಹೆದರಿದ ಮಹಿಳೆಯ ತಂದೆ ಮನೆಮುಂದೆ ನಿಂತು ತಲೆ ಮೇಲೆ ನೀರು ಸುರಿದುಕೊಂಡು 'ನೀವೇ ದೊಡ್ಡವರಪ್ಪಾ" ಎಂದು ಕೈಮುಗಿದ ಮಗಳು ಸತ್ತಳೆಂದು. ರಾತ್ರಿ ಗಂಡನ ಜೊತೆ ಮಲಗಿದ್ದ ನಂಬೆರು ಮಹಿಳೆಯನ್ನು ಅನಾಮತ್ತಾಗಿ ಎತ್ತಿಕೊಂಡು ಅಲ್ಲೇ ಗಂಡನ ಎದುರಲ್ಲೇ ರೇಪ್ ಮಾಡಿದರು. ಕೇಸು ದಾಖಲಾಯಿತಾದರೂ "ಏನೋ ಕುಡಿದು ಗಲಾಟೆ" ಕೇಸ್ ಎಂದರು ಪೊಲೀಸರು.

ಪುಟ 8 ಕ್ಕೆ

ಕೃಷ್ಣಾ ಖರ್ಗೆಯವರೇ ಮನಸ್ಸಿನಲ್ಲೇನಿದೆ ಹೇಳಿಬಿಡಿ

- **ಮೊಕದ್ದಮೆ ಹೂಡಲು ಸಾರ್ವಜನಿಕ ಶೋಧನೆಯಲ್ಲಿ ಗೃಹಸಚಿವರು, ಚಿಟಿಕೆ ಹೊಡೆವ ಪೋಲೀಸರು**
- **ಗಾಳಿಯಲ್ಲೇ ತೇಲಿಹೋದ ನಾಯಕರು**
- **ಜಾತಿಯ ಜಾಲ ಬಲಗೊಳಿಸುತ್ತಿರುವವರು**
- **ಅಘಾತದಲ್ಲೇ ಆಂಕ್ರದಿಸುತ್ತಿರುವ ಎರೆಮ್ಮ...**

ಈಗ ಆ ಕ್ರಿಮಿನಲುಗಳ ಮೇಲೆ ಗೂಂಡಾ ಕಾಯ್ದೆ ಬಳಸಬೇಕೆ ಅಥವಾ ಇನ್ನೂ ಸಮನಾದ ಉಗ್ರ ಕಾನೂನು ಬಳಶಬೇಕೋ ಎಂಬ ಬಗ್ಗೆ ಗೃಹಸಚಿವ ಖರ್ಗೆ ವಿಚಾರ ಮಂಥನ ನಡೆಸಿದ್ದಾರೆ.

ಸಚಿವ ಮಲ್ಲಿಕಾರ್ಜುನ ಖರ್ಗೆ ಈಗಲೂ ಹೇಳುತ್ತಾರೆ "ಇಂತಹ ಘಟನೆಗಳು ನಡೆದಾಗ ಆಯಾ ಜಿಲ್ಲೆಗಳ ಪೋಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ಹಾಗೂ ಜಿಲ್ಲಾಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದರು. ಕಂಬಾಲಪಲ್ಲಿಯಲ್ಲಿ ದಲಿತರ ಮಾರಣಹೋಮ ನಡೆದಾಗಲೂ ಇದೇ ಗೃಹ ಸಚಿವರು ಮೇಲಿನಂತೆ ಗುಡುಗಿದ್ದರು. ವರುಷಗಳೆರಡು ಕಳೆದುಹೋದವು. ವಣೇನೂರು ಘಟನೆಗೂ ಅದೇ ಅವಾಜ್. ಬಳ್ಳಾರಿ ಎಸ್‌ಪಿ, ಡಿ.ಸಿ., ಮಲಗುವ, ಓಡಾಡುವ ಅವರ ಮನೆ-ಕಛೇರಿಯಿಂದ ವಣೇನೂರು ಇರುವುದು ಕೇವಲ 25 ಕಿ.ಮಿ. ಈ ಕೃತ್ಯ ನಡೆದ ವಿಷಯ ತಿಳಿದುಕೊಂಡ ಮೇಲು ಎಸ್‌ಪಿಯಾಗಲೀ, ಡಿಸಿಯಾಗಲೀ, ಅಲ್ಲಿಗೆ ತಕ್ಷಣ ಧಾವಿಸಲಿಲ್ಲ. ಎಂತಹ ಮೊಕ್ಕದ್ದಮೆ ಹೂಡಲಾಗಿದೆಯೆಂದು ಪರಿಶೀಲಿಸಲಿಲ್ಲ. ಇಂತಹ ಹೊಣೆಗೇಡಿಗಳ ಮೇಲೆ ಇನ್ನೂ ಯಾಕೆ ಸರ್ಕಾರ ಕ್ರಮವಹಿಸಿಲ್ಲ, ಇಂತಹ ಅಧಿಕಾರಿಗಳ ಕೈಯಲ್ಲಿ ಜಿಲ್ಲೆಯ ರಕ್ಷಣೆ-ಕಾನೂನು ಸುವ್ಯವಸ್ಥೆ ಸುರಕ್ಷಿತವೇ? **ಖರ್ಗೆಯವರಿಗೆ ಅವರ ಸರ್ಕಾರಕ್ಕೆ ನಿಜವಾಗಿಯೂ ಮನಸ್ಸಿನಲ್ಲೇನಿದೆ. ದಯವಿಟ್ಟು ಹೇಳಿಬಿಡಿ ಖರ್ಗೆಯವರೇ ನೀವು ದೌರ್ಜನ್ಯಕ್ಕೀಡಾದ ದಲಿತರ ಕಡೆಗೋ, ಅಥವಾ ದಂಡಧಾರಿ ಜಮೀನ್ದಾರರ ಕಡೆಗೋ.**

ಇನ್ನು ನಮ್ಮ ಭಾಷೆ ಬಳಸಬೇಕಾಗುತ್ತದೆ ಎಂದು ಗದರಿದ ಪೋಲೀಸ್ ಅಧಿಕಾರಿ

★ ★ ★

ಆ ಮಹಿಳೆಗೆ ಧೈರ್ಯ, ಸಾಂತ್ವನ ಹೇಳಲು, ಆಕೆ ದಾಖಲಾಗಿರುವ ಬಳ್ಳಾರಿ ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ನೋಡಲೆಂದು ಸಿಪಿಐ(ಎಂ) ನ ರಾಜ್ಯ ನಿಯೋಗವೊಂದು 29 ರ ಸಂಜೆ ತೆರಳಿತು. ಈ ಭೇಟಿಗೆ ಕ್ರೈಂ ಬ್ರಾಂಚ್ ಪೋಲೀಸ್ ಇನ್‌ಸ್ಪೆಕ್ಟರ್ ವರದರಾಜು ನಿರಾಕರಿಸಿದರು. ಹೀಗೇಕೆ ಎಂದು ವಿಚಾರಿಸಿದರೆ "ಇನ್ನು ಸಾಕು.. ನಮ್ಮ ಭಾಷೆಯಲ್ಲಿ ನಿಮಗೆ ಉತ್ತರಿಸಬೇಕಾಗುತ್ತದೆ' ಎಂದು ಗುಟುರು ಹಾಕಿದ. ಇದು ಸಂಗಾತಿಗಳನ್ನು ಕೆರಳಿಸಿತು. ಧರಣಿ ನಡೆಸುವುದಾಗಿ ಪ್ರಕಟಿಸಲಾಯಿತು. ಉಗ್ರ ಪ್ರತಿಭಟನೆ ಆರಂಭವಾಯಿತು. ಜನರೂ ಕೂಡಿಕೊಂಡರು. ಕೊನೆಗೆ ಇನ್ಸ್‌ಪೆಕ್ಟರ್ ಬಗ್ಗಬೇಕಾಯಿತು. ತನ್ನನ್ನು ಕ್ಷಮಿಸಬೇಕೆಂದು ಕೋರಿದ. ಆದರೆ ಪ್ರತಿಭಟನೆ ನಿಲ್ಲಲಿಲ್ಲ. ಮೆಡಿಕಲ್ ಸೂಪರಿಟೆಂಡೆಂಟ್‌ನತ್ತ ನಿಯೋಗ ಹೊರಟಿತು. ಕೊನೆಗೆ ಇನ್ನೊಬ್ಬ ಪೋಲೀಸ್ ಅಧಿಕಾರಿ ಮಧ್ಯ ಪ್ರವೇಶಿಸಿ ಮಹಿಳೆಯ ಭೇಟಿಗೆ ಅವಕಾಶ ನೀಡಿದ.

ಮಾನಸಿಕ ಅಘಾತ, ದೈಹಿಕ ಚಿತ್ರಹಿಂಸೆಯಲ್ಲಿ ಎರ್ರೆಮ್ಮ

ದೌರ್ಜನ್ಯಕ್ಕೀಡಾದ ದಲಿತ ಮಹಿಳೆ ಎರೆಮ್ಮ ಐಸಿಯುವಿನಲ್ಲಿ ಮಂಚದ ಮೇಲೆ ಮುದುರಿ ಮಲಗಿದ್ದಳು. ನಮ್ಮನ್ನು ಕಂಡು ಹೌಹಾರಿದಳು. "ಅಯ್ಯೋ.. ನನ್ನು ಮತ್ತೇ ಬೆತ್ತಲೆ ಮಾಡ್ತಾರೆ... ನನ್ನನ್ಯಾಕೆ ಉಳಿಸಿದಿರೊ. ಕಡಿದು ಪುಟ್ಟಿಗೆ ತುಂಬ್ರೀ.. ಯಪ್ಪಾ ನನ್ನ ಮಕ್ಕಳು, ಯಂಗಿದಾರೆ... ಅವರ್ನ ಏನಾರ ಮಾಡಿ ಉಳಿಸ್ರಿ... ಪೋಲೀಸಪ್ಪ ನೀನು ಫೋನ್ ಮಾಡು. ಅವರ್ನ ಕರ್ರು... ನಾನಿನ್ಯಾಕೆ ಬದುಕೇನಾ..." ಮಾತು ಮಾತಿಗೂ ಆಕೆ ಕಂಠದಿಂದ ದುಃಖ ಉಮ್ಮಳಿಸುತ್ತಿತು. ಜೊತೆಯಲ್ಲಿದ್ದ ಒಬ್ಬ ಮಗಳೂ, ಸಂಬಂಧಿ ಹೆಣ್ಣು ಮಕ್ಕಳು ಬಿಕ್ಕಿ ಬಿಕ್ಕಿ ಅತ್ತರು. 'ನಮಗ್ಯಾರು ಸಾರು.. ಇನ್ನೆಂಗೆ ಬದುಕೋದು..' ನಾವು ಆ ರಾಕ್ಷಸರ ಕೃತ್ಯ ಖಂಡಿಸಿದೆವು. ನಾವು ನಿಮ್ಮವರೇ ನಿಮ್ಮೊಂದಿಗೆ ಇದ್ದೇವೆ, ಅದ್ಯಾವನು ಬರ್ತಾನೆ ನೋಡೋಣ, ಜಿಲ್ಲೆ-ರಾಜ್ಯದಲ್ಲಿ ನಿನಗಾದ ಅನ್ಯಾಯದ ವಿರುದ್ಧ ಹೋರಾಡ್ತೀವಿ. ನಿಮ್ಮೂರಿಗೆ ಹೋಗಿ ಸಾವಿರಾರು ಜನ ಅವರನ್ನು ಖಂಡಿಸಿ ನಿಮಗೆ ಬೆಂಬಲಿಸ್ತೀವಿ. ನಿಮ್ಮ ಮನೆಗೂ ಹೋಗಿ ಬಂದೇವಿ ಮುಂತಾಗಿ ಸಾಂತ್ವನ ಹೇಳಿದಾಗ ನಮಗೆ ಕೈ ಮುಗಿದು, ಕೈ ಹಿಡಿದು ಅಷ್ಟು ಮಾಡ್ರೀ.... ಎಂದು ಗೋಳಾಡಿ ಅತ್ತರು. ಆಕೆ ತೀವ್ರತರದ ಮಾನಸಿಕ ಅಘಾತಕ್ಕೆ, ದೈಹಿಕ ಹಿಂಸೆಗೆ ಒಳಗಾಗಿ ನರಳುತ್ತಿರುವುದು ಕಂಡುಬಂತು. ಆತ್ಮಹತ್ಯೆಯ ಯತ್ನಗಳು ತಿಳಿದವು. ಇದು ಹೃದಯ ಹಿಂಡುವ ಆಕ್ರೋಶ ಸ್ಫೋಟಿಸುವ ದೃಶ್ಯ.

★ ★ ★

ಇನ್ನೇನು ಸೋನಿಯಾಗಾಂಧಿ ಬರಲಿದ್ದಾರೆ. ಅವರ ಬೆನ್ನ ಹಿಂದೆಯೇ ಸುಷ್ಮಾ ಸ್ವರಾಜ್ ಇಳಿಯಲಿದ್ದಾರೆ. ಅದಕ್ಕೆ ಮೊದಲು ಮುಖ್ಯಮಂತ್ರಿಗಳ ಭೇಟಿ. ಬಿಜೆಪಿಗಳ ಖಂಡನೆ.... ದಿನವೊಂದು ಉರುಳಿತು... ಸೋನಿಯಾ ಬರುವುದಿಲ್ಲ ಎಂದು ಸಾಂತ್ವನ ಸಂದೇಶ ರವಾನಿಸಿದ್ದಾಳೆಂದು ಕಾಂಗ್ರೆಸ್ ರಾಜ್ಯ ಅಧ್ಯಕ್ಷ ಅಲ್ಲಂ ತಿಳಿಸಿದರು. ಮುಖ್ಯಮಂತ್ರಿಗಳು ಪ್ರವಾಸ ಎರಡು ಬಾರಿ ರದ್ದಾಗಿ, ಖರ್ಗೆಯವರು ಕಾಲಿಡಲಿದ್ದಾರೆ ಎಂದೂ ಪ್ರಕಟಿಸಲಾಯಿತು. ಸುಷ್ಮಾಳ ಪ್ರಸ್ತಾಪವೇ ಹಾರಿಹೋಯಿತು. ಇವರೆಲ್ಲರಿಗೂ ಎಷ್ಟೊಂದು ಕೆಲಸಗಳು. ಗಣ್ಯಾತೀಗಣ್ಯರು, ಮಹಾ ನಾಯಕರು..... ಕನಿಷ್ಟ ಮುಖ್ಯಮಂತ್ರಿ



ಜಮೀನ್ದಾರರ ಬಡಿಗೆ ಮೇಲೆ ಪ್ರೀತಿ, ದಲಿತರ ಓಟಿಗೆ ಇಷ್ಟ. ಹಾಜರಾತಿ ಹಾಕಿ ಹೊರಟೇಹೋದ ಅಲ್ಲಂ ಧಣಿ

ಕೃಷ್ಣನಾದರೂ ಭೇಟಿ ನೀಡಬೇಕಿತ್ತು. ಇದು ಅವರಿಗೆಲ್ಲಾ ಯಃಕಶ್ಚಿತ. ಅವರಿಗೆ ಎಂತಹ ಕಡು ತಿರಸ್ಕಾರ, ನೀಚ ನಿರ್ಧಾರ.

★ ★ ★

ಇದು ಅಂತರ್ಜಾತಿಯ ಪ್ರೇಮ ಪ್ರಶ್ನೆ. ಯುವ ಪ್ರೇಮಿಗಳಾದ ಕೇಶಪ್ಪ, ಚಿನ್ನಮ್ಮ(ಮರಿಯಮ್ಮ) ಒಲವು ಅರಳಲು ಹಣ, ಅಂತಸ್ತು ಅಡ್ಡಬರಲಿಲ್ಲ. ಕೂಡಿ ಬಾಳುವ ಕನಸು ಕಂಡ ಹರೆಯದ ಜೀವಗಳಿಗೆ, ಸ್ಥಾಪಿತ ಹಿತಾಸಕ್ತಿಗಳು ಅಡ್ಡ ಬಂದರು. ತಮ್ಮದೇ ಶ್ರೇಷ್ಟ ಕುಲವೆಂದು, ಈ ಸಹಜ ಮಾನವ ಸಂಬಂಧಗಳನ್ನು ಹೂತುಹಾಕುವುದಾಗಿ ಹೂಂಕರಿಸಿದರು. ಸ್ವಾತಂತ್ರ್ಯಬಂದು, ಸೆಕ್ಯುಲರ್ ಸಂವಿಧಾನ ಅಂಗೀಕರಿಸಿ 50 ವರ್ಷಗಳು ದಾಟಿದರೂ ಜಾತೀಯ ಮನೋಭಾವ, ಕಡು ದ್ವೇಷ ಇನ್ನೂ ಎಷ್ಟೊಂದು ಹೆಡೆಯಾಡುತ್ತಿದೆ ಎಂಬುದು ಕಾಣುತ್ತದೆ. ಅದು ಈ ದಿನಗಳಲ್ಲಿ ವಿಪರೀತವಾಗಿ ಕ್ರೋಢೀಕರಣಗೊಳ್ಳುತ್ತಿದೆ.

ಅಲ್ಲಂ ವೀರಭದ್ರಪ್ಪನವರಿಗೆ ಸನ್ಮಾನ ಮಾಡಿ ಫೋಟೋ ತೆಗೆಸಿಕೊಂಡ ಇಂತಹವರನ್ನು ರಕ್ಷಿಸಲು ಕಾಂಗ್ರೆಸ್ ನಾಯಕಗಣ ಮಾತ್ರವಲ್ಲ... ವಾಲ್ಮೀಕಿ ಎಂಬ ಕಾರಣಕ್ಕಾಗಿ ಬಳ್ಳಾರಿ ನಗರದ ಬಿಜೆಪಿ ನಾಯಕರಾದ ಶ್ರೀರಾಮುಲು, ಮುಂತಾದವರು ಸಹಾಯ ಹಸ್ತ ನೀಡಿ, ಅವರನ್ನು ರಕ್ಷಿಸಲು ಮಾರ್ಗೋಪಾಯದ ಮಾಸ್ಟರ್ ಪ್ಲಾನ್ ರೂಪಿಸಿದ್ದಾರಂತೆ. ಅವರ ಹಿಡಿತದಲ್ಲಿರುವ ಪತ್ರಿಕೆ, ಟಿ.ವಿ.ಚಾನಲ್‌ಗಳಲ್ಲಿ ಈ ಸುದ್ದಿಯನ್ನು 'ಬ್ಲಾಕ್‌ಔಟ್' ಮಾಡಿದ್ದಾರೆ. ಜನತಾದಳ(ಎಸ್) ನ ಒಂದು ಕಾಲಬಾಹೀರವಾದ ನಾಯಕರ ತಂಡ ಮೌನವಹಿಸಿ 'ಯಾಕಿದ್ದೀತಪ್ಪಾ' ಎಂದು ಊರುಬಿಟ್ಟು ಪರಸ್ಥಳಕ್ಕೆ ಹೋಗಿದ್ದಾರೆ. ಜೆ.ಡಿ(ಯು) ನವರದ್ದು ಅಷ್ಟೇ.

★ ★ ★

ಈ ಘಟನೆಯನ್ನು ಎರಡು ಜಾತಿಗಳ ನಡುವಿನ ಘರ್ಷಣೆ ಎಂದು ಪೂರಾ ಪೂರಾ ಬಂದು ಜಾತಿ ವಿರುದ್ಧ ಇನ್ನೊಂದು ಜಾತಿಯವ ರನ್ನು ಎತ್ತಿಕಟ್ಟಲು ಹಲವರು ಬಯಸುತ್ತಿದ್ದಾರೆ. ವಾಲ್ಮಿಕಿ ಜನಾಂಗವನ್ನು ಎಸ್‌ಟಿ ಪಟ್ಟಿಯಿಂದ ಬಿಡಬೇಕೆಂದು ಬಿ.ಎಸ್.ಪಿ.ಯ ದಲಿತ ಮುಖಂಡರು ಹೇಳುತ್ತಿದ್ದಾರೆ. ಇಂತಹ ಬೇಡಿಕೆ, ವ್ಯಾಖ್ಯಾನಗಳು ಈಗಿನ ಪರಿಸ್ಥಿತಿಯನ್ನು ಹಾದಿ ತಪ್ಪಿಸಬಲ್ಲದು ಮತ್ತು ಆರೋಪಿಗಳಿಗೆ ಬಲ ತರಬಲ್ಲದು. ಶೋಷಿತರ ನಡುವೆ ಒಡಕು ಹುಟ್ಟಿಸುವುದು. ಸರ್ಕಾರವೂ ಕೂಡ ಅದು ಎಸ್‌ಸಿ/ಎಸ್‌ಟಿ ಗಳ ನಡುವಿನ ಜಗಳ - ನಾವೇನು ಮಾಡೋದು ಎಂದು ಹತಾಶೆ ನಟಿಸುತ್ತಿದೆ. ಈ ಬರ್ಬರ ಘಟನೆಯನ್ನು ಎಲ್ಲಾ ಪ್ರಜ್ಞಾವಂತರು, ಮನುಷ್ಯರು ಉಗ್ರವಾಗಿ ಖಂಡಿಸಬೇಕು. ಇದಕ್ಕೆ ಕಾರಣವಾಗಿರುವ ಭೂ ಮಾಲಿಕ ಪದ್ಧತಿ, ಬಂಡವಾಳಶಾಹಿ ವ್ಯವಸ್ಥೆ ನಾಶಕ್ಕೆ ಇವುಗಳನ್ನು ರಕ್ಷಿಸುತ್ತಿರುವ ಕೇಂದ್ರ, ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಹೋರಾಡಬೇಕು.

- ಎಸ್.ವೈ.ಜಿ

........ವಣೇನೂರಿನ ಬೆತ್ತಲೆ ಪ್ರಕರಣ

ಪುಟ 7 ರಿಂದ

'ಹೇಳುತ್ತಾ.ಹೊದರೆ ಬಾಳಾ ಅದಾವ್ರೀ' ಎನ್ನುತ್ತಾರೆ ಜನ. ರೇಪ್ ಕೇಸು ಗಲಾಟ ಕೇಸ್ ಎಂದು ಬರೆಯಲು ಮಹಮದ್ ಗೌಸ್ ಎಂಬುವ ಸಬ್ ಇನ್ಸ್‌ಪೆಕ್ಟರ್ 10,000 ನುಂಗಿದ ಎಂದು ಜನ ಹೇಳುತ್ತಾರೆ.

ಹೀಗೆ ಮುಚ್ಚಿಹೊದ ಕಥೆಗಳನ್ನು ಕೇಳುತ್ತಾ ಹೋದರೆ, ಈಶ್ವರಗೌಡ ಎಂಬ ರೈತರು ಸಿಕ್ಕರು.

ತಂಡ : "ಅಲ್ಲಾ ಯಜಮಾನ್ರೆ ನಿಮ್ಮೂರ ಒಬ್ಬ ಹೆಣ್ಣುಮಗಳ್ನ ಹಿಂಗೆ ಮೆರೆಸಿದರೆ ನೀವ್ಹಾ ಸುಮ್ನೇ ಇದ್ರಾ' ಎಂದೆವು.

ಈ.ಗೌ. : ಮತ್ತೇನು ಮಾಡ್ಬೇಕು ಅಂತಿರಿ ಸ್ವಾಮಿ. ನಾವು ಏನಾರ ಮಾಡಾಕ ಹೋಗ್ಲಿ, ನಮ್ಮ ಮನೆ ಹೆಣ್ಮಕ್ಕಳನ್ನೂ ಹಂಗಮಾಡೊರು ಅವರೇ. ಇದೆಲ್ಲಾ ಮಾಮೂಲಿ ಆಗೈತಿ ಇಲ್ಲಿ. ಯಾರೂ ಏನೂ ಮಾಡಂಗಿಲ್ಲ"

ತಂಡ : "ಈ ಪ್ರೇಮ ಪ್ರಕರಣದಲ್ಲಿ ಯರ್ರೆಮ್ಮ ಕೈವಾಡ ಇದೆಯಾ?'

ಈ.ಗೌ : "ಆಯಮ್ಮ ಒಳ್ಳೆ ಹೆಣ್ಣು ಮಗಳು ಅದ್ಯಾಕ ಹುಡಿಗಿ ಮನೆಯೋರಿಗೆ ಈ ವಿಷಯ ಗೊತ್ತಿತ್ತು. ಸುಮ್ನೆ ಅದಾರೆ ತಮ್ಮಕ್ಕಳನ್ನ ತಾವು ನೆಟ್ಟಿಗೆ ಇಟಗಬೇಕು ಅದಬಿಟ್ಟು ಹಂಗೆಲ್ಲಾ ಅದ್ರ ಹೆಂಗ' ಈ ಮಹಾತ್ಮರನ್ನು ತಡವುದಾಗ್ಲಿ, ಅವರ ಉಸಾಬರಿಗೆ ಹೋಗದಾಗ್ಲಿ ಯಾರಿಗೆ ದಮ್ಮೈತ್ರಿ"

ತಂಡ : ಮಂತ್ರಿಗಳು ಬಂದಿದ್ರು ಏನುಹೇಳಿದ್ರು?

ಈ.ಗೌ : "ಅವರೇನು ಹೇಳ್ತಾರೆ, ಎಲ್ಲಾ ನಾಟಕ, ಪರಿಹಾರ ಕೊಡ್ತಿವಿ ಎಂದ್ರು ಇದೆಲ್ಲಾ ತೆಪ್ಪ ಅಂದ್ರು, ರಾಜಕೀಯ ಬಲ ಇಲ್ಲದ ಇವರು ಇಷ್ಟು ಮೆರೆಯಾಕ ಆದೀತಾ, ಎಲ್ಲಾ ಕಳ್ರು"

ಹಾಗೇ ಇನ್ನೊಬ್ಬರನ್ನು ಭೇಟಿ ಮಾಡಿದೆವು.

ತಂಡ : "ಇದು ಹೆಂಗನಡೀತಮ್ಮ"

ಹೇಳಲು ಹಿಂದೇ ಮುಂದೆ ನೋಡಿದಳು ಆಕೆಯ ಅನುಮಾನದಲ್ಲಿ ನೀವು ಯಾರೋ? ಎಂಬ ಆತಂಕವಿತ್ತು.

ತಂಡ : "ನಾವು ಕಮ್ಯುನಿಸ್ಟ್ ಪಕ್ಷದವರು ಕೂಲಿಕಾರ, ರೈತ ಸಂಘದವರು" ಎಂದಾಗ

ಸಾರವ್ವ : "ಹಂಗಾ, ಏನು ಮಾತಾಡೋದು ಕಷ್ಟ ಆಗೈತ್ತಿಲ್ಲಿ. ಮಾತಾಡಿದ್ರ ಸಾಕು ಮೈಮೇಲೆ ಬರ್ತಾರ, ಏನು ಹೇಳೊದೈತ್ರಿ ಇದು ಹಂಗ ಹೆಣವಮಕ್ಕಳಾಗಿ ಹುಟ್ಟ ಬಾರ್ದು. ತಲಿಎತ್ತಿ ಒಡಾಡಂಗಿಲ್ಲ ಹಂಗಾಗೈತಿ?

ಹೇಳುತ್ತಿದ್ದಂತೇ ಬಸಪ್ಪ ಎಂಬ ಯುವಕನನ್ನು ಭೇಟಿ ಮಾಡಿದೆವು ವಿದ್ಯಾವಂತ ಯುವಕ ಸಮಾಜದ ಬಗ್ಗೆ ಕಾಳಜಿ ವ್ಯಕ್ತಪಡಿಸಿದ.

ಬ.: "ನನಗೆ ಬುದ್ದಿ ತಿಳಿದಾಗಿಂದ ಅಲಲ್ಲಿ ಪೇಪರ್‌ನಲ್ಲಿ ಓದಿದ್ದೆ. ಆದ್ರೆ ಇಲ್ಲಿ ಘಟನೆ ಅತ್ಯಂತ ಕ್ರೂರವಾಗಿದ್ದು"

ತಂಡ : "ಈಗ ವಾತಾವರಣ ತಿಳಿ ಆಗಿದೆಯಾ ಜನ ಧೈರ್ಯದಿಂದ ವಿಷಯ ತಿಳಿಸಲು, ಪ್ರತಿಭಟಿಸಲು ಸಾಧ್ಯವಿದೆಯಾ?

ಬ. : "ಇಲ್ಲಿ ತಿಳಿಯಾದ ವಾತಾವರಣ ಎಂದ್ರ ಯಾವಾಗ್ಲೂ ಭಯದಿಂದ ಇರೋದು ಹೀಗೇ ಕಾಲ ಹಾಕಿದ ಜನಕ್ಕೆ ಹೀಗೆ ಇರೋದೇ ಒಂದು ಸಹಜ ಸ್ವಭಾವವಾಗಿದೆ, ಬೆತ್ತಲ ಮೆರವಣಿಗೆ ಹೊಂಟಾಗ ಎಲ್ಲಾ ಜನ ನೋಡಿದ್ರು ಯಾರು ಹಂಗ್ಯಾಕ ಮಾಡ್ತೀರಿ ಅನಲಿಲ್ಲ. ಅಷ್ಟ ಯಾಕ ನನಗೂ ಏನು ಹೇಳಕ ಆಗಲಿಲ್ಲ. ಈಗ ನಿಮ್ಮ ಹತ್ರ ಮಾತಾಡಲೂ ಭಯ ಐತಿ"

ತಂಡ : "ಪೊಲೀಸರು ಎಲ್ಲಾ ಬಂದೊಬಸ್ತಿಗೆ ಬಂದಾರಲ ಈಗ್ಯಾಕ ಭಯ"

ಬ. "ಪೊಲೀಸರನ್ನೇ ಬಂದೊಬಸ್ತಿ ಮಾಡಿದ ಜನ ಅವರು. ಇನ್ನೂ ಹೆಚ್ಚಿಗೆ ಹೇಳಬೇಕ" ಎಂದು ಹೇಳಿ ಸುತ್ತಲೂ ಒಂದಸಲ ನೋಡಿ ನಾನು ಮಾತನಾಡಿದ್ದನ್ನು ಯಾರಾದರೂ ನೋಡಿದ್ದಾರ ಎಂದು ವೀಕ್ಷಿಸಿ ನಡೆದರು. ಮತ್ತಾರನ್ನೂ ಬೇಟಿಯಾಗಬೇಕೆಂದು ಕೊಳ್ಳುತ್ತಿದ್ದಂತೆ. ದ್ಯಾವಣ್ಣನೆಂಬ ಕೂಲಿಕಾರ ಸಿಕ್ಕ.

ತಂಡ: 'ನಿನ್ನ ಅಭಿಪ್ರಾಯವೇನು?

ದ್ಯಾ. : "ನಂದೇನೈತೆ, ಬಡವರನ್ನ ಕಾಪಾಡರೋ ಯಾರ ಅದರ. ಏನಾದ್ರು ಮಾತಾಡಿದ್ರ ಜೀವತಗೀತಿವಿ ಅಂತಾರ, ಪೊಲೀಸರು ಏನು ಮಾಡ್ತಾರೆ, ಗುಳುಂ ಅಂತ ಡ್ಯಾಂನೋಟುಗಳ ನುಂಗ್ತಾರಾ. ಇಲ್ಲಿ ನಿದ್ದಿ ಹೊಡಿತಾರ ಪಂಚಾಯ್ತಿ ಯಾರು ಮಾಡ್ತಾರೆ. ಅವರ ಪಂಚಾಯ್ತಿ ಮಾಡೋರು. ಇದೊಂದಲ್ಲ ಯಾವ್ದೇ ಪಂಚಾಯ್ತಿ ಮಾಡಿದ್ರ 2,3 ಸಾವಿರ ಮಾಮೂಲ ಅವರಿಗೆ ಕೊಡಬೇಕು. ಕೊಡಾಕ ಹಣ ಇಲ್ಲ. ಅವರ ಹತ್ರ ಹೊಡದಾಡಾಕ ದಮ್ಮು ಇಲ್ಲ" ಎಂದು ನಡೆದ.

ನ್ಯಾಯ ತೀರ್ಪು ಅದರದ್ದೇ

ಈ ಮಹಾವೀರರೇ ಎಲ್ಲಾ ಪಂಚಾಯ್ತಿಗಳಲ್ಲಿ ಇರಬೇಕು. ಮಾಮೂಲು ಕೊಡಬೇಕು. ಕೊಡದಿದ್ದರೆ ಇವರೇ ಸಾಕಿದ ಸಾಕು ನಾಯಿಗಳಂತಿರುವ ಪೊಲೀಸರನ್ನು ಛೂ ಬಿಡುತ್ತಾರೆ. ನಂತರ ಮಾಮೂಲಿ ವಸೂಲು ಮಾಡುತ್ತಾರಂತೆ. ಇವರ ಪಂಚಾಯ್ತಿಯ ಕೆಲವು ಸ್ಯಾಂಪಲ್‌ಗಳೂ ಸಿಕ್ಕವು.

ಒಬ್ಬರೈತ ತನ್ನ ಹೊಲಕ್ಕೆ ನೀರು ಹಾಯಿಸಲು ಪೈಪ್‌ಲೈನ್ ಮಾಡಿಸಬೇಕು. ಅದು ಇನ್ನೊಬ್ಬನ ಹೊಲದಲ್ಲಿ ಹಾದು ಬರಬೇಕು. ಜಗಳವಾಗಿ ಪಂಚಾಯ್ತಿಗೆ ಬಂತು. ಈ ಮಹಾಮಹಿಮರೇ ಪಂಚಾಯ್ತಿ ಮಾಡಲು 10,000ರೂ ಕೇಳಿದರು. ಆಮೇಲೆ ದೌರ್ಜನ್ಯ ಮಾಡಿ ಪೈಪ್‌ಲೈನ್ ಒಯ್ದರು. ಹೊಲದವ ಸ್ವಲ್ಪ ತಕರಾರು ಮಾಡಿದ. ಅಂದು ರಾತ್ರಿ ಈ ರೈತನ ಮೇಲಿನ ಬಣವಿಗಳಿಗೆ ಬೆಂಕಿ ಬಿತ್ತು. ಪಂಚಾಯ್ತಿ ಮುದಿದ್ದಕ್ಕೆ 20,000 ದಂಡವನ್ನೂ ತೆರಬೇಕಾಯ್ತು.

ಇನ್ನೊಂದು ಗ್ರಾಮ ಪಂಚಾಯ್ತಿಗೆ ಸೇರಿದ ಗ್ರಾಮದ ಭೂಮಿಯಲ್ಲಿ ಬಡ ದಲಿತ ಗುಡಿಸಲು ಹಾಕಿಕೊಂಡಿದ್ದ ಸೆಟ್ಟಿ ಚಂದ್ರಮ್ಮನಿಗೆ ಜಾಗಬೇಕಿತ್ತು. ಈ ಮಹಾಮಹಿಮರಿಗೆ 20,000ರೂಗಳನ್ನು ಕೊಟ್ಟಳು. ತಕ್ಷಣವೆ ಬಡದಲಿತ ಗುಡಿಸಲು ನೆಲಸಮವಾಗಿ ಶೆಟ್ಟಿ ಚಂದ್ರಮ್ಮನೆ ಮೇಲೆದ್ದಿದ್ದಿತು ಪಟಾಪಟ್ ದೌರ್ಜನ್ಯ ಹೇಗಿದೆ ನೋಡಿ.

ಬಗ್ಗಿ, ಬಗ್ಗಿದ ಜನ


ಇಂಥಹ ದೌರ್ಜನ್ಯಗಳನ್ನು ನೋಡಿ ನೋಡಿ ಈ ಗ್ರಾಮದ ಜನರು ಅಸಹಾಯಕರಾಗಿ, ಬೇಸತ್ತು, ಇವೆಲ್ಲ ಸಹಜವೆಂಬ ತೀರ್ಮಾನಕ್ಕೆ ಬಂದಿದ್ದಾರೆ. ಅವರು ನಮ್ಮೊಡನೆ ಮಾತನಾಡುವಾಗ ಅವರಧಾಟಿ ಹೇಗಿತ್ತೆಂದರೆ, ಈ ಪ್ರಕರಣದ ಬಗ್ಗೆ ಅವರು ನೋಡುವ ನೋಟ ಮಿಂಚು, ಗುಡುಗು, ಮಳೆ, ರಾತ್ರಿ, ಹಗಲು ಗಳಿಗೆ ತೋರಿಸುವ ಮನಸ್ಸಿಗಿಂತ ವಿಭಿನ್ನವಾಗಿರಲಿಲ್ಲ. ಊರಲ್ಲಿ ಅಮಾನವೀಯ ಪ್ರಕರಣ ನಡೆದರೂ ತಮಗೇನು ಸಂಬಂಧ ಎಂಬಂಥಹ ದಾಟಿ ಅವರದು. **ಜಾಗತೀಕರಣ ಉದಾರೀ ಕರಣ, ಖಾಸಗೀಕರಣದ ತುತ್ತೂರಿ ಊದುವ ನಮ್ಮ ಸರದಾರರು ಯೋಚಿಸ ಬೇಕಿದೆ. ಯಾಂತ್ರೀಕರಣ ಅತ್ಯುನ್ನತ ತಂತ್ರಜ್ಞಾನದ ಬಗ್ಗೆ ಹೈಟೆಕ್ ಮಾತನಾಡುವ ರಾಜ್ಯದ ಮಂತ್ರಿಗಳೂ ಯೋಚಿಸಬೇಕಿದೆ. ನಾವೆಲ್ಲಿದ್ದೇವೆ.** ನಮ್ಮ ಹಳ್ಳಿಗಳೆಲ್ಲಿವೆ. ನಿಮ್ಮ ಹಳ್ಳಿಯ ಜನತೆ ಇವೆಲ್ಲವನ್ನೂ ಜೀರ್ಣಿಸಿಕೊಳ್ಳುವ ಶಕ್ತಿ ಇದೆಯೇ ಎಂದು.

ಕಾನೂನು, ರಕ್ಷಣೆ, ಆಡಳಿತ, ನ್ಯಾಯ ಎಲ್ಲವೂ ಹಣಮಯವಾಗಿರುವ ಸಮಾಜದಲ್ಲಿ ಹಣವಿಲ್ಲದ ಯರ್ರೆಮ್ಮನನ್ನು ಬೆತ್ತಲಾಗಿಸಿದರೂ ಇವೆಲ್ಲವುಗಳ ಕಣ್ಣಿನ ದೃಷ್ಟಿ ಈಕೆಯ ಮೇಲೆ ಬಿದ್ದಿತೆ?

ಪೂರ್ಣಯೋಚಿತ ಸಂಚು : ಪೋಲೀಸರ ಶಾಮೀಲು

ಇದೊಂದು ಪೂರ್ವ ಯೋಜಿತ ಸಂಚು, ಶಿವಯ್ಯ ಮತ್ತವರ ಮೇಲುಸ್ತುವಾರಿ ಜನರು ಒಂದು ದಿನ ಮೊದಲೇ ಠಾಣೆಗೆ ನುಗ್ಗಿದರು. ಬಾಯ್ತೆರೆದು ನಿಂತಿದ್ದ ಖಾಕಿ ಬೊಂಬೆಗಳಿಗೆ ಹಸಿರು ನೋಟುಗಳ ಕಷಾಯ ಕುಡಿಸಿ, ನೀವು ಸುಮ್ಮನೇ ಮಲಗಿ ನಮ್ಮ ಮನೆ ಹೆಣ್ಣು ಮಗಳನ್ನು ಹಾಳುಮಾಡಿದ್ದಾರೆ. ಅವರನ್ನು ಚನ್ನಾಗಿ ಥಳಿಸುತ್ತೇವೆ. ಕೇಸು ಗೀಸು ಅಂತ ನಿಮ್ಮ ಖಾಖೀ ಬುದ್ಧಿ ತೋರಿಸದಿರಿ ಎಂದು ಮಂಪರು ಬರುವಹಾಗಿ ಲಾಲಿ ಹಾಡಿ ಬಂದವರೇ ಈ ಕೃತ್ಯಕ್ಕೆ ಇಳಿದರು. ಯರ್ರಮ್ಮನ ಬೆತ್ತಲ ಮೈ ಮುಚ್ಚಿದ್ದು ಪೊಲೀಸರು ಬಂದನಂತರವೇ. ಅವರೇ

ಪುಟ 9 ಕ್ಕೆ



ಬಳ್ಳಾರಿ ಜಿಲ್ಲಾ ಜೆಎಂಎಸ್ ನಿಂದ ಪ್ರತಿಭಟನೆ

ಸಿಪಿಐ(ಎಂ) ನಿಯೋಗ ಭೇಟಿ

ಒಟ್ಟು ವಿದ್ಯಮಾನಗಳನ್ನು ಅರಿಯಲು, ಈ ಘಟನೆ ನಡೆದ ಸ್ಥಳಕ್ಕೆ ಸಿಪಿಐ(ಎಂ)ನ ನಿಯೋಗವು ಭೇಟಿ ನೀಡಿತು. ಈ ನಿಯೋಗದಲ್ಲಿ ಸಿಪಿಐ(ಎಂ) ನ ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯರಾದ ಎಸ್.ವೈ.ಗುರುಶಾಂತ್, ರಾಜ್ಯಸಮಿತಿ ಸದಸ್ಯರೂ ಬಳ್ಳಾರಿ ಜಿಲ್ಲಾ ಕಾರ್ಯದರ್ಶಿ, ರೈತ ಮುಖಂಡ ಯು.ಬಸವರಾಜ್, ರಾಜ್ಯ ಸಮಿತಿ ಸದಸ್ಯ, ಕಾರ್ಮಿಕ ನಾಯಕ ಎಸ್.ಪ್ರಸನ್ನಕುಮಾರ್, ಜಿಲ್ಲಾ ಸೆಕ್ರಟಾರಿಯೇಟ್ ಸದಸ್ಯರೂ, ಕೃಷಿಕೂಲಿಕಾರರ ಸಂಘದ ನಾಯಕ ಪಿ.ಆರ್.ವೆಂಕಟೇಶ್ ಹಾಗೂ ರೈತ ನಾಯಕ ವಿ.ಎಸ್.ಶಿವಶಂಕರ್ ಇದ್ದರು. ಈ ನಿಯೋಗ 29.8.2001 ರಂದು ವಣೇನೂರು ಗ್ರಾಮದ ಎರ್ರೆಮ್ಮನವರ ಮನೆಗೆ ಭೇಟಿ ನೀಡಿ ವಿವರವನ್ನು ಆಲಿಸಿ, ಸಾಂತ್ವನ, ಧೈರ್ಯ ತುಂಬಿತು. ಅಲ್ಲದೇ-ಅಲ್ಲಿನ ಇತರೆ ಪ್ರದೇಶಗಳಿಗೂ ಭೇಟಿ ನೀಡಿ, ಜನರಿಂದ ಮಾಹಿತಿ ಸಂಗ್ರಹಿಸಿತು.

ನಿಯೋಗದ ತಕ್ಷಣದ ಆಗ್ರಹಗಳು

1. ದೌರ್ಜನ್ಯಕ್ಕೀಡಾದ ಕುಟುಂಬದವರಿಗೂ ಹಾಗೂ ಅಲ್ಲಿನ ದಲಿತ ಕುಟುಂಬಗಳಿಗೆ ಸೂಕ್ತವಾದ ಬಿಗಿ ಭದ್ರತೆ ಒದಗಿಸಬೇಕು.
2. ಈ ಪ್ರಕರಣದ ಸಮಗ್ರ ತನಿಖೆಯನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು. ಅಲ್ಲದೇ ಈ ಪ್ರದೇಶದಲ್ಲಿ ಇಂತಹ ಹಲವಾರು ಮುಚ್ಚಿಹೋದ ಘಟನೆಗಳೂ ಬಯಲಾಗಬೇಕಿದೆ. ಇಲ್ಲಿ ಆಡಳಿತ, ಆಳುವ ಪಕ್ಷದವರ ಭಾಗಿಯು ಸ್ಪಷ್ಟವಿದ್ದು ಅದು ಹೊರಬರಬೇಕು. ದೌರ್ಜನ್ಯ ನಡೆಸಿದವರ ಮೇಲೆ ನಿಷ್ಟುರ ಕ್ರಮ ಜರುಗಿಸದೇ, ತೀರಾ ಸಣ್ಣಪುಟ್ಟ ಘಟನೆಯೆಂಬಂತೆ ಮೊಕದ್ದಮೆ ಹೂಡಿ ಅವರನ್ನು ಪಾರು ಮಾಡುವ ಯತ್ನ ನಡೆದಿರುವುದರಿಂದ ತಕ್ಷಣವೇ ಪ್ರಕರಣವನ್ನು ಸಿಓಡಿಗೆ ಒಪ್ಪಿಸಿ, ಗಂಭೀರವಾದ, ಕಠಿಣ ಸೆಕ್ಷನ್‌ಗಳ ಮೂಲಕ ಮೊಕದ್ದಮೆ ಹೂಡಬೇಕು. ಆ ದೌರ್ಜನ್ಯಕಾರರ ಆಸ್ತಿ ಮುಟ್ಟುಗೋಲು ಹಾಕಬೇಕು, ಕಠಿಣ ಕ್ರಮ ವಹಿಸಬೇಕು. ಈ ಪ್ಕರಣದಲ್ಲಿ ಪೋಲೀಸರ ಶಾಮೀಲು ಸ್ಪಷ್ಟವಾಗಿದ್ದು ಆ ಪ್ರದೇಶದ ಠಾಣೆಯ ಪೋಲೀಸ್ ಅಧಿಕಾರಿಯಲ್ಲದೇ, ಗೃಹಸಚಿವರೇ ಹೇಳುವಂತೆ ಬಳ್ಳಾರಿ ಜಿಲ್ಲಾ ಎಸ್.ಪಿ., ಡಿ.ಸಿ.ಗಳನ್ನು ಹೊಣೆಗಾರರನ್ನಾಗಿಸಿ ತನಿಖೆ ವ್ಯಾಪ್ತಿಗೆ ಒಳಪಡಿಸಬೇಕು.
3. ದೌರ್ಜನ್ಯಕ್ಕೀಡಾದ ಎರ್ರೆಮ್ಮನ ಕುಟುಂಬಕ್ಕು ಹಾಗೂ ಅಲ್ಲಿನ ಎಲ್ಲಾ ದಲಿತರಿಗೂ ಕನಿಷ್ಟ ಎರಡು ಎಕರೆ ಜಾಮೀನನ್ನು ನೀಡಬೇಕು. ಹಾಗೂ ಮನೆ, ಶಿಕ್ಷಣ, ನೌಕರಿ, ಧನ ಸಹಾಯ ಮುಂತಾದ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಬೇಕು.
4. ಈ ಪ್ರಕರಣದಲ್ಲಿನ ಯುವ ಪ್ರೇಮಿ ಕೇಶಪ್ಪ ಎಲ್ಲಿದ್ದಾನೆಂದು ಪತ್ತೆ ಆಗಿಲ್ಲ. ಆತ ಕೊಲೆಯಾಗಿರುವ ಸಂಭವವಿದ್ದು ಆತನನ್ನು ಪತ್ತೆಮಾಡಬೇಕು. ಅಗತ್ಯವಾದಲ್ಲಿ ಹೈಕೋರ್ಟ್‌ನಲ್ಲಿ ಹೆಬಿಯಸ್ ಕಾರ್ಪಸ್ ಅರ್ಜಿ ಹಾಕಬೇಕು.
5. ಇದನ್ನು ಜಾತಿ ದ್ವೇಷಕ್ಕೆ ಹೆಚ್ಚಿಸಲು ಬಳಸುವ ಪ್ರಯತ್ನ ನಿಲ್ಲಿಸಬೇಕು. ಸೌಹಾರ್ದತೆ, ಶಾಂತಿ ಕಾಪಾಡಿಕೊಳ್ಳಲು ಮನವಿ ಮಾಡಲಾಗಿದೆ.

ಈ ಅಮಾನವೀಯ ಘಟನೆಯನ್ನು ವಿವಿಧ ಸಾಮೂಹಿಕ ಸಂಘಟನೆಗಳು, ಜನತೆ, ಉಗ್ರವಾಗಿ ಖಂಡಿಸಿವೆ.

ರಾಜ್ಯಾದ್ಯಂತ ಪ್ರತಿಭಟನೆ

ದಲಿತ ಮಹಿಳೆ ಮೇಲೆ ನಡೆದ ದೌರ್ಜನ್ಯವನ್ನು ಖಂಡಿಸಿ, ನ್ಯಾಯ ಹಾಗೂ ರಕ್ಷಣೆಗೆ ಆಗ್ರಹಿಸಿ ರಾಜ್ಯಾದ್ಯಂತ ಪ್ರತಿಭಟಿಸಲು ಸಿಪಿಐ(ಎಂ) ಕರೆ ನೀಡಿದೆ.

ಜಾತಿ ದಳ್ಳುರಿಗೆ ಪ್ರೇಮಿಗಳ ಬಲಿ ಈ ತಾರತಮ್ಯಕ್ಕೆ ಕೊನೆ ಎಂದು?

ಒಬ್ಬ ಮೇಲ್ಜಾತಿಯ ಹುಡುಗ, ಇನ್ನೊಬ್ಬಳು ದಲಿತ ಹುಡುಗಿ. ಇಬ್ಬರೂ ಒಂದೇ ಕಾಲೇಜ್‌ನಲ್ಲಿ ಓದುತ್ತಿದ್ದರೂ, ಒಬ್ಬರು ಇನ್ನೊಬ್ಬರೊಡನೆ ಮಾತನಾಡುವಂತಿಲ್ಲ, ಒಂದು ವೇಳೆ ಮಾತನಾಡಿದರೂ ಹೃದಯ ಪೂರ್ವಕವಾಗಿ ಪ್ರೀತಿ ಮಾಡುವಂತಿಲ್ಲ. ಅಪ್ಪಿತಪ್ಪಿ ಪ್ರೀತಿ ಮಾಡಿದರೂ ಮದುವೆಯಾಗುವಂತಿಲ್ಲ. ಏನಾದರೂ ಧೈರ್ಯಮಾಡಿ ಮದುವೆಯಾದರೆ ಸಾರ್ವಜನಿಕವಾಗಿ ನೇಣು ಗಂಬಕ್ಕೆ - ಕೊಲೆಗೆ ಇನ್ನೊಂದು ಹೆಸರು!

ಈ ಘಟನೆ ಕವಿ ಹೃದಯದ ಕಟ್ಟು ಕತೆಯಲ್ಲ. ಸ್ವತಂತ್ರ ಭಾರತದ ಹಳ್ಳಿ ಹಳ್ಳಿಗಳಲ್ಲಿ ನಿತ್ಯ ನಡೆಯುವ ಕಠೋರ ಸತ್ಯ. ಅಂತಹ ಒಂದು ಘಟನೆ ಉತ್ತರ ಪ್ರದೇಶದ ಮುಜಾಫರ್ ನಗರ ಜಿಲ್ಲೆಯ ಹಳ್ಳಿಯೊಂದರಲ್ಲಿ ನಡೆದಿದೆ. 20 ವರ್ಷದ ಬ್ರಾಹ್ಮಣ ಯುವಕ, 18 ವರ್ಷದ ಜಾಟ್ ಕುಟುಂಬದ ಹುಡುಗಿಯನ್ನು ಪ್ರೇಮಿಸಿದ್ದೇ ಅವರು ಮಾಡಿದ 'ಮಹಾ ಅಪರಾಧ' ಅದಕ್ಕೆ ಶಿಕ್ಷೆ - ಸಾರ್ವಜನಿಕವಾಗಿ ಕೊಲೆ.

3 ವರ್ಷಗಳ ಹಿಂದೆ ಕರ್ನಾಟಕದ ಕಂಬಾಲಪಲ್ಲಿಯಲ್ಲಿ ನಡೆದ ದಲಿತರ ಮಾರಣ ಹೋಮ-ಜಾತಿ ವೈಷಮ್ಯದ ಇನ್ನೊಂದು ಬರ್ಬರ ಸಂಕೇತ. ಕರ್ನಾಟಕದ ಬಹುತೇಕ ಹಳ್ಳಿಗಳಲ್ಲಿ, ದೇಶದ ಇತರ ಭಾಗಗಳಲ್ಲಿದ್ದಂತೆ ದಲಿತರು ಸವರ್ಣೀಯರೊಂದಿಗೆ ಹೋಟೆಲುಗಳಲ್ಲಿ, ಟೀ ಕಾಫಿ ಕುಡಿಯುವಂತಿಲ್ಲ, ಅವರಿಗೆ ಪ್ರತ್ಯೇಕವಾದ ಗ್ಲಾಸುಗಳನ್ನು ಇಡಲಾಗಿದೆ. ದೇವರನ್ನು ನಂಬುವ ದಲಿತರಿಗೆ ದೇವಸ್ಥಾನಗಳಿಗೆ ಪ್ರವೇಶಿಸುವ ಧಾರ್ಮಿಕ ಹಕ್ಕೂ ಹಲವು ಭಾಗಗಳಲ್ಲಿ ಇಲ್ಲ. ಒಟ್ಟಾರೆಯಾಗಿ ಅಸ್ಪೃಶ್ಯತೆ ಎಂಬುದು ಅದೊಂದು ಧಾರ್ಮಿಕ ವ್ಯವಸ್ಥೆ ಮಾತ್ರವಲ್ಲ. ಆರ್ಥಿಕ ಅಸಮಾನತೆಯ ಸಂಕೇತವೂ ಆಗಿದೆ. ಆರ್ಥಿಕವಾಗಿ ದುರ್ಬಲರಾಗಿದ್ದವರನ್ನು ಗುಲಾಮಗಿರಿಗೆ ತಳ್ಳುವುದು ಇದರ ಹಿಂದಿನ ಮೂಲ ಉದ್ದೇಶ.

ಇವುಗಳಿಗೆ ಕೊನೆ ಎಂದು? ಸ್ವಾತಂತ್ರ ಸಿಕ್ಕಿ 54 ವರುಷ ಕಂಡರೂ ಇಂತಹ ವೈಷಮ್ಯ, ತಾರತಮ್ಯ ಅಡೆತಡೆ ಇಲ್ಲದೆ ಮುಂದುವರೆಯುತಿದೆ.

ಭೂಮಾಲಿಕ ವ್ಯವಸ್ಥೆ ಮತ್ತು ಜಾತೀಯ ದಬ್ಬಾಳಿಕೆಗಳು

ಜಾತಿಯ ಪ್ರಾಬಲ್ಯ-ಜಾತೀಯ ಅಸಮಾನತೆ-ಭೂಮಾಲಕತ್ವ ಕ್ರೌರ್ಯಗಳೇ ಈ ಪ್ರಕರಣಕ್ಕೆ ಕಾರಣಗಳಾಗಿವೆ. ಕೇಂದ್ರ-ರಾಜ್ಯ ಸರ್ಕಾರಗಳು ಭೂಮಾಲಕತ್ವವನ್ನು ಹಾಗೂ ಜಾತಿ ಪದ್ಧತಿಯ ವಿರುದ್ಧ ದೃಢವಾದ ಕ್ರಮಗಳನ್ನು ಕೈಗೊಳ್ಳುವಲ್ಲಿ ವಿಫಲವಾಗುತ್ತಿರುವುದೇ ಮತ್ತೆ, ಮತ್ತೆ ಇಂತಹ ಪ್ರಕರಣಗಳು ನಡೆಯಲು ಕಾರಣವಾಗುತ್ತಿದೆ ಮತ್ತು ಈ ಕೂಡಲೇ ಭೂಮಾಲಕತ್ವ ರದ್ದುಗೊಳಿಸಲು ಜಾತಿ ಅಸಮಾನತೆಯನ್ನು ಎದುರಿಸಲು ದೃಢ ಕ್ರಮಕೈಗೊಳ್ಳಬೇಕು.

ಕೇಂದ್ರ-ರಾಜ್ಯ ಸರ್ಕಾರಗಳ ನೀತಿಗಳ ಕಾರಣದಿಂದ ಜಾತಿವಾದಿ ರಾಜಕಾರಣದಿಂದ ಭೂಮಾಲಕತ್ವ ಮತ್ತು ಜಾತಿಯ ಮನೋಭಾವ ಬೆಳೆಯುತ್ತಿದೆ.

ಗ್ರಾಮದಲ್ಲಿ ಭೂಮಾಲಕರು ಬೆಳೆದು, ಬಡ್ಡಿ ವ್ಯಾಪಾರಿಗಳಾಗಿ ರೂಪುಗೊಂಡು ಗ್ರಾಮದಲ್ಲೆಲ್ಲಾ ಸಾಮಾನ್ಯ ರೈತರಿಗೆ ಸಾಲ ನೀಡಿ, ಹಿಡಿತ ಸಾಧಿಸಿರುವುದು ಗ್ರಾಮದಲ್ಲಿ ವಿರೋಧವಿಲ್ಲದಂತಹ ಪರಿಸ್ಥಿತಿ, ನಿರ್ಮಾಣಗೊಂಡುದು ಇಂತಹ ಘಟನೆಗಳು ನಡೆಯಲು ಕುಮ್ಮಕ್ಕು ನೀಡಿದೆ.

ಮುತುವರ್ಜಿ ವಹಿಸಿ ಬಟ್ಟೆ ತರಿಸಿಕೊಟ್ಟದ್ದು. ರಾತ್ರಿ ಈ ಮಹಾಮಹಿಮರನ್ನು ಹಿಡಕೊಂಡು ಹೋಗಿ ಬೆಳಿಗ್ಗೆ ಬೇಲ್ ಮೇಲೆ ಬಿಟ್ಟನಂತರ ನಮ್ಮನ್ನು ಯಾರೇನು ಮಾಡಿಯಾರು ಎಂದು ಈ ಕ್ರೂರಿಗಳು ರಾಜಾರೋಷವಾಗಿ ತಿರುಗುತ್ತಾರೆಂದರೆ ಏನರ್ಥ. 7 ಕಿ.ಮಿ. ದೂರ ಮೋಕ ಠಾಣೆಯ ಎಸ್.ಐಗೆ ಸುದ್ದಿ ಗೊತ್ತಿದ್ದರೂ ಬಳ್ಳಾರಿ ಹೋದನೆಂದರೆ ಏನರ್ಥ? ಸುಮಾರು 20 ಕಿ.ಮಿ. ದೂರವಿರುವ



ಸಚಿವರ ಕಾಲಿಗೆ ಬಿದ್ದ ಎರ್ರಮ್ಮ ಮತ್ತು ಆಕೆಯ ಪುತ್ರಿ ಹಾಗೂ ಅತ್ತೆ, ಮತ್ತಿತರೆ ದಲಿತ ಮಹಿಳೆಯರು "ನಾವು ಬದುಕೋದು ಬಹಳಾ ಕಷ್ಟವಾಗ್ಯತೆ ಸಾರ್... ನಾವು ಮರ್ಯಾದಿಯಿಂದ ಬಾಳಂಗಿಲ್ಲ... ತಲೆ ಎತ್ತಿ ನಡೆಯಾಂಗಿಲ್ಲ... ನಮ್ಮನ್ನ ಸಾಯಿಸಿ(ಕೊಂದು) ಹಾಕಿದ್ರೂ ನಮಗಿಷ್ಟ ಬ್ಯಾಸರ ಆಗ್ತಿರಲಿಲ್ಲ ಸಾರ್... ಆದರೆ ರಾಕ್ಷಸರ ಹಂಗ ಬಟ್ಟೆ ಬಿಚ್ಚಿ, ದರದರನೇ ಎಳೆದು ಬತ್ಲೆ ಮೆರವಣಿಗೆ ಮಾಡಿದ್ರು, ಕೇಕೆ ಹಾಕಿದ್ರು, ಸೀಟಿ(ಸಿಳ್ಳಿ) ಹೊಡೆದ್ರು ಸಾರ್...." ಎಂದು ಗೋಗರೆದರು.

ಹಗರಿ ಎಸ್.ಐ ಮಹೇಶ ಮೋಕಾ ಪೊಲೀಸ್ ಠಾಣೆಯ ಪೋಲೀಸರಿಗಿಂತ ಮುಂಚಿಯೇ ಬಂದುದು ಎಂದರೆ ಏನರ್ಥ? ಮೋಕಾ ವ್ಯಾಪ್ತಿಯ ಸರ್ಕಲ್ ಸಾಹೇಬರು ಬಂದು ಎಫ್.ಐ.ಆರ್. ನೋಡಿ ಇಂಥ ಕೃತ್ಯಕ್ಕೆ ಎಷ್ಟು ಲೂಜ್ ಸೆಕ್ಷನ್ ಹಾಕಿದ್ದಾನೆ. ಇವನಿಗೆ ಸ್ವಲ್ಪವಾದರೂ ಬುದ್ದಿ ಐತಾ, ಎಷ್ಟು ಹೇಳಿದ್ರು ಹೀಗೆ ಮಾಡ್ತಾನೆ ಎಂದು ಸಾರ್ವಜನಿಕ ಎದುರು ಸ್ಥಳೀಯ ಎಸ್.ಐ ಯನ್ನು ಬೈದರೆ ಏನರ್ಥ? ಈ ಇಂಥಹೊಂದು ಭೀಕರ ಘಟನೆ ಆಗಿದೆ ಎಂದು ಸುದ್ದಿ ತಿಳಿದ ತಕ್ಷಣ ಕೇಸ್ ಮುಂತಾದವುಗಳನ್ನು ಖುದ್ದಾಗಿ ಪರಿಶೀಲಿಸಿ ಮುತುವರ್ಜಿ ವಹಿಸದೇ ಎಸ್.ಪಿ.ಯವರು ಮಾಮೂಲಾಗಿ ಬಿಟ್ಟರೆಂದರೆ ಏನರ್ಥ. ಎಲ್ಲವನ್ನು ಸದಾ ಮುಚ್ಚಿಕೊಳ್ಳುತ್ತಿದ್ದ ಅರ್ಥಗಳು ಯರ್ರೆಮ್ಮನ ಬೆತ್ತಲ ಪ್ರಕರಣದ ಮೂಲಕ ಬೆತ್ತಲಾಗಿವೆ ಎಂಬುದೇ ಅರ್ಥ.

ಜಾತಿ ಜಗಳವಲ್ಲ

ಇದು ಭೂಮಾಲಿಕ ಶಕ್ತಿಯ ದೌರ್ಜನ್ಯ ಹಾಗೂ ತನ್ನ ದೌರ್ಜನ್ಯಕ್ಕೆ ಜಾತಿಬಲವೆಂಬ ಅಸ್ತ್ರದ ಉಪಯೋಗದ ದಾರುಣ ಘಟನೆ ಕೆಲವು ಜಾತಿವಾದಿ ಗುಂಪುಗಳು ಇದನ್ನು ಜಾತಿ ಜಗಳದ ಆಧಾರದಲ್ಲಿ ಬಿಂಬಿಸಲು ಪ್ರಯತ್ನಿಸುತ್ತಿವೆ. ಈ ಘಟನೆಯ ಲಾಭ ಪಡೆಯಲು ಹವಣಿಸುತ್ತಿವೆ. ಹರಿಜನರ ವಿರುದ್ಧ ನಾಯಕರನ್ನು ಎತ್ತಿಕಟ್ಟಲು ಹವಣಿಸುತ್ತಿವೆ. ನಾಯಕರಿಗೆ ಮೀಸಲಾತಿಯನ್ನು ರದ್ದು ಮಾಡಬೇಕೆಂದು ಹೇಳುತ್ತಿವೆ. ಆದರೆ ನಮ್ಮ ತಂಡ ವಣೇನೂರಿಗೆ ಭೇಟಿ ಇತ್ತಾಗ ನಾಯಕ ಜನಾಂಗದಲ್ಲಿನ ಕೆಲವರೂ ಸಹ ಈ ಹೇಸಿಗೆ ಕೃತ್ಯವನ್ನು ಖಂಡಿಸುತ್ತಾರೆ. ಅವರೂ ಸಹ ಈ ದೌರ್ಜನ್ಯಗಳಿಗೆ ಬೇಸತ್ತಿದ್ದಾರೆ. ಆದರೆ ಅಸಹಾಯಕರಾಗಿದ್ದಾರೆ. ಬಹಿರಂಗವಾಗಿ ಖಂಡಿಸಲು ಹೆದರುತ್ತಿದ್ದಾರೆ ಎಂಬ ಸತ್ಯಾಂಶವನ್ನು ಪರಿಗಣಿಸಬೇಕಿದೆ. ಇವರಷ್ಟೇ ಅಲ್ಲ ಅತ್ಯಂತ ಜವಾಬ್ದಾರಿಯುತ ಸ್ಥಾನದಲ್ಲಿ ಮಂತ್ರಿಗಳೂ ಸಹ ಜಾತಿಯ ಹೆಸರಿನಲ್ಲೇ ಪತ್ರಿಕಾ ಹೇಳಿಕೆಯನ್ನು ನೀಡುತ್ತಿರುವುದು ದುರಾದೃಷ್ಟಕರ.

ಬೆತ್ತಲೆ ಮೆರವಣಿಗೆಗೆ ಬೆಲೆ ಕಟ್ಟುತ್ತಿರುವವರು

ಈ ಘಟನೆಯ ನಂತರ ಎಲ್ಲಾ ಅದಿಕಾರಿಗಳ, ಮುಖಂಡರ, ಮಂತ್ರಿಗಳ, ಸಮೂಹಮಾಧ್ಯಮಗಳ ರಾಷ್ಟ್ರೀಯ ಅಂತರ್‌ರಾಷ್ಟ್ರೀಯ ಪತ್ರಿಕೆಗಳ ಪ್ರತಿನಿಧಿಗಳು ಸಾಲುಸಾಲಾಗಿ ಬರುತ್ತಿದ್ದಾರೆ. ಇದೊಂದು ರಾಷ್ಟ್ರೀಯ ಸುದ್ಧಿಯಾಗಿದೆ. ಸಮಾಜ ಕಲ್ಯಾಣ ಸುದ್ದಿ ಸಚಿವ ಕಾಗೋಡು ತಿಮ್ಮಪ್ಪ, ಕಾಂಗ್ರೆ ರಾಜ್ಯಾಧ್ಯಕ್ಷ ಅಲ್ಲಂ ವೀರಭಧ್ರಪ್ಪ ಗೃಹಸಚಿವ ಮಲ್ಲಿಕಾರ್ಜುನ ಖರ್ಗೆ, ದಿವಾಕರಬಾಬು ಎಲ್ಲರೂ ಭೇಟಿ ನೀಡಿದ್ದಾರೆ. ಯಾರಮಾತನ್ನು ಆಲಿಸಲಾಗದ ಮೂಕ ಯಾತನೆ ಅನುಭವಿಸುತ್ತಿರುವ ಅಮಾಯಕ ಬಡಯರ್ರೆಮ್ಮನನ್ನು ಮಾತನಾಡಿಸುತ್ತಿದ್ದಾರೆ. ಪರಿಹಾರದ ಮಾತುಗಳು, **ಆಕೆಗೆ ನೌಕರಿ ಕೊಡಿಸುವ ಭರವಸೆಗಳು, ಮನೆ, ಹೊಲ, ಕೊಡುವ ಅನುಕಂಪದ ಅಲೆಗಳನ್ನು ಪತ್ರಿಕೆಯಲ್ಲಿ ಎಬ್ಬಿಸುತ್ತಿದ್ದಾರೆ. ಯರ್ರೆಮ್ಮ ಬೆತ್ತಲೆಗೆ ಕಟ್ಟುವ ಬೆಲೆ ಇದೆನಾ? ಇವುಗಳನ್ನು ಪಡೆಯಲು ಒಬ್ಬ ದಲಿತ ಮಹಿಳೆ ಈ ಹೀನ ಕೃತ್ಯಕ್ಕೆ ಒಳಗಾಗಬೇಕೆ?**



ಬಳ್ಳಾರಿ ಜಿಲ್ಲೆಯಾದ್ಯಂತ ಪ್ರತಿಭಟನೆ, ತಿರುಗುಪ್ಪದಲ್ಲಿ ಮನವಿ ಸಲ್ಲಿಸುತ್ತಿರುವ ಸಿಪಿಐ(ಎಂ) ನಾಯಕರು

ಆದರೆ ಈ ಕ್ರೂರ ಕೃತ್ಯವೆಸಗಿದ ಈ ಮಹಾಮಹಿಮರಿಗೆ ಆಗಬೇಕಾದ ಶಿಕ್ಷೆಯ ಬಗ್ಗೆ ಹೆಚ್ಚು ಒತ್ತು ನೀಡುತ್ತಿಲ್ಲ. ಮಾನ್ಯ ಅಲ್ಲಂ ಧಣಿಯವರೇ ನೀವು ಗೆದ್ದ ಸ್ಥಳದಲ್ಲಿ ನಿಮ್ಮ ಪೊಲೀಸ್, ನಿಮ್ಮ ಆಡಳಿತ, ನಿಮ್ಮದೇ ಸರಕಾರದಡಿಯಲ್ಲಿ ಇಂಥಹ ಶಕ್ತಿಗಳಿಗೆ ಶಿಕ್ಷೆ ಇಲ್ಲವೇ? ಎಂದು ಕೇಳಬೇಕಿದೆ.

ಗೂಂಡಾಕಾಯ್ದೆ ಹಾಕಲು ಬರುವುದಿಲ್ಲ ಕಾನೂನು ತೊಡಕಿದೆ ಎನ್ನುತ್ತಾರೆ. ಕಾನೂನಿನ ತಜ್ಞರಂತೆ ಪೊಲೀಸ್ ವ್ಯವಸ್ಥೆ ಗೆಣಗೊಟ್ಟುತ್ತಿದೆ. ತೊಡಕಿರುವುದು ಮನಸ್ಸಿನಲ್ಲಿ ಗರಿಗರಿ ನೋಟಿನ ಮುಖವಾಡದಲ್ಲಿ ನಿಮ್ಮ ಮನಸ್ಸು ಗೋರಿಯಾಗಿದೆ ಸ್ವಾಮಿ, ನಾವು ಹೇಳಿತ್ತೇವೆ ಜನ ಹೇಳುತ್ತಾರೆ. ಜನಾಂದೋಲನ ಹೇಳಿದ್ದೇ ಕಾನೂನು ಈ ಕ್ರೂರಿಗಳಿಗೆ ಕಠಿಣ ಶಿಕ್ಷೆಯಾಗಬೇಕು. ಎಂಥಹ ಶಿಕ್ಷೆ ಎಂದರೆ ಮಹಿಳೆಯ ಬಗ್ಗೆ ಮಾತನಾಡುವಾಗ ಶಿಕ್ಷೆಯ ಛಾಯೆ ಮನಸ್ಸನ್ನು ಎಚ್ಚರಿಸುತ್ತಿರಬೇಕು.

ಯಾಕೆ ಈ ಕ್ರೂರ ತಾಂಡವ?

ಇಂಥಹ ಕ್ರೂರತೆಗಳು ಏಕೆ ತಾಂಡವವಾಡುತ್ತಿವೆ. ಹಳೇ ಪಾಳೆಗಾರಿ ಸಮಾಜದ ಪಳಿಯುಳಿಕೆಗಳೇಕೆ ಈಗಲೂ ಇಂಥಹ ಕ್ರೂರ ಶಕ್ತಿ ದೊರೆತಿದೆ. ಎಲ್ಲಲ್ಲೂ ಅಸ್ಪೃಶ್ಯತೆ ತಾಂಡವವಾಡುತ್ತಿದೆ. ಜಾತಿ ತಾರತಮ್ಯ, ಜಾತಿಜಗಳ ಈ ವಿಜ್ಞಾನ ಯುಗದಲ್ಲೂ ಏಕೆ ಶಕ್ತಿಗೊಳ್ಳುತ್ತಿವೆ ಎಂಬ ಬಗ್ಗೆ ದೀರ್ಘ ಚರ್ಚೆಗಳು ನಡೆಯಬೇಕಿದೆ. ಇಂಥಹ ಶಕ್ತಿಗಳನ್ನು ಇಲ್ಲವಾಗಿಸಲು ಪ್ರಭಲ ಜನಾಂದೋಲನ ನಡೆಯಬೇಕಿದೆ. ವಣೆನೂರಿನ ಘಟನೆ ಈ ಎಲ್ಲದರ ಪ್ರತೀಕವಾಗಿ ನೋಡಬೇಕಿದೆ. ಇವುಗಳನ್ನು ಪ್ರತಿಭಟಿಸಿ ಬೇರಿನ ಮೂಲ ಬೇರು ಕಿತ್ತೆಸೆಯಲು ಹೋರಾಟಬೇಕಿದೆ. ❍

ಆರೋಗ್ಯ ಕಾರ್ಯಪಡೆ ವರದಿ...............

ಪುಟ 3 ರಿಂದ

ಜನಸಂಖ್ಯೆ ಗ್ರಾಮೀಣ ಪ್ರದೇಶದಲ್ಲೇ ವಾಸವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ಸೇವೆಗಳು ಸಮರ್ಪಕವಾಗಿಲ್ಲ. ಅನಾರೋಗ್ಯ ಸಮಸ್ಯೆಗಳೂ ಹೆಚ್ಚು. ಈ ಅನಾರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಚಿಕಿತ್ಸೆ ಕೊಡಬೇಕಾಗಿದೆ. 'ಗುರುತಿಸುವ ಈ ಪ್ರಯತ್ನ' ವ್ಯಾಪಕವಾಗಿ ಆಗಬೇಕಾಗಿದೆ. ಅದಲ್ಲದೆ ಜನಾರೋಗ್ಯ ಸುಧಾರಿಸುವ ಪ್ರಯತ್ನ ಸಮರ್ಪಕವಾಗಬೇಕಾಗಿದೆ. ಅನಾರೋಗ್ಯ ಬಡಜನರಲ್ಲಿ ಮಹಿಳೆಯರಲ್ಲಿ ಹೆಚ್ಚು ಕಂಡು ಬರುತ್ತಿದೆ. ಕೇವಲ ಚಿಕಿತ್ಸೆಯಿಂದ ಅನಾರೋಗ್ಯ ಕಡಿಮೆ ಮಾಡಲಾಗದು. ಕೇವಲ ಆಸ್ಪತ್ರೆಗೆ ಬಂದವರಿಗೆ ಮಾತ್ರ ಚಿಕಿತ್ಸೆ ಎಂಬ ನೀತಿ ಇದ್ದಲ್ಲಿ, ಚಿಕಿತ್ಸೆಯೂ ಸಂಪೂರ್ಣವಾಗಲಾರದು. ಕಾರಣ ಹೆಚ್ಚಿನ ಜನರು ರೋಗ ಗುರುತಿಸಲು ಹಾಗೂ ರೋಗ ಉಂಟಾದಲ್ಲಿಯೂ ಆಸ್ಪತ್ರೆಗೆ ಹೋಗಲು ಅಶಕ್ತರು. ವರದಿ 'ಸಮಾನತೆಗೆ' ಪ್ರಯತ್ನಿಸುವುದು, ಎಂಬುದು ಹೇಳಿಕೆ ಮಾತ್ರ ಆಗದೆ, ಕಾರ್ಯರೂಪಕ್ಕೆ ಬರಬೇಕಾಗಿದೆ.

ಔಷಧಿಯ ಸಮಂಜಸ ಉಪಯೋಗದ ಬಗ್ಗೆ ಪ್ರಸ್ತಾಪಿಸಲಾಗಿದೆ. ಇದನ್ನು ಪ್ರತಿ ಹಂತದಲ್ಲೂ ಜಾರಿಗೊಳಿಸುವ ಪ್ರಯತ್ನವಾಗಬೇಕು. ಉಪಯೋಗಿಸಲು ಅಗತ್ಯ ಔಷಧಿಗಳು ದೊರಕಬೇಕು. ಅನಗತ್ಯ ಅಪಾಯಕರ ಔಷಧಿಗಳನ್ನು ನಿಷೇಧಿಸಬೇಕಾಗುತ್ತಿದೆ. ಈ ನಿಷೇಧವನ್ನು ರಾಜ್ಯಮಟ್ಟದಲ್ಲೂ ಮಾಡಬಹುದಾಗಿದೆ. ಔಷಧಿ ನಿಯಂತ್ರಣ ಅಧಿಕಾರಿಗಳು ಈ ಪ್ರಯತ್ನವನ್ನು ಮಾಡಬೇಕಾಗಿದೆ. ಪ್ರತಿ ಹಂತದಲ್ಲೂ ಉಪಯೋಗಿಸಬೇಕಾದ ಅಗತ್ಯ ಔಷಧಿ ಪಟ್ಟಿಯನ್ನು ಸರಕಾರ ತಯಾರಿಸಬೇಕಾಗಿದೆ. ಔಷಧಿ ಉದ್ಯಮ ಈ ಬೆಳವಣಿಗೆಯನ್ನು ಸಹಿಸಲಾರದು, ಆದರೆ ಸರಕಾರ ಈ ಜನಪರ ಕಾರ್ಯಕ್ಕೆ ಔಷಧಿ ಉದ್ಯಮವನ್ನು ಲಕ್ಷಿಸಬಾರದು. ಔಷಧಿ ನಿಯಂತ್ರಣ ಅಧಿಕಾರಿಗಳು ಕಾರ್ಯಪಡೆಯ ಸದೃಶ್ಯವಾಗಿರುವುದರಿಂದ ಈ ಬದಲಾವಣೆಗಳನ್ನು ತರಲು ಪ್ರಯತ್ನಿಸುತ್ತಾರೆ ಎಂದು ನಂಬಬಹುದಾಗಿದೆ.

***ಖೊಟ್ಟಿ ವೈದ್ಯರು** ತರಬೇತಿ ಪಡೆಯದೆ ಚಿಕಿತ್ಸಾ ಪದ್ಧತಿಯನ್ನು ಉಪಯೋಗಿಸುವ ವೈದ್ಯನಿಗೆ ಖೊಟ್ಟಿ ವೈದ್ಯ ಎಂದು ಹೇಳಬಹುದು. ವೈದ್ಯರೆಂದು ಕರೆಸಿಕೊಳ್ಳುವ ಈ ವ್ಯಕ್ತಿಗಳು ಆಧುನಿಕ ಔಷಧಿಗಳನ್ನು ದುರುಪಯೋಗ ಪಡಿಸುವುದಲ್ಲದೇ ಅನೇಕ ಬಾರಿ ಅಪಾಯ ಉಂಟು ಮಾಡುತ್ತಾರೆ. ಜನಸಾಮಾನ್ಯರಿಗೆ ಸಾಮಾನ್ಯವಾಗಿ ಚಿಕಿತ್ಸೆ ಮುಖ್ಯವಾಗುತ್ತದೆ, ಏನು ಹಾಗೂ ಯಾರಿಂದ ಎಂಬುದು ಮುಖ್ಯವಾಗುವುದಿಲ್ಲ. ಆದ್ದರಿಂದ ಈ ಖೊಟ್ಟಿ ವೈದ್ಯರನ್ನು ಗರುತಿಸಿ ನಿರ್ಮೂಲನೆ ಮಾಡುವುದು ಸರಕಾರದ ಕರ್ತವ್ಯವಾಗುತ್ತದೆ. ಸರ್ಕಾರ ಇಲ್ಲಿಯುವರೆಗೆ ಮಾಡಿದ ಪ್ರಯತ್ನಗಳೇನು?*

ಕುಟುಂಬ ವೈದ್ಯ ನಮ್ಮ ಆರೋಗ್ಯ ವ್ಯವಸ್ಥೆಯಲ್ಲಿ ಎಲ್ಲ ವೈದ್ಯರಿಗೆ ಹೋಲಿಸಿದಲ್ಲಿ ಕುಟುಂಬ ವೈದ್ಯರ ಸಂಖ್ಯೆ ಅತಿ ಹೆಚ್ಚಾಗಿದೆ. ಇವರುಗಳು ಖಾಸಗೀ ವೈದ್ಯರು. ಇವರಲ್ಲಿ ಹೆಚ್ಚಿನ ಸಂಖ್ಯೆಯ ವೈದ್ಯರು ಸರಕಾರಿ ವೆಚ್ಚದಲ್ಲಿ ತರಬೇತಿ ಪಡೆದವರು ಒಮ್ಮೆ ತರಬೇತಿಯಿಂದ ಹೊರಬಂದರೆ ಸರಕಾರ ಅವರನ್ನು ಮರೆತುಬಿಡುತ್ತದೆ. ಸರಕಾರ ಅವರಿಗೆ ತರಬೇತಿ ಕೊಡುವ ಜವಾಬ್ದಾರಿ ಹೊತ್ತಿರುವುದು ಸರಿಯೇ, ಆದರೆ ಅದಕ್ಕೆ ಪ್ರತಿಫಲವನ್ನು ಇಚ್ಛಿಸುವುದು ತಪ್ಪೇನಲ್ಲ. ಖಾಸಗಿ ಕುಟುಂಬ ವೈದ್ಯರನ್ನು ಸರಕಾರ ಗುರುತಿಸಿ, ಅವರೊಂದಿಗೆ ಸಂಪರ್ಕ ಇಟ್ಟುಕೊಂಡು, ಅವರಿಂದ ಸಮಾಜಕ್ಕೆ ಉಪಯೋಗವಾಗುವ ಕೆಲವು ಕಾರ್ಯಗಳನ್ನು ರೂಪಿಸುವುದು ಅತ್ಯಗತ್ಯ.

ಸಾಮಾನ್ಯವಾಗಿ ಈ ವೈದ್ಯರು ಪ್ರಾಥಮಿಕ ಆರೋಗ್ಯ ಪಾಲನೆಯಲ್ಲಿ ತೊಡಗಿದ ವೈದ್ಯರು ಹಾಗೂ ಇವರು ಅತಿ ಹೆಚ್ಚು ಜನರಿಗೆ ಚಿಕಿತ್ಸೆ ನೀಡುತ್ತಾರೆ. ಇವರು ಕೇವಲ ಗುಣಪಡಿಸುವ ಚಿಕಿತ್ಸೆ (curative treatment) ಮಾಡುತ್ತಿದ್ದು, ಅದು ಅವೈಜ್ಞಾನಿಕ ಹಾಗೂ ಶೋಷಣೆಯುಳ್ಳದ್ದಾಗಿದೆ. ಇಂದು ಪ್ರತಿಬಂಧಕ ಚಿಕಿತ್ಸಾ ವಿಜ್ಞಾನ ಲಭ್ಯವಿದ್ದರೂ, ಅದನ್ನು ಕಡೆಗಣಿಸಲಾಗುತ್ತಿದೆ. ಇವರುಗಳ ಸಮಗ್ರ (Hoilstic) ಚಿಕಿತ್ಸೆ ಮಾಡುವಂತೆ ಪ್ರೋತ್ಸಾಹಿಸಬೇಕು. ಈ ವೈದ್ಯರುಗಳ ಕಾರ್ಯವೈಖರಿ ತಿಳಿದುಕೊಳ್ಳಲು ಸರಕಾರ ಒಂದು ಅಧ್ಯಯನ ಕೈಗೊಳ್ಳಬೇಕಾಗಿದೆ ಹಾಗೂ ಈ ವೈದ್ಯರುಗಳು ಸಮಾಜಕ್ಕೆ ಹೇಗೆ ಹೆಚ್ಚು ಉಪಯುಕ್ತರಾಗಬುದು ಎಂಬುದನ್ನು ತೀರ್ಮಾನಿಸಬಹುದಾಗಿದೆ.

ಔದ್ಯೋಗಿಕ ಆರೋಗ್ಯ (occupational health) ಕಾರ್ಮಿಕವರ್ಗದ ಬೆಳವಣಿಗೆ ಅಪಾರವಾಗದೆ. ಕಾರ್ಮಿಕರ ಆರೋಗ್ಯ ಸಮಸ್ಯೆಗಳು ಭಿನ್ನವಾಗಿದೆ. ಕಾರ್ಮಿಕರ ಆರೋಗ್ಯ ಸಮಸ್ಯೆಗಳನ್ನು ಗುರುತಿಸಿ, ಸರಿಪಡಿಸುವ ಪ್ರಯತ್ನ ವ್ಯಾಪಕವಾಗಿಲ್ಲ. ಹೆಚ್ಚಿನ ಕಾರ್ಮಿಕರು ಖಾಸಗೀ ಅಸಂಘಟಿತ ಕ್ಷೇತ್ರದಲ್ಲಿರುವುದರಿಂದ ಸರಿಯಾದ ಚಿಕಿತ್ಸೆಯಿಂದ ವಂಚಿತರಾಗಿದ್ದಾರೆ, ಮಾಲಿಕರ ದೌರ್ಜನ್ಯಕ್ಕೆ ಬಲಿಯಾಗಿದ್ದಾರೆ. ಅಪಾಯಕಾರಿ ಉದ್ದಿಮೆಯಲ್ಲಿ ಕೆಲಸ ಮಾಡುತ್ತ, ಜೀವ ಮರಣದ ಮಧ್ಯದಲ್ಲಿ ತೊಳಲಾಡುತ್ತಿದ್ದಾರೆ. ಬಾಲ ಕಾರ್ಮಿಕರು ಹಾಗೂ ಮಹಿಳೆಯರು ಅತಿ ಹೆಚ್ಚು ಶೋಷಣೆಗೆ ಒಳಗಾಗಿದ್ದಾರೆ. ಹೊಸ ಹೊಸ ಉದ್ದಿಮೆಗಳಲ್ಲಿ ಕಂಡುಬರುವ ಆರೋಗ್ಯ ಸಮಸ್ಯೆಗಳು ಕಾರ್ಮಿಕರಿಗೆ ಸವಾಲಾಗಿದೆ. ಈ ಔದ್ಯೋಗಿಕ ಆರೋಗ್ಯದ ಸಮಗ್ರ ಅಧ್ಯಯನವನ್ನು ಸರಕಾರ ಮಾಡ ಬೇಕಾಗಿದೆ ಹಾಗೂ ಪರಿಹಾರ ಧನ ಸೂಚಿಸಬೇಕಾಗಿದೆ.

ವೈದ್ಯಕೀಯ ಸಂಶೋಧನೆ ಇಂದು ನಮ್ಮ ಆರೋಗ್ಯ ಸಮಸ್ಯೆಗಳತ್ತ ಗಮನ ಕೊಡುವುದು ಅಗತ್ಯ. ಇಂದು ಹಲವಾರು ವೈದ್ಯಕೀಯ ಸಂಸ್ಥೆಗಳಿದ್ದರೂ ವೈದ್ಯಕೀಯ ಸಂಶೋಧನೆಯನ್ನು ಕಡೆಗಣಿಸಲಾಗಿದೆ. ಕೆಲವು ವೈದ್ಯಕೀಯ ಸಂಶೋಧನೆಗಳಾಗುತ್ತಿದ್ದರೂ ಅವು ಆಧುನಿಕ ರೋಗಗಳಾದ ಕ್ಯಾನ್ಸರ್, ಹೃದಯ ರೋಗಗಳತ್ತ ಗಮನಹರಿಸಿವೆ, ಜನಸಾಮಾನ್ಯರ ಆರೋಗ್ಯ ಸಮಸ್ಯೆಗಳನ್ನು ಕಡೆಗಣಿಸಿವೆ. ಔಷಧಿ ಕಂಪನಿಗಳು ಸಂಶೋಧನೆ ಹೆಸರಿನಲ್ಲಿ ತಮ್ಮ ಔಷಧಿಯನ್ನು ಹೇಗೆ ಮಾರಾಟ ಮಾಡಿ ಲಾಭ ಹೆಚ್ಚಿಸಬಹುದೆಂಬುದನ್ನು ತಿಳಿಯುವ ಸಂಶೋಧನೆ ಮಾಡುತ್ತಿದೆ. ಆಧುನಿಕ ವೈದ್ಯಶಾಸ್ತ್ರದ ಒಂದು ಮುಖ್ಯ ವಿಭಾಗ ಸಂಶೋಧನೆ. ಈ ಸಂಶೋಧನೆ ಇಲ್ಲದ ವೈದ್ಯಶಾಸ್ತ್ರದ ಬೆಳವಣಿಗೆ ಅಸಾಧ್ಯ. ಸಂಶೋಧನೆ ಗಳನ್ನು ಕೈಗೊಂಡು ಅದರ ಪ್ರತಿಫಲವನ್ನು ಜನ ಸಾಮಾನ್ಯರಿಗೆ ತಲುಪಿಸುವ ವ್ಯವಸ್ಥೆ ಯಾಗಬೇಕಾಗಿದೆ.

ವಿದೇಶಿ ಯೋಜನೆಗಳು

ಆರೋಗ್ಯ ಇಲಾಖೆಯು ಅನೇಕ ದೇಶಗಳ ಸಹಾಯವನ್ನು / ಸಾಲವನ್ನು ಪಡೆಯುತ್ತ ಬಂದಿದೆ. ಸಾಲ ಹೊರ ದೇಶದ್ದಾಗಲಿ ನಾವು ಅದರ ಬಗ್ಗೆ ಜಾಗರೂಕತೆ ವಹಿಸಬೇಕಾಗುತ್ತದೆ. ಈ ಹೊರ ದೇಶದ ಸಾಲದ ವಿವರ, ಅದರ ತುಲನಾತ್ಮಕ ಅಧ್ಯಯನ ಅಗತ್ಯವಿದೆ. ಸಾಮಾನ್ಯವಾಗಿ ಹೊರ ದೇಶದ ಸಾಲ ಜನರಿಗೆ ಪ್ರಯೋಜಕವಾಗದೇ, ಮಧ್ಯದಲ್ಲೇ ಸೋರಿ ಹೋಗುವ ಸಾಧ್ಯತೆ ಇರುತ್ತವೆ. ಆರೋಗ್ಯಪಡೆ ಈ ಯೋಜನೆಗಳ ಅಧ್ಯಯನವನ್ನು ಕೈಗೊಳ್ಳಬೇಕಾಗಿತ್ತು.

***ಭ್ರಷ್ಟಾಚಾರ:** ನಮ್ಮ ಸಾಮಾಜಿಕ ಜಾಡ್ಯಗಳಲ್ಲಿ ಇದೊಂದು ಬಹುಮುಖ್ಯವಾದ ಜಾಡ್ಯ. ಇದು ಆರೋಗ್ಯ ಕ್ಷೇತ್ರಕ್ಕೂ ಅಂಟಿಕೊಂಡಿದೆ. ಈ ವಿಷಯವನ್ನು ಕಾರ್ಯಪಡೆ ವರದಿ ಮಾಡಿದೆ.*

ದಿನಪತ್ರಿಕೆಗಳಲ್ಲಿ ದೂರದರ್ಶನದಲ್ಲೂ ಲೈಂಗಿಕ ರೋಗಗಳು,. ಸಕ್ಕರೆ ಕಾಯಿಲೆ, ಏಡ್ಸ್, ಅಸ್ತಮಾ ಇತ್ಯಾದಿ ರೋಗಗಳನ್ನು ಗುಣಪಡಿಸುವುದಾಗಿ ಜಾಹೀರಾತು ಕಂಡು ಬರುತ್ತವೆ. ಇದೇನು ಹೊಸ ವಿಚಾರವಲ್ಲವಾದರೂ ಇದನ್ನು ತಡೆಹಿಡಿಯಬೇಕಾಗಿದೆ. ಈ ರೋಗಗಳನ್ನು ಯಾವುದೇ ಪದ್ಧತಿಯಲ್ಲಿ ಸಂಪೂರ್ಣ ಗುಣಪಡಿಸಲು ಇಂದು ಸಾಧ್ಯವಿಲ್ಲ. ಈ ಜಾಹೀರಾತುಗಳು, ದೂರದರ್ಶನದಲ್ಲೂ ಜನರಲ್ಲಿ ಭ್ರಮ ಹುಟ್ಟಿಸಿ ಹಣದೋಚುತ್ತಿವೆ. ವೈದ್ಯಕೀಯ ವೃತ್ತಿ, ಇದರ ಬಗ್ಗೆ ವಿರೋಧ ವ್ಯಕ್ತಪಡಿಸಿದರೂ, ಅವರ ಧ್ವನಿ ಪ್ರಭಾವ ಬೀರುತ್ತಿಲ್ಲ. ಸರಕಾರ ಈ ಜಾಹೀರಾತುಗಳ ಮೇಲೆ ಹತೋಟಿ ತರಬೇಕಾಗಿದೆ. ❍

ತೊಲಗು ತೊಲಗಾಚೆ ಭ್ರಷ್ಟ ಬಿಜೆಪಿ ಸರ್ಕಾರ

ಕ್ಯ ಆಡಳಿತ,
ಸ್ವಚ್ಛ ಭಾರತ'ದ
ಘೋಷಣೆ ಕೂಗಿ ಅಧಿಕಾರಕ್ಕೇರಿದ
ಸ್ವದೇಶಿವಾಲಾಗಳ ಭ್ರಷ್ಟಾಚಾರದ
ರಣಗಳು ಒಂದೇ, ಎರಡೇ....
ಹಗರಣಗಳ ದಾರಿ
ತ್ತಿರುವುದು
ನಾನಿ ವಾಜಪೇಯಿ
ರಿಯನ್ನೇ.... ಅದೂ
ಜನ್ ಭಟ್ಟಾಚಾರ್ಯನೆಂಬ
ತರ ಮುದ್ದಿನ ಅಳಿಯನ
ಲಕವೇ...

ಬಾಲಕೃಷ್ಣ ಶೆಟ್ಟಿ

ಸೆಪ್ಟೆಂಬರ್ ತಿಂಗಳಲ್ಲಿ ದೇಶದಾದ್ಯಂತ ರಣ ...ಮೊಳಗಲಿದೆ 'ತೊಲಗು ತೊಲಗಾಚೆ ಭ್ರಷ್ಟ ...ಪಿ ಸರ್ಕಾರ'. ತನ್ನ 3 ವರ್ಷಗಳ ಅಲ್ಪ ಅಧಿಕಾರ ...ಯಲ್ಲಿ ದೇಶವನ್ನು ಅಧೋಗತಿಗೆ ಕೊಂಡೊಯ್ದ ...ಪಿ ನೇತೃತ್ವದ ಕೇಂದ್ರ ಸರ್ಕಾರ ಅಧಿಕಾರದಿಂದ ...ಗಿಳಿಯಬೇಕೆಂದು ದೇಶದ ರೈತ ...ರ್ಮಿಕರಾದಿಯಾಗಿ ಎಲ್ಲಾ ವಿಭಾಗದ ಜನರು ...ಟ್ಟಯಿಸಲಿದ್ದಾರೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ...(ಸಿಪಿಐಎಂ) ಇದಕ್ಕೆ ನೇತೃತ್ವ ನೀಡಲಿದೆ.

ಹಿಂದಿನ ಕಾಂಗ್ರೆಸ್ ಸರ್ಕಾರವೂ ಭ್ರಷ್ಟಾಚಾರಕ್ಕೆ ...ರುವಾಸಿಯಾಗಿತ್ತು. ಆದರೆ ಬಿಜೆಪಿ ನೇತೃತ್ವದ ...ಕಾರ ದಾಖಲೆ ಅವಧಿಯಲ್ಲಿ ಅಂದರೆ ಮೂರೇ ...ರ್ಷಗಳಲ್ಲಿ ಕಾಂಗ್ರೆಸ್ ದಾಖಲೆಯನ್ನು ಮುರಿದಿದೆ ...ಬಹುದು. ಭ್ರಷ್ಟಾಚಾರವನ್ನು ಗಿನ್ನಿಸ್ ...ಖಲೆಯಲ್ಲಿ ದಾಖಲು ಮಾಡಿಕೊಳ್ಳುವುದಾದರೆ ...ರತದ ಬಿಜೆಪಿ ನೇತೃತ್ವದ ವಾಜಪೇಯಿ ...ರ್ಕಾರವನ್ನೇ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ!

ಬಿಜೆಪಿ ಎಂದರೆ ಶಿಸ್ತಿನ ಸಿಪಾಯಿಗಳು, ನಮ್ಮ ...ಇತರ ಪಕ್ಷಗಳಂತಲ್ಲ ಎಂದು ಬಡಾಯಿ ...ಚ್ಚಿಕೊಳ್ಳುತ್ತಿದ್ದ ವಾಜಪೇಯಿ, ಅಡ್ವಾಣಿಯವರು ...ವು ಯಾರಿಗೂ ಕಡಿಮೆ ಇಲ್ಲ ಎಂಬುದನ್ನು ...ರಿಸಿಕೊಟ್ಟಿದ್ದಾರೆ. ಅಡ್ವಾಣಿಯವರು ಅಧಿಕಾರದ ...ತ್ತಿಲೇರುವ ಮೊದಲೇ ಅಂದರೆ ಹವಾಲಾ ...ರಣದಲ್ಲಿ ಅವರ ಹೆಸರು ಭ್ರಷ್ಟಾಚಾರದೊಂದಿಗೆ ...ಳೆಡಿತವಾಗಿತ್ತು. ಟೆಲಿಕಾಂ ಹಗರಣದಲ್ಲಿ ...ಟ್ಯಾಂತರ ರೂಪಾಯಿ ಗುಳುಂ ಮಾಡಿದ ...ಖರಾಂ ಬಿಜೆಪಿಯ ಸ್ನೇಹಿತರಾದರು. ...ತ್ತರಪ್ರದೇಶದಲ್ಲಿ ಸರಕಾರ ರಚಿಸುವ ...ದರ್ಭದಲ್ಲಿ ಪಕ್ಷಾಂತರ ನಡೆಸಿದ ಎಲ್ಲ ಎಪ್ಪತ್ತು ...ಸಕರಿಗೆ ಮಂತ್ರಿಪದವಿ ನೀಡಿದುದನ್ನು ಜನ ...ರೆತಿಲ್ಲ.

ಪ್ರತಿಷ್ಠಿತ ಮಾರುತಿ ಉದ್ಯೋಗವನ್ನು ಜಪಾನಿನ ...ರಾಷ್ಟ್ರೀಯ ಸುಜುಕಿ ಕಂಪನಿಗೆ ಹೆಚ್ಚು ಕಡಿಮೆ



...ರಾಟ ಮಾಡಿದ ಸಂದರ್ಭದಲ್ಲಿ ಅವ್ಯವಹಾರ ...ದಿದೆ ಎಂದು ಬಿಜೆಪಿಯ ಮಿತ್ರ ಪಕ್ಷಗಳೇ ...ಆದಿಸಿದವು. 1998 ರಲ್ಲಿ ಹಬ್ಬದ ದಿನಗಳ ...ದರ್ಭದಲ್ಲಿ ದೇಶದಾದ್ಯಂತ ಸಕ್ಕರೆ ಬೇಡಿಕೆ ...ಗುತ್ತಲಿದ್ದಾಗ, ಲೈಸನ್ಸ್ ಪದ್ಧತಿಯನ್ನು ತೆಗೆದು ...ಕುವುದರ ಮೂಲಕ ಸಕ್ಕರೆ ಕೈಗಾರಿಕೆ ಮಾಲಿಕರಿಗೆ ...ಟ್ಯಾಂತರ ರೂಪಾಯಿ ಲಾಭ ಮಾಡಿಕೊಟ್ಟ ...ಪಿ ಸರಕಾರ, ದೇಶದಾದ್ಯಂತ ಈರುಳ್ಳಿ ಕೊರತೆ ...ಸಂದರ್ಭದಲ್ಲಿ ರಫ್ತು ಮಾಡಲು ಅವಕಾಶ ...ಡಿಕೊಟ್ಟು 3 ರೂ. ಗೆ ಸಿಗುತ್ತಿದ್ದ ಈರುಳ್ಳಿ 30 ರೂ. ಆದದ್ದು - ಅದರಿಂದ ಬಿಜೆಪಿ ಬೆಂಬಲಿಗರಾದ ಮಂಡಿ ಮಾಲಿಕರಿಗೆ ಕೋಟ್ಯಾಂತರ ರೂಪಾಯಿ ಲಾಭ ಬಂದದ್ದು ಮರೆಯಲು ಸಾಧ್ಯವಿಲ್ಲ.

ಇದೀಗ ಕೇಂದ್ರದಲ್ಲಿ ಎರಡನೇ ಬಾರಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಭ್ರಷ್ಟಾಚಾರದ ಸರಮಾಲೆಯನ್ನೇ ಜನರ ಮುಂದಿರಿಸಿದೆ.

ತೆಹಲ್ಕಾ ಹಗರಣ: ದೇಶದಲ್ಲೆಲ್ಲಾ ಹಾಲಹಲವನ್ನೆಬ್ಬಿಸಿದ ತೆಹಲ್ಕಾ ಹಗರಣ, ವಾಜಪೇಯಿ ಸರಕಾರದ ಆಡಳಿತ ವ್ಯಾಪಕ ಭ್ರಷ್ಟಾಚಾರದಿಂದ ತುಂಬಿ ತುಳುಕಿದೆ ಎಂಬುದನ್ನು ಎತ್ತಿ ತೋರಿಸಿತು. ಹಿಂದೊಮ್ಮೆ ಕೇಂದ್ರ ಸಚಿವರಾಗಿದ್ದು, ನಂತರ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಬಂಗಾರು ಲಕ್ಷ್ಮಣ್‌ರವರು ತೆಹಲ್ಕಾ ತಂಡದಿಂದ ಮೊದಲ ಕಂತಾಗಿ ಒಂದು ಲಕ್ಷ ರೂ. ಹಣ ಎಣಿಸಿ 'ಇದು ನನಗಲ್ಲ, ನನ್ನ ಪಕ್ಷಕ್ಕೆ' ಎಂದು ಹೇಳಿರುವುದು ಎಂತಹವರಿಗೂ ಸೋಜಿಗವನ್ನುಂಟು ಮಾಡುತ್ತದೆ. ತೆಹಲ್ಕಾ ತಂಡದವರು, ತಾವು ರಕ್ಷಣಾ ಸಾಮಗ್ರಿಗಳನ್ನು ಮಾರಾಟ ಮಾಡುವ, 'ವೆಸ್ಟ್ ಎಂಡ್' ಕಂಪನಿಯವರು ಎಂದು ಹೇಳಿಕೊಂಡು ರಕ್ಷಣಾ ಇಲಾಖೆಯ ಅಧಿಕಾರಿಗಳನ್ನು, ಏಜೆಂಟರನ್ನು ಪರೀಕ್ಷಿಸಿ ನೋಡಿದಾಗ, ವಾಜಪೇಯಿ ಸರಕಾರದ ಅಡಿಯಲ್ಲಿ ಎಲ್ಲವೂ ಭ್ರಷ್ಟಾಚಾರದಿಂದ ತುಂಬಿದೆ ಎನ್ನುವುದು ಬೆಳಕಿಗೆ ಬಂತು.


ಇದಕ್ಕೆ ಪ್ರಾಮಾಣಿಕ ಮುಖವಾಡದ ವಾಜಪೇಯಿ ಮತ್ತು ಬಳಗ ಏನನ್ನುತ್ತಾರೆ? ಭ್ರಷ್ಟಾಚಾರದಲ್ಲಿ ಪಾಲುದಾರರಾದವರಿಗೆ, ಜವಾಬುದಾರರಿಗೆ ಈ ಸರಕಾರ ಏನು ಶಿಕ್ಷೆ ನೀಡಿದೆ. ವಿರೋಧ ಪಕ್ಷಗಳ ಒತ್ತಾಯದ ಮೇರೆಗೆ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಬಂಗಾರು ಲಕ್ಷ್ಮಣ್ ಮತ್ತು ರಕ್ಷಣಾ ಸಚಿವ ಸ್ಥಾನಕ್ಕೆ ಜಾರ್ಜ್ ಫರ್ನಾಡೀಸ್ ರಾಜಿನಾಮೆ ಕೊಡಬೇಕಾದ ಪರಿಸ್ಥಿತಿ ಬಂದರೂ ಅವರಿಬ್ಬರೂ ಬಿಜೆಪಿಯ, ಮೈತ್ರಿಕೂಟದ ಪ್ರಮುಖ ಮುಖಂಡರೇ. ಬಿಜೆಪಿ ಮಿತ್ರಪಕ್ಷಗಳ ಮುಖಂಡರು ಎಲ್ಲಾದರೂ 'ಫುಸ್' ಎಂದರೆ ಅಲ್ಲಿ ಹೋಗಿ 'ಠುಸ್' ಮಾಡುವ ಕೆಲಸ 'ಡೈನಾಮೇಟ್' ವೀರ ಜಾರ್ಜ್ ಫರ್ನಾಂಡಿಸ್‌ರದ್ದು!

ಯುಟಿಐ ಹಗರಣ: ಯುಟಿಐ ಹಗರಣದ ಬಗ್ಗೆ ವಿವರವಾದ ಲೇಖನವನ್ನು 'ಐಕ್ಯರಂಗ' ಈಗಾಗಲೇ ಪ್ರಕಟಿಸಿದೆ(ಜುಲೈ 15, 2001) ಯುನಿಟ್ ಟ್ರಸ್ಟ್ ಆಫ್ ಇಂಡಿಯಾ ಸಂಸ್ಥೆಯನ್ನು ಸಂಸತ್ತಿನಲ್ಲಿ ಅಂಗೀಕರಿಸಿದೆ. ಕಾಯಿದೆಯಡಿಯಲ್ಲಿ ಸ್ಥಾಪಿಸಲಾಯಿತು. ಇದರ ಪ್ರಮುಖ ಉದ್ದೇಶ -

1. ಜನರು ಕಷ್ಟಪಟ್ಟು ದುಡಿದ ಉಳಿತಾಯವನ್ನು ಸಂಗ್ರಹಿಸುವುದು.
2. ಆ ಹಣವನ್ನು ದೇಶದ ಲಾಭದಾಯಕ ಸಂಸ್ಥೆಗಳಲ್ಲಿ ತೊಡಗಿಸುವದು.
3. ಆ ಮೂಲಕ ದೇಶದ ಆರ್ಥಿಕ ಮತ್ತು ಕೈಗಾರಿಕೆಗಳ ಬೆಳವಣಿಗೆಗೆ ಸಹಾಯ ಮಾಡುವುದು.
4. ಅದರಿಂದ ಬಂದ ಲಾಭವನ್ನು ಜನರಿಗೆ ಹಂಚುವುದು.

ಇಂತಹ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಯುಟಿಐ ಬಹಳ ಜನಪ್ರಿಯವಾಗಿತ್ತು. ಸಾಧಾರಣಾ 2 ಕೋಟಿ ಹೂಡಿಕೆದಾರರು ಇದರಲ್ಲಿ ಹಣ ತೊಡಗಿಸಿದ್ದರು. ಅಂದರೆ ದೇಶದ ಪ್ರತಿ 50 ಜನರಲ್ಲಿ ಒಬ್ಬರು ಯುಟಿಐನಲ್ಲಿ ಒಂದಲ್ಲ ಒಂದು ವಿಧದಲ್ಲಿ ಹಣ ತೊಡಗಿಸಿದ್ದರು. ಅಂತಲೇ ಯುಎಸ್-64 ಎಂಬ ಯೋಜನೆ ಜನಪ್ರಿಯವಾದ ಯೋಜನೆ.

ಆದರೆ ಬಿಜೆಪಿ ನೇತೃತ್ವದ ಸರಕಾರ ಯುಟಿಐ ನ ಹಣವನ್ನು ಲಾಭದಾಯಕ ಸಂಸ್ಥೆಗಳಲ್ಲಿ ವಿನಿಯೋಗಿಸುವ ಬದಲಾಗಿ ತನ್ನ ಸಂಘ ಪರಿವಾರದ ಮುಖಂಡರು, ಹಿತೈಷಿಗಳು ಹುಟ್ಟು ಹಾಕಿದ ಖೋಟಾ ಕಂಪನಿಗಳಲ್ಲಿ ಹಣ ತೊಡಗಿಸಲು ಆದೇಶಿಸಿತು. ಅಂತಹ ಒಂದು ಕಂಪನಿ ಉತ್ತರ ಪ್ರದೇಶದ ಲಕ್ನೋದಲ್ಲಿ ಇದ್ದ 'ಸೈಬರ್ ಇನ್‌ಫೋಸಿಸ್' ಕಂಪನಿ, ಆರ್‌ಎಸ್‌ಎಸ್ ನ ಕಾರ್ಯಕರ್ತ ರಾಗಿದ್ದ ಜೋಹರಿ ಸಹೋದರರು ಇದರ ಸಂಸ್ಥಾಪಕರು. ಸ್ವತಃ ಪ್ರಧಾನ ಮಂತ್ರಿಯೇ ಈ ಕಂಪನಿಗೆ ಉತ್ತರಪ್ರದೇಶ ಸರಕಾರ ನೀಡಲಾದ ವಿಸ್ತಾರವಾದ ಭೂಮಿ ಯಲ್ಲಿ ಕಟ್ಟಡದ ಶಂಕುಸ್ಥಾಪನೆ ಮಾಡಿದರು.



ಏರುತ್ತಿದೆ ಹಗರಣಗಳ ಭಾರ

ಮಾತ್ರವಲ್ಲ, ಪ್ರಧಾನಮಂತ್ರಿ ಕಛೇರಿ ಮತ್ತು ಹಣಕಾಸು ಸಚಿವಾಲಯದ 'ಪ್ರಮುಖ' ಅಧಿಕಾರಿಗಳ ಒತ್ತಾಯದ ನಂತರವೇ ಯುಟಿಐ ಒಲ್ಲದ ಮನಸ್ಸಿನಿಂದ 32 ಕೋಟಿ ರೂ. ನ್ನು 'ಸೈಬರ್ ಇನ್‌ಫೋಸಿಸ್' ಕಂಪನಿಯಲ್ಲಿ ತೊಡಗಿಸಿತು. ಇದರಲ್ಲಿ ಚಿಕ್ಕಾಸು ವಾಪಾಸು ಬರುವಂತಿಲ್ಲ. ಇದನ್ನುರಾಜ್ಯ ಸಭೆಯಲ್ಲಿ ಎತ್ತಿದವರು ವಿರೋಧಿ ಪಕ್ಷದ ಸದಸ್ಯರಲ್ಲ, ಬಿಜೆಪಿ ಮೈತ್ರಿಕೂಟದ ಪ್ರಮುಖ ಪಾಲುದಾರ ಶಿವಸೇನೆಯ ಸಂಜಯ್ ನಿರುಪಮ್. ಇಂತಹ ಹಲವಾರು ಹೂಡಿಕೆಗಳಿಂದಾಗಿ ಹಣ ವಾಪಾಸು ಯುಟಿಐಗೆ ಬಾರದಂತಾಗಿ, ಹೂಡಿಕೆದಾರರಿಗೆ ಹಣವನ್ನು ವಾಪಾಸು ನೀಡುವ(ಮರು ಖರೀದಿ) ಯೋಜನೆಯನ್ನು ಸ್ಥಗಿತಗೊಳಿಸಿತು.

ಆದರೆ ಹೂಡಿಕೆದಾರರಿಗೆ ಹಣವನ್ನು ವಾಪಾಸು ನೀಡುವ ಯೋಜನೆಯನ್ನು ಸ್ಥಗಿತಗೊಳಿಸುವ ಅಂಶ ದೊಡ್ಡ ದೊಡ್ಡ ಸಂಸ್ಥೆಗಳಿಗೆ (ಕಾರ್ಪೊರೇಟ್ ಹೌಸ್) ಮೊದಲೇ ತಿಳಿದಿತ್ತು. ಅಂತೆಯೇ ಇಂತಹ ಕಂಪನಿಗಳು ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಸುಧಾರಣಾ 4000 ಕೋಟಿ ರೂ. ಹೂಡಿಕೆಯನ್ನು ಯುಟಿಐ ಗೆ ವಾಪಾಸು ನೀಡಿತು. 10 ರೂ. ಮುಖಬೆಲೆಯ ಯುನಿಟ್‌ನ್ನು ರೂ. 14.55 ಕ್ಕೆ ಮಾರಾಟ ಮಾಡಿತ್ತು. ಆದರೆ ಸಣ್ಣ ಹೂಡಿಕೆದಾರರಿಗೆ ಈಗ ನೀಡುತ್ತಿರುವ ಬೆಲೆ ರೂ. 10 ಮಾತ್ರ, ಅದು ಕೂಡಾ 3000 ಯುನಿಟ್‌ಗಳವರೆಗೆ. ಅಂದರೆ 30,000 ರೂ. ತೊಡಗಿಸಿದ ಸಣ್ಣ ಹೂಡಿಕೆದಾರನಿಗೆ ಇದೀಗ ಶೇ 40 ರಷ್ಟು ಅಂದರೆ ರೂ. 1200 ದಷ್ಟು ನಷ್ಟವುಂಟಾಗಿದೆ. ಎಲ್ಲಾ ಹೂಡಿಕೆದಾರರ ಒಟ್ಟು ನಷ್ಟ ರೂ. 6000 ಕೋಟಿ ಎಂದು ಅಂದಾಜು ಮಾಡಲಾಗಿದೆ. ಅಂದರೆ ಭ್ರಷ್ಟ ಬಿಜೆಪಿ ಸರಕಾರದ ನೀತಿ-ಸಣ್ಣ ಹೂಡಿಕೆದಾರರಿಗೆ ಗುಳುಂ-ಶ್ರೀಮಂತ ಹೂಡಿಕೆದಾರಿಗೆ, ಖೋಟಾ ಕಂಪನಿಗಳಿಗೆ ರುಸುಂ.

ಯುಟಿಐ ಹೂಡಿಕೆದಾರರ ಒಂದೊಂದು ಕುಟುಂಬದಲ್ಲಿ 5 ಜನ ಸದಸ್ಯರಿದ್ದಾರೆ ಎಂದು ಲೆಕ್ಕ ಹಾಕಿದರೆ 10 ಕೋಟಿ ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಶೇರು ಹಗರಣ : 1992 ರ ಹರ್ಷದ್ ಮೆಹ್ತಾ ಶೇರು ಹಗರಣ ಜನರ ಮನಸ್ಸಿನಿಂದ ಇನ್ನೂ ಮಾಸಿಲ್ಲ. ರಾಷ್ಟ್ರೀಕೃತ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಕ್ಕೆ ಇನ್ನು 882 ಕೋಟಿ ರೂ. ಬರಬೇಕಾಗಿದೆ. ಬಡ್ಡಿ ಸೇರಿದರೆ ಅದು 2000 ಕೋಟಿ ರೂ. ದಾಟುತ್ತದೆ. ಬ್ಯಾಂಕ್ ಆಫ್ ಕರಾಟ್ ಎನ್ನುವ ಖಾಸಗಿ ಬ್ಯಾಂಕನ್ನು ಮುಚ್ಚಬೇಕಾಯ್ತು. 300 ಕ್ಕೂ ಹೆಚ್ಚು ನೌಕರರು ಬೀದಿಪಾಲಾದರು. ಲಕ್ಷಾಂತರ ಜನರು ಕಷ್ಟಪಟ್ಟು ಉಳಿತಾಯ ಮಾಡಿದ ಹಣವನ್ನು ಈವರೆಗೂ ವಾಪಾಸು ಮಾಡಿದ ಬಗ್ಗೆ ವರದಿಗಳಿಲ್ಲ.

ಇದೀಗ ಇನ್ನೊಂದು ಹಗರಣ ಬೆಳಕಿಗೆ ಬಂದಿದೆ. ಕೇತನ್ ಪರೇಖ್ ಎನ್ನುವ ದಲ್ಲಾಳಿ. 12000 ಕೋಟಿ ರೂ. ಗಳಿಗೂ ಹೆಚ್ಚಿನ ಸಾಲ ಮಾಡಿ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಶೇರುಗಳನ್ನು ಖರೀದಿಸಿತ್ತು. ಇದರಿಂದ ಮಾರುಕಟ್ಟೆಯಲ್ಲಿ ಶೇರುಗಳ ದಡ ತೀವ್ರವಾಗಿ ಹೆಚ್ಚಾಯಿತು. 100 ರೂ. ಗಳಿಗಿಂತಲೂ ಕಡಿಮೆ ಬೆಲೆಯ ಶೇರುಗಳು 250 ರೂ.ಗಳಿಗಿಂತಲೂ ಹೆಚ್ಚು ಬೆಲೆಗೆ ಮಾರಾಟವಾದವು. ಆದರೂ ಪಡೆದ ಸಾಲವನ್ನು ವಾಪಾಸು ನೀಡಲು ಸಾಧ್ಯವಾಗದೆ ಹೋದಾಗ ಪ್ರಕರಣ ಬೆಳಕಿಗೆ ಬಂದಿತು. ಇದರಿಂದ ಮಾಧವಪುರ ಸಹಕಾರಿ ಬ್ಯಾಂಕು ಮತ್ತು ಬ್ಯಾಂಕ್ ಆಫ್ ಇಂಡಿಯಾದ ಶಾಖೆಗಳನ್ನು ಮುಚ್ಚಬೇಕಾಯ್ತು. ಲಕ್ಷಾಂತರ ಠೇವಣಿದಾರರ ಹಣ ವಾಪಾಸು ಬಂದಿಲ್ಲ. ಸರಕಾರಿ ನಿಯಂತ್ರಿತ ಸ್ಟಾಕ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (SEBI) ಮಾರುಕಟ್ಟೆಯನ್ನು ನಿಯಂತ್ರಿಸಲು ಸಾಧ್ಯವಾಗದೆ ಹೋದುದರಿಂದ ಒಟ್ಟು 1,84,00 ಕೋಟಿ ರೂ. ವಂಚನೆ ನಡೆದಿದೆ ಎಂದು ನಂಬಲಾಗಿದೆ.

ತಾನು ಮಂಡಿಸಿದ ಬಜೆಟ್ಟನ್ನು ವೈಭವೀಕರಿಸಲು ಶೇರು ಮಾರುಕಟ್ಟೆಯನ್ನು ಬಳಸಿಕೊಂಡ ಭ್ರಷ್ಟ ಬಿಜೆಪಿ ಸರಕಾರ ಜನತೆಗೆ ನಡೆದ ವಂಚನೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಮಾರಿಷಸ್ ಮೂಲಕ ವಂಚನೆ: ಹಿಂದೂ ಮಹಾ ಸಾಗರದಲ್ಲಿರುವ ಮಾರಿಷಸ್ ಚಿಕ್ಕದೊಂದು ದ್ವೀಪ. ಆದರೆ ಜಗತ್ತಿನ ಶ್ರೀಮಂತರಿಗೆಲ್ಲ ಮೋಜು ನೀಡುವ ತಾಣ. ಇದೀಗ ಬಿಜೆಪಿ ಸರ್ಕಾರದ ನೀತಿಗಳಿಂದ ಕೋಟಿಗಟ್ಟಲೆ ತೆರಿಗೆ ವಂಚಿಸುವ ಕೇಂದ್ರವಾಗಿ ಮಾರ್ಪಟ್ಟಿದೆ.

1983 ರಲ್ಲಿ ನಡೆದ ಭಾರತ ಮಾರಿಷಸ್ ವಾಣಿಜ್ಯ ಒಪ್ಪಂದದ ಪ್ರಕಾರ ಯಾವುದೇ ಒಬ್ಬ ವ್ಯಕ್ತಿ ಅಥವಾ ಕಂಪನಿ ಭಾರತ ಮತ್ತು ಮಾರಿಷಸ್ ನಡುವಣ ವ್ಯಾಪಾರ ನಡೆಸಿದರೆ ಎರಡೂ ದೇಶಗಳ ತೆರಿಗೆ ನೀಡುವ ಬದಲಾಗಿ ಯಾವುದಾದರೂ ಒಂದು ದೇಶದಲ್ಲಿ ಮಾತ್ರ ತೆರಿಗೆ ನೀಡಿದರೆ ಸಾಕು. ಇದು ಎರಡೂ ದೇಶಗಳಲ್ಲಿ ಒಂದೇ ನಮೂನೆಯ ತೆರಿಗೆ ಇದ್ದಾಗ ಮಾತ್ರ.

ಆದರೆ ಮಾರಿಷಸ್ ದೇಶದಲ್ಲಿ ಬಂಡವಾಳ ಹೂಡಿಕೆಯಿಂದ ಬಂದ ಲಾಭದ ಮೇಲೆ ತೆರಿಗೆ (Capital Gain Tax) ವಿಧಿಸುವುದಿಲ್ಲ. ಆದರೆ ಭಾರತದಲ್ಲಿ ಈ ತೆರಿಗೆಯನ್ನು ವಿಧಿಸಲಾಗುತ್ತಿದೆ. ಕೆಲವೊಂದು ವಿದೇಶಿ ಕಂಪನಿಗಳು ನೆಪಮಾತ್ರಕ್ಕೆ ಕಂಪನಿಗಳನ್ನು ಮಾರಿಷಸ್‌ನಲ್ಲಿ ರಿಜಿಸ್ಟಾರ್ ಮಾಡಿ, ಭಾರತದಲ್ಲಿ ಶೇರುಗಳ ಮಾರಾಟದಿಂದ ಬಂದ ಲಾಭವನ್ನು ವಿದೇಶಗಳಿಗೆ ಕಳುಹಿಸುತ್ತಿದ್ದವು. ಶೇರು ಹಗರಣದಲ್ಲಿ ಸಿಲುಕಿರುವ ಖೇತನ್ ಪಾರಿಖ್ ಕೂಡಾ ಇಂತಹ ಕಂಪನಿಗಳ ಮೂಲಕ ಹಣ ರವಾನಿಸುತ್ತಿದ್ದ (ಐಕ್ಯರಂಗ, ಆಗಸ್ಟ್ 19, 2001 - ಈ ವಂಚನೆ ನಡೆದದ್ದು ಹೇಗೆ? ಲೇಖನ ಓದಿ) ಆದಾಯ ತೆರಿಗೆ ಅಧಿಕಾರಿಗಳು ಅಂತಹ ಕಂಪನಿಗಳು ತೆರಿಗೆ ನೀಡಬೇಕೆಂದು ನೋಟೀಸು ನೀಡಿದಾಗ ಸ್ವತಃ ಹಣಕಾಸು ಸಚಿವರು ಮಧ್ಯಪ್ರವೇಶ ಮಾಡಿ ಮಾರಿಷಸ್ ನಲ್ಲಿ ರಿಜಿಸ್ಟರ್ ಆಗಿರುವ ಯಾವುದೇ ಕಂಪನಿ ತೆರಿಗೆ ನೀಡುವ ಅಗತ್ಯ ಇಲ್ಲ ಎಂದು ಘೋಷಿಸಿದರು. ಇದರಿಂದ ಭಾರತ ದೇಶಕ್ಕೆ ಪ್ರತಿವರ್ಷ ಆಗುತ್ತಿರುವ ನಷ್ಟ 3000 ಕೋಟಿ ರೂಪಾಯಿಗಳು!

ರಾಷ್ಟ್ರೀಕೃತ ಬ್ಯಾಂಕುಗಳ ಲೂಟಿ: ದೇಶದ ಆರ್ಥಿಕ ಬೆನ್ನೆಲುಬಾಗಿರುವ ರಾಷ್ಟ್ರೀಕೃತ ಬ್ಯಾಂಕುಗಳ ಲೂಟಿ ಒಂದೇ ಸಮನೆ ನಡೆಯುತ್ತಿದೆ. ಈಗಾಗಲೇ 80,000 ಕೋಟಿ ರೂ. ವಾಪಾಸು ಬಾರದ ಸಾಲ ಎಂದು ನಿಗದಿಗೊಳಿಸಲಾಗಿದ್ದು ಅದರ ವಸೂಲಾತಿಗೆ ಯಾವುದೇ ಕ್ರಮವಿಲ್ಲ. ಈ ಸಾಲ ಬಾಕಿ ಉಳಿಸಿಕೊಂಡವರಲ್ಲಿ ದೊಡ್ಡ ಕೈಗಾರಿಕೋದ್ಯಮಿಗಳೇ ಹೆಚ್ಚು. ಆದರೆ ಅದರ ಮಾಲಕರ ಆಸ್ತಿಯನ್ನು ಮುಟ್ಟುಗೋಲು ಹಾಕಲು ಸರಾಕರ ಯಾವುದೇ ಕ್ರಮ ಕೈಗೊಂಡಿಲ್ಲ. ಆದರೆ ಬಡರೈತನ 5000 ಸಾಲಕ್ಕೆ ಮನೆ ಜಪ್ತಿ ಮಾಡಲಾಗುತ್ತದೆ. 3 ಬ್ಯಾಂಕುಗಳು ನಷ್ಟದಲ್ಲಿವೆ ಎಂಬ ಕಾರಣ ನೀಡಿ ವೇತನ ಹೆಚ್ಚಳದ

→

ಅಮೆರಿಕಕ್ಕೆ ಅಡಿಯಾಳಾಗುವ ನೀತಿಗಳನ್ನು ಬದಲಿಸಿ.........

ಪುಟ 4 ರಿಂದ

(ಸೇರಿದಂತೆ) ಹೊಸೆಯಲು ಹೊರಟಿದೆ. ಇದರಿಂದ ಪ್ಯಾಲೆಸ್ತೀನ್‌ರ ನ್ಯಾಯಯುತ ಹೋರಾಟಕ್ಕೆ, ಅರಬ್ ದೇಶಗಳ ಜತೆ ಸಂಬಂಧಕ್ಕೆ ಧಕ್ಕೆ ಬರುತ್ತದೆ, ಇದು ಭಾರತದ ರಾಷ್ಟ್ರೀಯ ಹಿತಕ್ಕೆ ಅನುಗುಣವಾದುದಲ್ಲ. ಆದರೆ ವಾಜಪೇಯಿ ಸರ್ಕಾರಕ್ಕೆ ರಾಷ್ಟ್ರೀಯ ಹಿತಕ್ಕಿಂತ ಅಮೆರಿಕದ 'ಪಾರ್ಟನರ್ ಸರ್ಟಿಫಿಕೇಟ್' ಹೆಚ್ಚು ಮುಖ್ಯವಾಗಿವೆ.

ಉಪಖಂಡದಲ್ಲಿ ಅಮೆರಿಕದ ಮೂಗು ತೂರಿಸಲು ಕುಮ್ಮಕ್ಕು

1998 ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಭಾರತೀಯ ಉಪಖಂಡದಲ್ಲಿ (ಭಾರತ ನೆರೆಹೊರೆಯಲ್ಲಿ) ಅಮೆರಿಕ ಮಧ್ಯಪ್ರವೇಶ ಮಾಡಲು ಈ ಸರ್ಕಾರ ಹಲವು ಬಾರಿ ಆಮಂತ್ರಿಸಿದೆ. ಇದು ಭಾರತದ ಮತ್ತು ನೆರೆಹೊರೆಯ ನಡುವೆ ಶಾಂತಿಯುತ ಸಹಬಾಳ್ವೆಗೆ ಮಾರಕವಾದದ್ದು. ಇಡೀ ಪ್ರದೇಶದ ಜನರ ಹಿತಾಸಕ್ತಿಗಳಿಗೆ ವಿರುದ್ಧವಾದದ್ದು. ಮೇ 1998 ರಲ್ಲಿ ಪೋಖ್ರಾನ್ ಅಣುಬಾಂಬ್ ಪರೀಕ್ಷಣೆಯ ನಂತರ ವಾಜಪೇಯಿ ಕ್ಲಿಂಟನ್‌ಗೆ ಪತ್ರ ಬರೆದು ಚೀನಾದಿಂದ ದೇಶಕ್ಕೆ ಅಪಾಯವಿದೆಯೆಂದಿದ್ದರು. ಚೀನಾದ ಅಪಾಯದ ಬಗ್ಗೆ ಅಮೆರಿಕ ಏನಾದರೂ ಮಾಡುವುದಾದರೆ, ಅದನ್ನು ತಾನು ಬೆಂಬಲಿಸುವುದಾಗಿ ಆ ಪತ್ರದಲ್ಲಿ ಹೇಳಲಾಗಿತ್ತು.

ಕಾರ್ಗಿಲ್ ಯುದ್ಧದ ಸಮಯದಲ್ಲಿ ಪುನಃ ವಾಜಪೇಯಿ ಸರ್ಕಾರ ಕ್ಲಿಂಟನ್‌ಗೆ ಪತ್ರ ಬರೆದು, ಪಾಕಿಸ್ತಾನದ ಪ್ರಧಾನಿ ಮೇಲೆ ಒತ್ತಡ ಹಾಕಿ ಸೈನ್ಯ ಹಿಂತೆಗೆದುಕೊಳ್ಳುವಂತೆ ಮಾಡಬೇಕೆಂದು ಕೋರಿದ್ದರು. ಕಾಶ್ಮೀರದಲ್ಲಿ ತನ್ನ ಮಧ್ಯಪ್ರವೇಶ ಒಪ್ಪುವುದಾದರೆ, ಅದನ್ನು ಮಾಡಲು ತಯಾರು ಎಂಬ ಕ್ಲಿಂಟನ್ ಶರತ್ತಿಗೆ ವಾಜಪೇಯಿ ಸರ್ಕಾರ ಒಪ್ಪಿದ ಮೇಲೆ ಕ್ಲಿಂಟನ್ ಪಾಕಿಸ್ತಾನಿ ಪ್ರಧಾನಿ ಮೇಲೆ ಒತ್ತಡ ಹೇರಿದ್ದರು ಕಾರ್ಗಿಲ್ ಕದನ ನಿಲ್ಲಿಸಲು.

1998 ರಿಂದ 10 ತಿಂಗಳ ಕಾಲ ವಿದೇಶ ಮಂತ್ರಿ ಜಸ್ವಂತ್ ಸಿಂಗ್ ಮತ್ತು ಅಮೆರಿಕದ ಪ್ರತಿನಿಧಿಗಳು ನಡುವೆ ದಕ್ಷಿಣ ಏಶ್ಯಾದಲ್ಲಿ ಅಮೆರಿಕದ ಯಜಮಾನಿಕೆ ಬಲಪಡಿಸಲು ಭಾರತ ಏನು ಮಾಡಬೇಕು ಎಂಬುದರ ಬಗ್ಗೆ ಗುಪ್ತ ಮಾತುಕತೆಗಳು ನಡೆಯುತ್ತಾ ಬಂದಿವೆ. ಇದು ದೇಶದ ಹಿತಾಸಕ್ತಿಗೆ ವಿರುದ್ಧವಾಗಿಲ್ಲದಿದ್ದರೆ, ಮಾತುಕತೆಗಳು ಯಾಕೆ ಗುಪ್ತವಾಗಿರಬೇಕು?

ವಾಜಪೇಯಿ ಸರ್ಕಾರದ ಶರಣಾಗತಿ ನೀತಿಯೂ ಅಮೆರಿಕದಿಂದ ಯಾವುದೇ ಸವಲತ್ತು ಒದಗಿಸಿಕೊಳ್ಳಲು ಸಾಧ್ಯವಾಗಿಲ್ಲ. ಪೋಖ್ರಾನ್ ಅಣು ಪರೀಕ್ಷೆಯ ಸಮಯದಲ್ಲಿ (ಹಾಗೂ ಇನ್ನೂ ಹಿಂದೆ) ವಿಧಿಸಲಾದ 150 ವೈಜ್ಞಾನಿಕ, ಕೈಗಾರಿಕಾ, ತಂತ್ರಜ್ಞಾನ ಸಂಘಟನೆಗಳ ಮೇಲೆ ಅಮೆರಿಕ ಉಚ್ಚ ತಂತ್ರಜ್ಞಾನದ ರಫ್ತು ಬಗೆಗಿನ ದಿಗ್ಬಂಧನ ಇನ್ನೂ ಹಾಗೆ ಇದೆ. ಅದೇ ರೀತಿ ಭಾರತಕ್ಕೆ ಉಚ್ಚ ಮಿಲಿಟರಿ ತಂತ್ರಜ್ಞಾನ ರಫ್ತು ಬಗೆಗಿರುವ ದಿಗ್ಬಂಧನವೂ ಹಾಗೆ ಇದೆ.



ಅಮೆರಿಕಾ ನೀತಿಗಳನ್ನು ವಿರೋಧಿಸುತ್ತೀರೋ? ಕಾದಿದೆ ನಿಮಗೆ

ಈ ರೀತಿ, ವಾಜಪೇಯಿ ಸರ್ಕಾರದ ಈ ನೀತಿ ದೇಶದ, ಈ ಪ್ರದೇಶದ ಬೆಳವಣಿಗೆ ಮತ್ತು ಶಾಂತಿಗೆ ಮಾರಕವಾಗಿದೆ.

ಅಪಾಯಕಾರಿ ಮಿಲಿಟರಿ ಸಹಕಾರ

ಅಮೆರಿಕದ ಜತೆ ಮಿಲಿಟರಿ ಸಹಕಾರ ಆರಂಭಿಸಿದ್ದು ನರಸಿಂಹರಾವ್ ರವರ ಕಾಂಗ್ರೆಸ್ ಸರ್ಕಾರವೇನೋ ನಿಜ. ಆದರೆ ವಾಜಪೇಯಿ ಸರ್ಕಾರ ಅಮೆರಿಕದ ಜತೆ ಮಿಲಿಟರಿ ಸಂಬಂಧ ಹೊಂದಲು ಯಾವಾಗಲೂ ಉತ್ಸುಕವಾಗಿತ್ತು. ವಾಜಪೇಯಿ ಸರ್ಕಾರ ನಡೆಸಿದ ಪೋಖ್ರಾನ್-II ಅಣುಪರೀಕ್ಷೆಯ ಪರಿಣಾಮವಾಗಿ ಅಮೆರಿಕ ಮಿಲಿಟರಿ ಸಹಕಾರವನ್ನು ನಿಲ್ಲಿಸಿತ್ತು. ನವೆಂಬರ್ 1999 ರಷ್ಟು ಹೊತ್ತಿಗೆ ಅಮೆರಿಕ ಮಿಲಿಟರಿ ತರಬೇತಿ ವಿನಿಮಯ ಕಾರ್ಯಕ್ರಮ ಪುನರಾರಂಭಿಸಲು ಅಮೆರಿಕ ಕೇಳಿತು. ಭಾರತೀಯ ಸೈನ್ಯಕ್ಕೆ ಮಿಲಿಟರಿ ಉಪಕರಣಗಳ ರಫ್ತು ಮೇಲಿನ ನಿಷೇಧವನ್ನು ಅಮೆರಿಕ ತೆಗೆದು ಹಾಕದಿದ್ದರೂ, ವಾಜಪೇಯಿ ಸರ್ಕಾರ ಮಿಲಿಟರಿ ಸಹಕಾರಕ್ಕೆ ತರಾತುರಿಯಿಂದ ಒಪ್ಪಿಕೊಂಡಿತು.

ವಾಜಪೇಯಿ ಮತ್ತು ಜಸ್ವಂತ್ ಸಿಂಗ್ ಎರಡೂ ದೇಶಗಳ ಸೈನ್ಯಗಳ ನಡುವೆ ಮಿಲಿಟರಿ ಸಹಕಾರಕ್ಕೆ ಒಪ್ಪಿಕೊಂಡಿದ್ದಾರೆ. ಇದು ಭೂಸೈನ್ಯ, ನೌಕಾಸೈನ್ಯ, ವಾಯುಸೈನ್ಯ ಎಲ್ಲವನ್ನು ಒಳಗೊಂಡಿದೆ. ಅಮೆರಿಕದ ಮಿಲಿಟರಿ ಪರಿಣತರು ಭಾರತದ ಮಿಲಿಟರಿ ತರಬೇತಿ ಸಂಘಟನೆಗಳಲ್ಲಿ ಬಂದು ತರಬೇತಿ ನೀಡುತ್ತಾರೆ. ಭಾರತದ ಮಿಲಿಟರಿ ಅಧಿಕಾರಿಗಳು ಅಮೆರಿಕಕ್ಕೆ ತರಬೇತಿಗೆ ಹೋಗುತ್ತಾರೆ ಈ ಒಪ್ಪಂದದ ಭಾಗವಾಗಿ.

ಮಿಲಿಟರಿ ತರಬೇತಿಯಲ್ಲಿ ಎರಡೂ ದೇಶಗಳು ಸಹಕರಿಸಿದರೆ ಅದರಲ್ಲೇನು ತಪ್ಪು ಎಂದು ಯಾರಾದರೂ ಕೇಳಬಹುದು. ಆದರೆ **ಅಮೆರಿಕ ಯಾವುದೇ ದೇಶದ ಜತೆ ಮಿಲಿಟರಿ ತರಬೇತಿ ಒಪ್ಪಂದ ಹೊಂದಿರುವುದರ ಅರ್ಥ ಏನು ಎಂಬುದು ಎರಡನೇ ಮಹಾಯುದ್ಧದ ನಂತರದ ಚರಿತ್ರೆ ಹೇಳುತ್ತದೆ.** ಅಮೆರಿಕ ಯಾವುದಾದರೂ ದೇಶದಲ್ಲಿ ತನ್ನ ಪ್ರಭಾವ ಬೀರಬೇಕು ಎಂದು ನಿರ್ಧರಿಸಿದಾಗ, ಅವರ ಸೈನ್ಯದ ಹಿರಿಯ ಅಧಿಕಾರಿಗಳನ್ನು ತಮ್ಮ ಪ್ರಭಾವಲಯಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸುತ್ತದೆ. ಇದನ್ನು ಸರಿಯಾದ ಸಮಯದಲ್ಲಿ ಮುಂದೆ ಬಳಸುತ್ತದೆ. ಜಗತ್ತಿನ ಹಲವಾರು ಮಿಲಿಟರಿ ಸರ್ವಾಧಿಕಾರಿಗಳು ಇಂತಹ ಮಿಲಿಟರಿ ಸಹಕಾರದ ತರಬೇತಿ ಪಡೆದವರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು. ಇಂಡೋನೇಶ್ಯಾವನ್ನು ಮೂರು ದಶಕಗಳಷ್ಟು ಹೆಚ್ಚು ಕಾಲ ಆಳಿದ ಜನರಲ್ ಸುಹಾರ್ತೋ, ಪಾಕಿಸ್ತಾನದ ಈಗಿನ ಅಧ್ಯಕ್ಷ ಜನರಲ್ ಮುಷರಫ್, ದಕ್ಷಿಣ ಅಮೆರಿಕಾದ ಹಲವಾರು ಮಿಲಿಟರಿ ಸರ್ವಾಧಿಕಾರಿಗಳು ಅಮೆರಿಕದಲ್ಲಿ ತರಬೇತಿ ಹೊಂದಿದವರು. ಇಂಡೋನೇಶ್ಯಾದಲ್ಲಿ ಅಧ್ಯಕ್ಷ ಸುಕಾರ್ನೋ ಮತ್ತು ಕಮ್ಯುನಿಸ್ಟ್ ಪಕ್ಷದ ಸಂಯುಕ್ತ ರಂಗ ಸರ್ಕಾರವನ್ನು ಉರುಳಿಸಲು ಜನರಲ್ ಸುಹಾರ್ತೋನನ್ನು ಅಮೆರಿಕ ಬಳಸಿತ್ತು. **ಅಮೆರಿಕದ ಗೂಢಚಾರ ಸಂಸ್ಥೆ ಸಿಐಎ ಜತೆ ಸೇರಿ 10 ಲಕ್ಷ ಕಮ್ಯುನಿಸ್ಟ ಮತ್ತು ಅವರ ಬೆಂಬಲಿಗರ ನರಮೇಧಕ್ಕೆ ಜನರಲ್ ಸುಹಾರ್ತೋರಂತಹ 'ಅಮೆರಿಕದ ತರಬೇತಿ' ಹೊಂದಿದ ಸೈನ್ಯಾಧಿಕಾರಿಗಳು ನಡೆಸಿದರು.** ಆ ದೇಶದ ರಾಜಕೀಯ - ಆರ್ಥಿಕ - ಸಾಮಾಜಿಕ ಬೆಳವಣಿಗೆಯ ದಿಕ್ಕನ್ನೇ ಅತ್ಯಂತ ಹಿಂಸಾತ್ಮಕವಾಗಿ ಬದಲಾಯಿಸಿತು. ಇವೆಲ್ಲವನ್ನು ಗಮನಿಸಿದರೆ ಅಮೆರಿಕದ ಜತೆ ಮಿಲಿಟರಿ ಸಹಕಾರದ ಅಪಾಯದ ಬಗ್ಗೆ ತಿಳಿಯುತ್ತದೆ. ಅಮೆರಿಕದ ಜತೆ ಮಿಲಿಟರಿ ಸಹಕಾರ ಭಾರತದ ಸೈನ್ಯದ ಸಮಗ್ರತೆಗೆ ಮತ್ತು ರಾಷ್ಟ್ರೀಯ ಭದ್ರತೆಗೆ ಸಂಚಕಾರ ತರುವಂತಹದು.

ಭಾರತದ ಹಿಂದಿನ ಸರ್ಕಾರಗಳೆಲ್ಲ ಹಿಂದೂಮಹಾಸಾಗರದಲ್ಲಿರುವ **ಡಿಯಾಗೋ ಗಾರ್ಸಿಯಾ ದ್ವೀಪದಲ್ಲಿ ಅಮೆರಿಕದ ಮಿಲಿಟರಿ ನೆಲೆಯನ್ನು** ವಿರೋಧಿಸುತ್ತಾ ಬಂದಿದೆ. ಈ ಮಿಲಿಟರಿ ನೆಲೆಯನ್ನು ಬಳಸಿ ಈ ಪ್ರದೇಶದಲ್ಲಿ ಮಿಲಿಟರಿಯಾಗಿ ಮಧ್ಯಪ್ರದೇಶ ಮಾಡಲು ಅನುವು ಮಾಡಿಕೊಡುತ್ತದೆ ಎಂಬುದು ಈ ನೀತಿಯ ಹಿಂದಿನ ವಾದವಾಗಿತ್ತು. ಆದರೆ ಬಿಜೆಪಿ ಸರ್ಕಾರ ಈ ನೀತಿಯ ಹಿಂದಿನ ಈ ಮಿಲಿಟರಿ ನೆಲೆ ಬಳಸುವಲ್ಲಿ ಅಮೆರಿಕಕ್ಕೆ ಸಹಕಾರ ಕೊಡಲು ಬಯಸುತ್ತಾರೆ. ಡಿಯಾಗೋ ಗಾರ್ಸಿಯಾದ ಮಿಲಿಟರಿ ನೆಲೆ ಭಾರತದ ಭದ್ರತೆಗೆ ಅಪಾಯಕರ. **ಅಮೆರಿಕದ ಸ್ನೇಹ ಗಿಟ್ಟಿಸಲು ಬಿಜೆಪಿ ಸರ್ಕಾರ ರಾಷ್ಟ್ರೀಯ ಭದ್ರತೆಯ ಬಲಿಕೊಡಲೂ ತಯಾರು.**

ಸಾಮ್ರಾಜ್ಯಶಾಹಿ-ಪರ ನೀತಿ ಇವರ ರಕ್ತದಲ್ಲೇ ಇದೆ

ವಾಜಪೇಯಿ ಸರ್ಕಾರ ಅಮೆರಿಕನ್-ಪರ, ಸಾಮ್ರಾಜ್ಯಶಾಹಿ-ಪರ ಎಂಬುದರ ಬಗ್ಗೆಯಾರೂ ಆಶ್ಚರ್ಯ ಪಡಲೇಬೇಕಾಗಿಲ್ಲ. ಬಿಜೆಪಿ ಮತ್ತು ಆರೆಸ್ಸೆಸ್ ಯಾವಾಗಲೂ ಸಾಮ್ರಾಜ್ಯಶಾಹಿ-ಪರ ಇದ್ದ ರಾಜಕೀಯ ಶಕ್ತಿಗಳು, ಆರೆಸ್ಸೆಸ್ ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧಕ್ಕಿಂತ ಹೆಚ್ಚಾಗಿ ಮುಸ್ಲಿಮರ ವಿರುದ್ಧ ಹೋರಾಡುವ ತರಾತುರಿಯಲ್ಲಿತ್ತು. ಬಿಜೆಪಿಯ ಹಿಂದಿನ ರಾಜಕೀಯ ಅವಕಾಶವಾದ ಜನಸಂಘ ಅಮೆರಿಕದ ಪರವಾಗೇ ಇತ್ತು ಯಾವಾಗಲೂ. ಅದು ಎಷ್ಟು ಅಂಧ-ಅಮೆರಿಕ ಪರವಾಗಿತ್ತು ಎಂದರೆ, ಇಡೀ ಜಗತ್ತೇ (ಅಮೆರಿಕದ ಜನತೆ ಸೇರಿ) ವಿಯೆಟ್ನಾಮ್ ಮೇಲೆ ಅಮೆರಿಕದ ಧಾಳಿಯನ್ನು ಖಂಡಿಸುತ್ತಿದ್ದಾಗ, ಅದಕ್ಕೆ ಜನಸಂಘ ಬೆಂಬಲ ನೀಡಿತ್ತು! ಇಂಥವರಿಂದ ದಿವಾಳಿಖೋರ ಸಾಮ್ರಾಜ್ಯಶಾಹಿ-ಪರ ನೀತಿಗಳನ್ನಲ್ಲದೆ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ?

ಸಾಮ್ರಾಜ್ಯಶಾಹಿ-ಪರ ವಾಜಪೇಯಿ ಸರ್ಕಾರವನ್ನು ಕೆಳಗಿಳಿಸಿ!!

ಭಾರತಕ್ಕಾಗಿ - ದಯವಿಟ್ಟು ತೊಲಗಿ!

→

ಬಾಕಿ ಹಣವನ್ನು ನೀಡಿಲ್ಲ ಮಾತ್ರವಲ್ಲ ನೌಕರರು ಹೋರಾಟ ಮಾಡಿ ಗಳಿಸಿದ ವಿಹಾರಾರ್ಥ ಪ್ರಮಾಣ ವೆಚ್ಚವನ್ನು(ಎಲ್‌ಟಿಸಿ) ಸ್ಥಗಿತಗೊಳಿಸಲಾಗಿದೆ.

ಬೆಲೆ ಬಾಳುವ ಸರಾಕರಿ ಕಂಪನಿಗಳನ್ನು ಅಗ್ಗದ ಬೆಲೆಗೆ ಮಾರಾಟ

2200 ಕೋಟಿ ರೂ. ಬೆಲೆಬಾಳುವ ಮಾಡರ್ನ್‌ಫುಡ್ ಕಂಪನಿಯನ್ನು ಬರೀ 150 ಕೋಟಿ ರೂ.ಗಳಿಗೆ ಮಾರಾಟ ಮಾಡಿದರೆ 5500 ಕೋಟಿ ರೂ. ಬೆಲೆ ಬಾಳುವ ಬಾಲ್ಕೊ ಕಂಪನಿಯನ್ನು 551.5 ಕೋಟಿ ರೂ.ಗೆ ಖಾಸಗಿ ಕಂಪನಿಗಳಿಗೆ ಮಾರಾಟ ಮಾಡಲಾಗಿದೆ. ಬಾಲ್ಕೊ ಕಂಪನಿಯನ್ನು ಕೊಂಡುಕೊಂಡ ಸ್ಟರ್‌ಲೈಟ್ ಕಂಪನಿ ಬಾಲ್ಕೊವನ್ನು ಬೇರೆಯವರಿಗೆ 2000 ಕೋಟಿ ರೂ. ಗಳಿಗೆ ಮಾರಾಟ ಮಾಡಲು ತಯಾರಾಗಿದೆ ಎಂಬ ದಟ್ಟ ವದಂತಿಗಳು ಹಬ್ಬುತ್ತಿವೆ.

ಇದೀಗ ಪ್ರತಿಷ್ಠಿತ ಏರ್‌ಇಂಡಿಯಾವನ್ನು ಅಗ್ಗದ ಬೆಲೆಗೆ ಮಾರಾಟ ಮಾಡಲು ಹುನ್ನಾರ ನಡೆಯುತ್ತಿದೆ. 'ಬಿಡ್'ನಲ್ಲಿ ಒಬ್ಬನೇ ಒಬ್ಬ ಖರೀದಿಗಾರ ಮಾತ್ರ ಉಳಿದಿದ್ದರೂ, ಅವರಿಗೇ (ಟಾಟಾ ಕಂಪನಿ) ಮಾರಾಟ ಮಾಡಲು ತಯಾರಿ ನಡೆಯುತ್ತಿದೆ. ಆಶ್ಚರ್ಯದ ಸಂಗತಿ ಎಂದರೆ ಏರ್‌ಇಂಡಿಯಾದ ಆಸ್ತಿಯ ಮೌಲ್ಯವನ್ನು ನಿರ್ಧಾರ ಮಾಡುವ ಗುತ್ತಿಗೆಯನ್ನು ಟಾಟಾ ಕಂಪನಿಗೆ ಸಂಬಂಧಪಟ್ಟವರಿಗೆ ನೀಡಲಾಗಿತ್ತು.

ಮುಂದಿನ ದಿನಗಳಲ್ಲಿ ಅತ್ಯಂತ ಲಾಭದಾಯಕವಾಗಿರುವ ಎಂ.ಟಿಎನ್.ಎಲ್., ವಿಎಸ್‌ಎನ್ ಎಲ್, ಜಿಎಐಎಲ್ ಮೊದಲಾದ ಕಂಪನಿಗಳನ್ನು ಮಾರಾಟ ಮಾಡುವ ಹುನ್ನಾರವೂ ನಡೆಯುತ್ತಿದೆ.

ರಕ್ಷಣಾ ಇಲಾಖೆ: ಇದಲ್ಲದೆ ರಕ್ಷಣಾ ಸಾಮಗ್ರಿಗಳ ಖರೀದಿಯಲ್ಲೂ ಸಾಕಷ್ಟು ಅವ್ಯವಹಾರ ನಡೆಯುತ್ತಿದೆ. ತೆಹಲ್ಕಾ ತಂಡವರು ಬಹಿರಂಗ ಗೊಳಿಸಿ ಹಗರಣ ಅತಿ ಅಲ್ಪ.

ಡಿಫೆನ್ಸ್ ಜೆಟ್ ಟ್ರೈನರ್ ಎನ್ನುವ ಯುದ್ಧ ವಿಮಾನ ಭಾರತಕ್ಕೆ ಬೇಕಾಗಿದೆ. ಇದಕ್ಕೆ ಬ್ರಿಟಿಷ್ ಏರೋನಾಟಿಕ್ಸ್ ಕಂಪನಿಯೊಂದಿಗೆ ಮಾತುಕತೆ ನಡೆಯುತ್ತಲಿದ್ದು ಭಾರತ ಪ್ರತಿಯೊಂದು ವಿಮಾನಕ್ಕೂ 21 ಮಿಲಿಯ ಡಾಲರ್ ಕೊಡಲು ಒಪ್ಪಿಕೊಳ್ಳುವುದರಲ್ಲಿದೆ.

ಇದೇ ವಿಮಾನವನ್ನು ದಕ್ಷಿಣಾ ಆಫ್ರಿಕಾ 17.64 ಮಿಲಿಯ ಡಾಲರಿಗೆ ಖರೀದಿಸಿದರೆ, ಆಸ್ಟ್ರೇಲಿಯಾವು ಇಂತಹುದೇ ವಿಮಾನವನ್ನು 16 ಮಿಲಿಯ ಡಾಲರುಗಳಿಗೆ ಖರೀದಿ ಮಾಡುತ್ತಲಿದೆ. ಇದರಿಂದ ಭಾರತಕ್ಕೆ ಆಗುವ ಅಂದಾಜು ನಷ್ಟ 1600 ಕೋಟಿ ರೂಪಾಯಿಗಳು. ಹಾಗಾದರೆ ಲಂಚನದ ವಂಚನೆ ನಡೆದಿಲ್ಲವೇ?

ಸೇನೆಗೆ ಬೇಕಾಗಿರುವ ಕಾಲುಚೀಲ(Socks) ಖರೀದಿ ಮಾಡುವಲ್ಲಿ ವರ್ಷಕ್ಕೆ 1200 ಕೋಟಿ ರೂ. ನಷ್ಟವಾಗುತ್ತಿದೆ ಎಂದರೆ ನಂಬಲು ಸಾಧ್ಯವೇ? ಸೆಪ್ಟೆಂಬರ್ 2000 ದಂದು ಬೆಳಕಿಗೆ ಬಂದ ಪ್ರಕಾರ ಸರಕಾರವು 97 ರೂ. ನಲ್ಲಿ ಒಂದು ಜತೆ ಕಾಲು ಚೀಲ ಖರೀದಿಸಿದ್ದರೆ, ಅದೇ ನಮೂನೆಯ ಕಾಲುಚೀಲಗಳನ್ನು ಲೂಧಿಯಾನದಲ್ಲಿರುವ ಸಣ್ಣ ಕೈಗಾರಿಕೆಗಳು 27 ರೂ. ನಲ್ಲಿ ನೀಡುತ್ತವೆ.

ವಿದ್ಯುಚ್ಛಕ್ತಿ ಉತ್ಪಾದನೆ: 1996 ರಲ್ಲಿ 13 ದಿನ ಆಡಳಿತ ನಡೆಸಿದ ವಾಜಪೇಯಿ ಸರಕಾರ ಸಂಸತ್ತಿನಲ್ಲಿ ಬಹುಮತ ಇಲ್ಲದಿದ್ದರೂ, ಎನ್ರಾನ್ ಸಂಸ್ಥೆಯ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟದ್ದು ಜನರಿಗೆ ತಿಳಿದಿದೆ. ಮಹಾರಾಷ್ಟ್ರದ ಸರಕಾರಕ್ಕೆ, ವಿದ್ಯುತ್ ನಿಗಮಕ್ಕೆ, ಜನಸಾಮಾನ್ಯರಿಗೆ 'ಎನ್ರಾನ್' ಎಷ್ಟು ದ್ರೋಹ ಬಗೆದಿದೆ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಅಮೆರಿಕಾದ ಬಹುರಾಷ್ಟ್ರೀಯ ಕಂಪನಿ ಎನ್ರಾನ್ ಭಾರತವನ್ನು ಲೂಟಿ ಮಾಡಲೆಂದೇ ಬಂದಿದೆ. ಆದರೂ ಕೇಂದ್ರ ಸರ್ಕಾರ ಇದರಿಂದ ಪಾಠ ಕಲಿಯಲಿಲ್ಲ.

ಎನ್‌ಟಿಪಿಸಿ, ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಸಾರ್ವಜನಿಕ ಉದ್ದಿಮೆ. ಇದು ತಲ್ಚೇರ್ ಎಂಬಲ್ಲಿ 2000 ಮೆಗಾವಾಟ್ ನ ಎರಡನೇ ಹಂತದ ಸ್ಥಾವರವೊಂದನ್ನು ನಿರ್ಮಿಸಲು ಟೆಂಡರ್ ಕರೆದಿದೆ. ಇನ್ನೊಂದು ಸಾರ್ವಜನಿಕ ಉದಿಮೆ ಬಿಹೆಚ್ ಇಎಲ್. ಅತ್ಯಂತ ಕಡಿಮೆ ಮೊತ್ತದ ಟೆಂಡರ್ ನೀಡಿತ್ತು. ಆದರೆ ಎಲ್ಲಾ ನಿಯಮಗಳನ್ನು ಬದಿಗೆತ್ತಿ, ಬಹುರಾಷ್ಟ್ರೀಯ ಕಂಪನಿಯಾದ ಏಷಿಯಾ ಬ್ರೋನ್ ಬೊವೆರಿ (ಎಬಿಬಿ) ಎನ್ನುವ ಖಾಸಗಿ ಸಂಸ್ಥೆಗೆ ಈ ಗುತ್ತಿಗೆ ನೀಡುವ ಹುನ್ನಾರ ನಡೆಯುತ್ತಿದೆ. ಏಕೆಂದರೆ ಸಾರ್ವಜನಿಕ ಉದ್ದಿಮೆಯಾದ ಬಿಹೆಚ್ ಇಎಲ್ 'ಕಿಕ್‌ಬ್ಯಾಕ್' (ದೊಡ್ಡಮೊತ್ತದ ಲಂಚ) ನೀಡುವುದಿಲ್ಲ.

ದಿನಕಳೆದಂತೆ ಹಗರಣಗಳ ಸರಮಾಲೆ ದೊಡ್ಡದಾಗುತ್ತ ಹೋಗುತ್ತಿದೆ. ಇಂತಹ ಸರ್ಕಾರ 100 ಕೋಟಿ ಜನರನ್ನು ಆಳಬೇಕೆ ಎನ್ನುವುದು ಪ್ರತಿಯೊಬ್ಬ ಭಾರತೀಯನು ಕೇಳಬೇಕಾದ ಪ್ರಶ್ನೆ. ಬಹುಶಃ ವಾಜಪೇಯಿ ಸರಕಾರದಿಂದ ಉತ್ತರ ಸಿಗುವುದಿಲ್ಲ. ಆದ್ದರಿಂದ ತೊಲಗು ತೊಲಗಾಚೆ ಎಂದು ಒಕ್ಕೊರಲಿನಿಂದ ಕೂಗುವುದೊಂದೇ ಉಳಿದಿರುವ ಮಾರ್ಗ.

ಸಿದ್ದಿ ಯುವತಿಯರ ಕ್ರೀಡಾ ಬದುಕು ಕನಸಲೇ ಮುಗಿಯಬೇಕೆ?

ದೇಶದ ಅವಕಾಶ ವಂಚಿತ ಸಿದ್ದಿ ಬುಡಕಟ್ಟು ಜನಾಂಗದ ಯುವತಿಯರು ಕ್ರೀಡೆಯಲ್ಲಿ ಚಿನ್ನ ಗೆದ್ದು ದೇಶದ ಕೀರ್ತಿ ಹೆಚ್ಚಿಸಿದರು. ಆದರೀಗ ಚಿನ್ನದ ಯುವತಿಯರ ಬದುಕು ಹಾಸುಂಡು ಬೀಸಿ ಒಗೆದಂತಾಗಿ ಅನ್ನಕ್ಕೂ ಪರಿತಪಿಸುವ ಸ್ಥಿತಿ ಬಂದೊದಗಿದೆ. ಸರ್ಕಾರಗಳಲ್ಲಿ ಒಂದು ಸ್ಪಷ್ಟ ಕ್ರೀಡಾನೀತಿ ಅಭಾವ, ತನ್ನ ನಾಡಿನ ಪ್ರತಿಭೆಗಳ ಬಗೆಗಿನ ನಿಷ್ಕಾಳಜಿ, ಎಂತಹ ಸ್ಥಿತಿ ತಂದಿರಬಹುದು ಎಂಬುದನ್ನು ಈ ಲೇಖನ ಬಿಚ್ಚಿಡುತ್ತದೆ, ಚಿಂತನೆಗೆ ಹಚ್ಚುತ್ತದೆ.

ಸಿದ್ದಿಗರ ಬದುಕು: ಮೈ ಮುಚ್ಚಲು ತುಂಡು ಬಟ್ಟೆಗೂ ಗತಿಯಿಲ್ಲದ, ಹೊದೆಯಲು ಹಾಸಲು ಹೊದಿಕೆಯಿಲ್ಲದ, ಮಳೆ-ಚಳಿ-ಗಾಳಿಯಿಂದ ರಕ್ಷಣೆ ಪಡೆಯಲು ಒಂದು 'ಗೂಡು' ಕಟ್ಟಲು ಸ್ವಂತ ಜಮೀನಿಲ್ಲದ, ಎಷ್ಟು ದುಡಿದರೂ ಒಪ್ಪತ್ತಿನೂಟಕ್ಕೂ ತತ್ವಾರವಿರುವ ಸಿದ್ದಿಗಳದ್ದು ಹೇಳತೀರದ ಗೋಳು. ಆಫ್ರಿಕಾ ಮೂಲದ ನಿಗ್ರೋಗಳನ್ನು ಹೋಲುವ ಇವರು 16ನೇ ಶತಮಾನದ ಸುಮಾರಿಗೆ ವಸಾಹತುಶಾಹಿಗಳ ಗುಲಾಮರಾಗಿ ಭಾರತಕ್ಕೆ ಬಂದರು. ಉತ್ತರಕನ್ನಡದಲ್ಲಿ ಈ ಜನಾಂಗದವರು ಸಿದ್ದಿಗಳೆಂದೇ ಪ್ರಸಿದ್ಧರು.

ನಮ್ಮ ಜಿಲ್ಲೆಯ ಯಲ್ಲಾಪುರ, ಮುಂಡಗೋಡ, ಹಳಿಯಾಳ ಹಾಗೂ ಅಂಕೋಲಾ ತಾಲೂಕಿನ ಹಲವೆಡೆ ಹಾಗೂ ಜೊಯ್ಡಾದ ಕೆಲವು ಹಳ್ಳಿಗಳಲ್ಲಿ ಮುಖ್ಯವಾಗಿ ದಟ್ಟ ಕಾಡು ಪ್ರದೇಶಗಳಲ್ಲಿ ಸಿದ್ದಿಗಳು ವಾಸಿಸುತ್ತಿದ್ದಾರೆ. ಪ್ರಮುಖ ಮೂರು ಧರ್ಮಗಳಾದ ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಧರ್ಮಗಳಲ್ಲಿ ಈ ಜನಾಂಗದವರಿದ್ದು ಅವರ ಸಾಮಾಜಿಕ ವ್ಯವಹಾರಕ್ಕೆ ಅದು ಅಡ್ಡಿಯಾಗಿಲ್ಲ. ಕೊಂಕಣಿ, ಮರಾಠಿ, ಕನ್ನಡ, ಕೆಲವೆಡೆ ಉರ್ದು ಮಿಶ್ರಿತ ಹಿಂದಿ ಭಾಷೆಗಳನ್ನು


ಮಾಲಾ ಸಿದ್ದಿ

ಇತರರಿಗಿಂತ ವಿಶಿಷ್ಟ ಉಚ್ಚಾರದೊಂದಿಗೆ ಮಾತನಾಡುವ ಇವರು ಸರಳ ಮತ್ತು ಶ್ರಮಜೀವಿಗಳು. ಇವರಲ್ಲಿ ದುಡಿಮೆಗೆ ಸ್ತ್ರೀ-ಪುರುಷ ಭೇದವಿಲ್ಲ. ಗೋವಾ-ಬಾಂಬೆವರೆಗೂ ಇವರು ಕೆಲಸ ಹುಡುಕಿಕೊಂಡು ಹೋಗುತ್ತಾರೆ.

ಗುಂಗುರು-ಕುರುಚಲು ಕೂದಲು, ದಪ್ಪ-ಮೊಂಡು ಮೂಗು, ಬಲಿಷ್ಠದೇಹ ಕಪ್ಪು ಬಣ್ಣ ಹೊಂದಿದ್ದು ದೈಹಿಕವಾಗಿ ಆಫ್ರಿಕಾದ ನಿಗ್ರೋಗಳನ್ನೇ ಹೋಲುತ್ತಾರೆ. ಇವರೆಲ್ಲರಿಗೂ ಅವರದ್ದೇ ಆದ ವಿಶಿಷ್ಟ ಆಸೆ-ಕನಸುಗಳಿವೆ. ಅಭಿವೃದ್ಧಿಯಾಗಬೇಕೆಂಬ ಹಂಬಲವಿದೆ. ಸಿದ್ದಿ ಯುವಜನರಿಗಂತೂ ಶಿಕ್ಷಣ-ಉದ್ಯೋಗ ಪಡೆದು ಸಮಾಜದಲ್ಲಿ ಇತರರಂತಾಗಬೇಕೆಂಬ ಮಹದಾಸೆ ಇದೆ. ಅದಕ್ಕಾಗಿಯೇ ಕಾಡಿನಲ್ಲಿದ್ದರೂ ಕೈಕಸುಬಿನ ವಸ್ತುಗಳನ್ನು ಮಾರಲು, ಉಳ್ಳವರ ಮನೆ-ಹೊಲ-ಗದ್ದೆಗಳಲ್ಲಿ ದುಡಿಯಲು ಊರು-ಹಳ್ಳಿ ಪೇಟೆಗೆ ಬರುತ್ತಾರೆ. ನಾಲ್ಕು ಕಾಸು ಸಂಪಾದಿಸಿ ಮೈ ಮುಚ್ಚಲು ಬಟ್ಟೆ, ಹೊಟ್ಟೆ ತುಂಬಲು ಹಿಟ್ಟು-ಕಾಳು - ಕಡ್ಡಿ, ತರುವುದರ ಜೊತೆಗೆ ತಮ್ಮವರಿಗೆ ಅಕ್ಷರಾಭ್ಯಾಸ ಮಾಡಿಸಲು 'ಪಾಠಿ-ಕಡ್ಡಿ'ಯನ್ನು ಖರೀದಿಸುತ್ತಾರೆ.

ಹಗಲೆಲ್ಲ ಮೈಮುರಿದು ದುಡಿದು, ಆಯಾಸ ಮರೆಯಲು ತಮ್ಮ ಜೋಪಡಿ ಎದುರು ಬೆಂಕಿಯ ಬೆಳಕಿನಲ್ಲಿ 'ಪುಗಡಿ ಕುಣಿತ' ಹಾಕುತ್ತಾರೆ. ತಮ್ಮದೇ ವಿಶಿಷ್ಟ ಹಾಡನ್ನು ಹೇಳುತ್ತಾ ಆನಂದ ಪಡೆಯುತ್ತಾರೆ. ಪುಗಡಿ ಹಾಕುವುದರಲ್ಲಿ ಹೆಣ್ಣು ಮಕ್ಕಳದೇ ಮೇಲುಗೈ. ಸುಂದರವಾಗಿ ಚಿತ್ರಬರೆದ ಮಣ್ಣಿನ ಕೊಡವನ್ನು ಕೈಯಲ್ಲಿ ಹಿಡಿದು ತಾಳದ ಮೇಲೆ ಕುಣಿಯುವ ಈ ಜಾನಪದ ನೃತ್ಯ ಉತ್ತರ ಕನ್ನಡದ ಪ್ರಭಾವಿತ ಕಲೆಗಳಲ್ಲಿ ಒಂದು. ಹಾಗೆಯೇ ನವರಾತ್ರಿಯ ಸಂದರ್ಭದಲ್ಲಿ ಕುಣಿಯುವ 'ಡಮಾಲು ಕುಣಿತ' ಕೂಡ ಹೆಚ್ಚು ಸೃಜನಶೀಲವಾದದ್ದು.

ಶೈಕ್ಷಣಿಕ ಸ್ಥಿತಿ-ಗತಿ: 1991 ರ ಜನಗಣತಿ ಪ್ರಕಾರ ಜಿಲ್ಲೆಯ ಒಟ್ಟು ಸಾಕ್ಷರತೆ ಶೇ 67 ಮಾತ್ರ. ಕೆಲವೇ ಸಾವಿರ ಸಂಖ್ಯೆಯಲ್ಲಿರುವ ಸಿದ್ದಿಗಳಲ್ಲಿ ಶಿಕ್ಷಿತರ ಪ್ರಮಾಣ ತೀರಾ ಕಡಿಮೆ. ಡ್ರಾಪ್ ಔಟ್‌ಗಳೇ ಜಾಸ್ತಿ. ಇತ್ತೀಚೆಗೆ ಬೆರಳೆಣಿಕೆಯಷ್ಟು ಯುವಕರು ಪದವಿ ಪಡೆದರು. ಕೇವಲ ಒಬ್ಬನೇ ಒಬ್ಬ ತಾಂತ್ರಿಕ ಶಿಕ್ಷಣ ಪಡೆದವನಿದ್ದಾನೆ, ಹೆಣ್ಣು ಮಕ್ಕಳಲ್ಲಿ ಯಾರೂ ಇಲ್ಲ. ನರ್ಸ್‌ಟ್ರೇನಿಂಗ್, ಪಿಯುಸಿ ತನಕ ಓದಿದ ಒಬ್ಬಿಬ್ಬರಿದ್ದಾರಷ್ಟೆ.

ಹಿಂದೆಲ್ಲ ಸಿದ್ದಿಗಳು ಶಾಲೆಗೆ ಬರುತ್ತಿರಲಿಲ್ಲ. ಬಂದರೂ ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಅಂದ ಹಾಗೆ ಇಂದು ಅಸ್ಪೃಶ್ಯತೆಯ ಸೋಂಕು ಮಾಯವಾಗಿದೆ ಅಂತಲ್ಲ. ಕೆಲವರಿಗಾದರೂ ಮೇಲ್ವರ್ಗದವರು ಗೌರವಕೊಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗೆ ಸಿದ್ದಿಗಳನ್ನು ಸ್ವಲ್ಪಮಟ್ಟಿಗಾದರೂ ಮನುಷ್ಯರಂತೆ ಕಾಣಲು ಕಾರಣವುಂಟು.

ಕತ್ತಲ ಹಾದಿಯ ಬೆಳಕಿನ ಪಯಣ ಪ್ರಾರಂಭವಾದುದು ಕ್ರೀಡೆಯ ಮೂಲಕ!

ದಷ್ಟ-ಪುಷ್ಟ ಮೈಕಟ್ಟಿನ, ಎಂಥ ಕಷ್ಟದ ಕೆಲಸವನ್ನಾದರೂ ಮಾಡಲು ಸಿದ್ಧವಿರುವ ಸಿದ್ದಿಗಳು ವಿಶೇಷ ದೇಹ ದಾರ್ಢ್ಯತೆಯನ್ನು ಗಮನಿಸಿ, ಜನರ ಒತ್ತಾಯಕ್ಕೆ ಮಣಿದು, 80 ರ ದಶಕದ ಕೊನೆ ವೇಳೆಯಲ್ಲಿ ಕೇಂದ್ರ ಸರ್ಕಾರವು ಭಾರತ ಕ್ರೀಡಾ ಪ್ರಾಧಿಕಾರದಲ್ಲಿ ತರಬೇತಿಗಾಗಿ ಆಯ್ಕೆ ಮಾಡಲು ಮುಂದಾಗುತ್ತಾರೆ. ಅಂದು ಹಲವಾರು ಸಿದ್ದಿ ಹುಡುಗ-ಹುಡುಗಿಯರು ಶಾಲೆಗೆ ಹೋಗುತ್ತಿರಲಿ, ಇಲ್ಲದಿರಲಿ ಪ್ರಥಮ ಬಾರಿಗೆ ಯಲ್ಲಾಪುರದ ವೈಟಿಎಸ್‌ಎಸ್ ಮೈದಾನದಲ್ಲ 'ಓಡಿದರು, ಜಿಗಿದರು, ಎಸೆದರು, ಎತ್ತಿ ಬಿಸಾಡಿದರು' ಹುಡುಗಿಯರಂತೂ ಹರಿದ ಉದ್ದ ಲಂಗ ಮೇಲೆತ್ತಿಕೊಳ್ಳುತ್ತಾ, ಎಡವುತ್ತಾ ಓಡುತ್ತಿದ್ದರು. ಗುಂಡಿ ಇಲ್ಲದ ಬ್ಲೌಜನ್ನು ಜಗ್ಗಿ ಮುಖ ಕೆಳಗೆ ಮಾಡಿ ಓಡಿಯೇ ಓಡಿದರು. ಆ ಘಟನೆ ಇನ್ನೂ ಕಣ್ಣುಮುಂದೆ ಕಟ್ಟುವಂತಿದೆ ನನಗೆ.

ಕಿತ್ತು ತಿನ್ನುವ ಬಡತನದ ಬೇಗೆಯ ಮಧ್ಯೆಯೂ ಏನೋ ಸಾಧಿಸಬಹುದು, ತಮ್ಮ ಹತ್ತವರಿಗೆ ಬದುಕು ಕೊಡಬಹುದು, ಮುಂದಿನವರಿಗೆ ಭವಿಷ್ಯ ಕೊಡಬಹುದು ಎಂಬ ಬತ್ತಲಾರದ ಆಸೆಗಳೊಂದಿಗೆ ಬಸ್ಸುಹತ್ತಿ ಕನಸಲ್ಲೂ ನೋಡಲು ಅರ್ಹತೆಯಿಲ್ಲದ ಊರಲ್ಲಿ ಇಳಿದರು. "ಓಹೋ.... ಇದೋ ಬೆಂಗಳೂರು... ಹ್ವಾಉರ್‍ತ್ಲೆ..." ಎಂದು ಕಕ್ಕಾಬಿಕ್ಕಿಯಾದರು. ಕಂಠೀರವ ಸ್ಟೇಡಿಯಂ ಹಾಗೂ ಕೆಂಗೇರಿಗಳ ಯೂತ್ ಹಾಸ್ಟೆಲ್‌ನಲ್ಲಿ ವಿವಿಧ ಕ್ರೀಡಾ ತರಬೇತಿ, ಜೊತೆಗೆ ಶಾಲೆಗೆ ಕೂಡ ಪುನಃ ಪ್ರವೇಶ ಪಡೆದರು. (ಬಹಳಷ್ಟು ಜನರಿಗೆ ಇಂಗ್ಲೀಷ್ ಮಾಧ್ಯಮ ಹಿಡಿಸದೇ ಯಾತನೆ ಅನುಭವಿಸಿದ್ದೂ ಇದೆ)

ಬಾಕ್ಸಿಂಗ್, ವೇಟ್ ಲಿಫ್ಟಿಂಗ್, ಹತ್ತಿರದ ದೂರದ ಓಟಗಳು, ಟ್ರಿಪಲ್ ಜಂಪ್, ಸ್ವಿಮಿಂಗ್, ಉದ್ದ-ಎತ್ತರ ಜಿಗಿತ ಮುಂತಾಗಿ ಸತತಾಭ್ಯಾಸ ಪ್ರಾರಂಭವಾಯ್ತು. ಕೆಲವೇ ವರ್ಷಗಳಲ್ಲಿ ಮಹಿಳೆಯರ ವಿಭಾಗದಲ್ಲಿ ಮಾಲಾಸಿದ್ದಿ, ಕಮಲಾ ಸಿದ್ದಿ, ಶಾರದಾ ಸಿದ್ದಿ, ರೂಪಾ ಸಿದ್ದಿ ಮುಂತಾದವರು ಹಿರಿಯ-ಕಿರಿಯ ವಿಭಾಗಗಳಲ್ಲಿ ರಾಜ್ಯಕ್ಕೆ ಭರವಸೆ ಮೂಡಿಸಿದರು. ಪ್ರಾರಂಭದಲ್ಲಿ ಕಮಲಾ ಮತ್ತು ಮಾಲಾ ಸಿದ್ದಿ ವಿಶೇಷ ಸಾಧನೆಗಳನ್ನು ಅಥ್ಲೆಟಿಕ್ಸ್‌ನಲ್ಲಿ ಮಾಡಿ ದಾಖಲೆ ಸ್ಥಾಪಿಸಿದರು. ಅಂದು ಜಿಲ್ಲೆಯ ಕ್ರೀಡಾ ಪ್ರೇಮಿಗಳು ಒಲಂಪಿಕ್ ಪದಕದ ಕನಸನ್ನು ಕಂಡವರಿದ್ದಾರೆ!

ಯಾರಿಗೆ ಆದರೂ ತರಬೇತಿ ನೀಡಿದರೆ, ದಿನಂಪ್ರತಿ ತಿದ್ದಿ-ತೀಡಿದರೆ ಏನನ್ನಾದರೂ ಒಳ್ಳೆಯದನ್ನು ಸಾಧಿಸಬಹುದು ಎಂಬುದನ್ನು ಸಾಧ್ಯವಾಗಿಸಿದರು. ಮಾಲಾ ಸಿದ್ದಿ ತುಂಬ ಭರವಸೆಗಳನ್ನು ಮೂಡಿಸಿದ್ದಳು. ಅಂದಿನ ಖ್ಯಾತ ಓಟಗಾರ್ತಿ ಶೈನಿ ವಿಲ್ಸನ್‌ಳ ದಾಖಲೆಯನ್ನು ತನ್ನ 18ನೇ ವಯಸ್ಸಿನಲ್ಲೇ ಮುರಿದು ಈ ಜಾಗದಲ್ಲಿ ತನ್ನ ಹೆಸರು ಬರೆಯಿಸುವ ಮೂಲಕ ಅಚ್ಚರಿ ಮೂಡಿಸಿದಳು.

'ಸಿದ್ಧಿ-ಸಿದ್ಧಿ ಬಾರಾ ಬುದ್ದಿ' ಎನ್ನುವ ಕುಹಕ ಮಾತಿಗೆ ಅಪವಾದವೆಂಬಂತೆ ಕರ್ನಾಟಕದ ಉತ್ತಮ ಕ್ರೀಡಾಪಟು ಮಾಲಾ ಬೆಳೆಯುತ್ತಿದ್ದಳು. ಆದರೆ ಸಮಾಜದ-ಸರ್ಕಾರದ ದಿವ್ಯ ನಿರ್ಲಕ್ಷ್ಯದಿಂದಾಗಿ ಅರಳುತ್ತಿರುವ ಮೊಗ್ಗು ಅಲ್ಲಿಯೇ ಬಾಡಿತು, ನೀರೆರೆದು ಚಿಗುರಿಸುವ ಕಿಂಚಿತ್ ಪ್ರಯತ್ನವನ್ನು ಯಾರೂ ಮಾಡುತ್ತಿಲ್ಲ.

ಖಳನಾಯಕನಾದ ಗಂಡ

ಈಕೆಯ ಪತಿ ಅಗ್ನೆಲ್ ಜರೋಮಿ ಸಿದ್ದಿ ಅತ್ಯುತ್ತಮ ಕ್ರೀಡಾಪಟು. ಕ್ರೀಡೆಯಲ್ಲಿ ಈತನ ಸಾಧನೆ ನೋಡಿ ಕೇಂದ್ರ ಸರ್ಕಾರ 'ಏಕಲವ್ಯ' ಪ್ರಶಸ್ತಿಯನ್ನು ಕೊಟ್ಟು ಗೌರವಿಸಿದೆ. ಆದರೆ ಮಾಲಾಳ ಬದುಕಿನಲ್ಲಿ ಈತ 'ಏಕಲವ್ಯ' ನಾಗಿರಲೇ ಇಲ್ಲ. ಪ್ರೀತಿಸಿ ಮದುವೆಯಾದ ಈತ ಈತನಿಗಾಗಿ ತನ್ನಮನೆ, ಸಂಬಂಧಿಕರು, ಬಂಧುಗಳನ್ನೆಲ್ಲಾ ಬಿಟ್ಟು ಮಾಲಾ ಸಿದ್ದಿ ಹೊರಟಳು. ಆದರೆ ಈತ ಇವಳನ್ನು ಕೈಬಿಟ್ಟ, ತವರಿಗೆ ಓಡಿಸಲು ಪ್ರಯತ್ನಿಸಿದ. ಬೆಂಗಳೂರಿನಲ್ಲಿ ಪೋಲೀಸ್ ಇಲಾಖೆಯಲ್ಲಿ ನೌಕರಿಯಲ್ಲಿರುವ ಈತ ಮಾಲಾಳ ಬಾಳಿಗೆ ಖಳನಾಯಕನಾದಾಗ ಆಕೆ ಮೈಗೆ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆಗೆ ಪ್ರಯತ್ನಿಸಿದಳು. ಅಕ್ಕ-ಪಕ್ಕದ

ಯಮುನಾ ಗಾಂವ್ಕರ್

ಮನೆಯವರು ಬಂದು ರಕ್ಷಿಸಿದರು. ಚಿಕಿತ್ಸೆ ಕೊಡಿಸಿದರು. ಪೂರ್ಣ ಗುಣವಾದ ಮೇಲೆ ತವರು ಮನೆಗೆ ಕರೆದೊಯ್ಯುತ್ತೇನೆಂದು ಹೇಳಿ ಬಿಟ್ಟುಹೋದ ಗಂಡ ಅಗ್ನೇಲ್ ಇನ್ನೂ ಮಾಲಾ ಸಿದ್ದಿಯನ್ನು ಕರೆದೊಯ್ಯಲು ಯಲ್ಲಾಪುರಕ್ಕೆ ಬರಲೇ ಇಲ್ಲ. ಹೊಂದಾಣಿಕೆ ಮಾಡುವ ಎಲ್ಲಾ ಸಂಧಾನ ಕ್ರಿಯೆಯೂ ವಿಫಲವಾಗಿ ಮಾಲಾ ಕಂಗಾಲಾಗಿದ್ದಾಳೆ. ಕತ್ತಲೆಯಿಂದ ಬೆಳಕಾಗಿ ಮಿಂಚಿ ಮತ್ತೆ ಕತ್ತಲ ಕೂಪದಲ್ಲಿ ಬೆಳಕಿಗಾಗಿ ಅರಸುತ್ತಿರುವ ಮಾಲಾ ಸಿದ್ದಿ ಗಂಡಿನ ಕೌರ್ಯಕ್ಕೆ ಮತ್ತು ಸರ್ಕಾರದ ಕ್ರೀಡಾ ನೀತಿಗೆ ಹಿಡಿದ ಕನ್ನಡಿಯಾಗಿದ್ದಾಳೆ.


ಟ್ರ್ಯಾಕ್ ಸೂಟ್‌ನಲ್ಲಿ ಮಾಲಾ

ತನ್ನ ಬದುಕಿನ ದಾರುಣ ಸ್ಥಿತಿಯನ್ನು 'ಕಾರವಾರದ ಜನಪರ ದಿನಪತ್ರಿಕೆ 'ಕರಾವಳಿ ಮಂಜಾವು' ನೊಂದಿಗೆ ಸ್ವತಃ ಮಾಲಾ ಸಿದ್ದಿ ಹೇಳಿಕೊಂಡಿದ್ದು ಹೀಗೆ "ನನ್ನ ಗಂಡ ಹೀಗೆ ಅನ್ಯಾಯವಾಗಿ ನನ್ನನ್ನು ಕೈಬಿಟ್ಟ ಎಂಬ ಬಗ್ಗೆ ದೂರು ಕೊಡಲು ಯಲ್ಲಾಪುರ ಪೋಲೀಸ್ ಸ್ಟೇಷನ್‌ಗೆ ಹೋಗಿದ್ದೆವು. ಆದರೆ ಅವರು ಏನೂ ತನಿಖೆ ಮಾಡಲಿಲ್ಲ. ನಾನು ಕೊಟ್ಟ ದೂರು ಪತ್ರವನ್ನು ಹಾಗೆ ವಾಪಸ್ ಕೊಟ್ಟರು. ಇಲ್ಲ, ಆಗೋದಿಲ್ಲ ಅಂದ್ರು. ನಾವು ಹಳಿಯಾಳ ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಟ್ಟೆವು. ಕಾರವಾರದ ಎಸ್.ಪಿ.ಯವರಿಗೆಲ್ಲ ಹೇಳಿ ನಮ್ಮ ಮದುವೆಯ ಫೋಟೋ ಎಲ್ಲ ತೋರಿಸಿಯಾಯಿತು. ಅರ್ಜಿ ಕೊಟ್ಟು ಎಲ್ಲಾ ಆಯಿತು. ಅದೆಲ್ಲ ಕೊಟ್ಟರೂ ಕೂಡ ಅವರು ಕ್ರಮ ತೆಗೆದುಕೊಳ್ಳಲಿಲ್ಲ. ಪೋಲಿಸ್ ಡಿಪಾರ್ಟ್‌ಮೆಂಟ್ ಇರೋದು ಅಬಲರಿಗೆ ರಕ್ಷಣೆ ಕೊಡಲಿಕ್ಕೆ ಅಲ್ವೇ? ಆದರೆ ಅವರು ನೋಡಿ ಆಗಲ್ಲ ಅಂತ ವಾಪಾಸ್ಸು ಕಳ್ಸಿ ಬಿಟ್ರು"

ಕ್ರೀಡೆ-ನೌಕರಿ ಬಿಟ್ಟು ಐದಾರು ವರ್ಷಗಳಾದವು! ಎಸ್‌ಎಸ್‌ಎಲ್‌ಸಿ ಕಲಿತ ನನಗೆ ಕೆಎಸ್ಆರ್‌ಪಿ ಸಿವಿಲ್ ಪೋಲೀಸ್ ನೌಕರಿ ಸಿಕ್ಕ ಮೇಲೆ ನನ್ನನ್ನು ಕ್ರೀಡಾ ಹಾಸ್ಟೆಲ್‌ನಿಂದ ಕಳಿಸಿ 'ನಿನಗೆ ಈಗ ನೌಕರಿ ಸಿಕ್ಕಿದೆ, ಸ್ವತಂತ್ರ ಜೀವನ ಮಾಡು' ಅಂದ್ರು, ಆದರೆ ನೌಕರಿ ಮಾಡ್ತಾ ನನಗೆ ಕ್ರೀಡೆ ಮುಂದುವರಿಸಲು ಅನಾನೂಕೂಲವಾಯಿತು. ಕೆಲಸದಲ್ಲಿಯೇ ಸಮಯ ಹೋಗುತ್ತಿತ್ತು. ಹೆಚ್ಚೆಂದರೆ ನಾನು ಡಿಪಾರ್ಟ್‌ಮೆಂಟ್ ಸ್ಪೋರ್ಟ್ಸ್‌ನಲ್ಲಿ ಭಾಗವಹಿಸಬಹುದಿತ್ತು. ಅದರಿಂದ ಹೆಚ್ಚೇನೂ ಸಾಧಿಸಲು ಆಗುವುದಿಲ್ಲ ಅಂತ ಕ್ರೀಡೆ ಬಿಟ್ಟುಬಿಟ್ಟೆ. ಮೇಲಾಗಿ ಒಳ್ಳೆಯ ಪೌಷ್ಠಿಕ ಆಹಾರದ ಕೊರತೆ ಉಂಟಾಯಿತು. ಬಂದ ಪಗಾರಿನಲ್ಲಿ ಜೀವನ ನಿರ್ವಹಣೆ ಮಾಡಿ ಊರಿಗೂ ಹಣ ಕಳಿಸುವಷ್ಟರಲ್ಲಿ ಸಾಕು ಸಾಕಾಗುತ್ತಿತ್ತು. ಹೀಗಾಗಿ ಕ್ರೀಡೆ ಬಿಟ್ಟುಬಿಟ್ಟೆ.

ಆಮೇಲೆ ನನ್ನ ಗಂಡ ನನಗೆ ನೌಕರಿ ಬಿಡಲು ಹೇಳಿದ. ನೀನು ಕೆಲಸಕ್ಕೆ ಹೋದ್ರೆ ಮಗೂನ ನೋಡ್ಕೋಳೋರು ಯಾರು? ನಾನೊಬ್ಬ ದುಡ್ದ್ರೆ ಸಾಕು, ಇಲ್ಲಾಂದ್ರೆ ಮನೆ ಕಡೆ ನೋಡ್ಕೋಳ್ಳೋರು ಯಾರು ಇರುವುದಿಲ್ಲ, ನೌಕರಿ ಬಿಟ್ಟು ಬಿಡು ಅಂದ್ರು. ನಾನು ಗಂಡ ಹೇಳಿದ ಮೇಲೆ ಇನ್ನೇನು ಅಂತ ಬಿಟ್ಟುಬಿಟ್ಟೆ.

ನಾನು ರಾಷ್ಟ್ರಮಟ್ಟದಲ್ಲಿ ಆಡಿದ ಕ್ರೀಡಾಪಟು, ನಾನು ಕ್ರೀಡೆಯನ್ನೇ ಮುಂದುವರೆಸಿಕೊಂಡು ಹೋಗಿದ್ದರೆ ನನಗೆ ಈ ಗತಿ ಬರುತ್ತಿರಲಿಲ್ಲ. ಮೇಲಾಗಿ ಜೀವನದಲ್ಲಿ ಏನಾದ್ರೂ ಸಾಧನೆ ಮಾಡುತ್ತಿದ್ದೆ. ಈಗ ಎಲ್ಲಾ ಹಾಳಾಗಿ ಹೋಯ್ತಲ್ಲ. ಮದುವೆಯಾಗಿ ತಪ್ಪು ಮಾಡಿಬಿಟ್ಟೆನಲ್ಲ ಎಂಬ ಕೊರಗು ನನ್ನನ್ನು ಬಹಳ ದಿನದಿಂದಕಾಡುತ್ತಿದೆ...." ಎಂದ.

ಒಂದು ಕಾಲದಲ್ಲಿ ಆಟದ ಬಯಲಿನಲ್ಲಿ ಕರ್ನಾಟಕದ ಮಾನ ಹೆಚ್ಚಿಸಿದ ಮಾಲಾ ಸಿದ್ದಿ ಈಗ ಬದುಕಿಗೊಂದು ಊರು ಗೋಲನ್ನು ಅರಸುತ್ತಿದ್ದಾಳೆ. ಗಂಡನೇ ಊರುಗೋಲೆಂದು ತಿಳಿದು ಇದ್ದ ನೌಕರಿ ಬಿಟ್ಟು ಆದರ್ಶ ಪತ್ನಿ ಆಗಲು ಹೊರಟ ಆಕೆ "ನನಗೆ ಈಗಲೂ ಕ್ರೀಡೆಯಲ್ಲಿ ಆಸಕ್ತಿಯಿದೆ. ಯಾರಾದ್ರೂ ಸಹಾಯ ಮಾಡಿದರೆ ಕ್ರೀಡೆಯಲ್ಲೇ ಮುಂದುವರಿಯಬೇಕು ಎಂಬ ಆಸೆ ಇದೆ. ಅದು ಆಗಲಿಲ್ಲಾಂದ್ರೆ ಎಲ್ಲಿಯಾದರೂ ಕೋಚ್ ಆಗಿ ಕೆಲಸ ಸಿಕ್ಕರೂ ಮಾಡುತ್ತೇನೆ. ಮೊದಲು ಜೀವನ ನಿರ್ವಹಣೆಗೆ ನನಗೊಂದು ಕೆಲಸ ಬೇಕಾಗಿದೆ. ಆದರೆ ಯಾರು ಸಹಾಯ ಮಾಡ್ತಾರೆ?.. ಎಂದು ಎದುರು ನೋಡುತ್ತಿ ದ್ದಾಳೆ. ಯಾವುದಾದರೂ ಕಾಲೇಜುಗಳು, ಯುವಜನ ಸೇವಾ ಕ್ರೀಡಾ ಇಲಾಖೆ ಸಹಾಯ ಹಸ್ತ ಚಾಚಿದರೆ ನಮ್ಮದೇ ಕ್ರೀಡಾ ಆಸ್ತಿಯನ್ನು ಉಳಿಸಿಕೊಂಡಂತಾಗುತ್ತದೆ.

ಇನ್ನೊಬ್ಬ ಕ್ರೀಡಾಪಟು ರಾಷ್ಟ್ರಮಟ್ಟದಲ್ಲಿ ಭಾರ ಎತ್ತುವ ಸ್ಪರ್ಧೆಯಲ್ಲಿ ಮಿಂಚಿದ ಈಗ ಏಕಲವ್ಯ ಪ್ರಶಸ್ತಿ ಪಡೆದ ಶಾರಾ ಸಿದ್ದಿ. ಪಂಜಾಬ್ ಪೋಲೀಸ್‌ನಲ್ಲಿರುವ ಸಂಜಯ ಕುಮಾರನನ್ನು ಮದುವೆಯಾದ ಶಾರದಾಳದ್ದು ಕೂಡ ಕಡುಬಡತನದ ಕುಟುಂಬವೇ. ಯಲ್ಲಾಪುರ ತಾಲೂಕಿನ ಉಮ್ಮಚಗಿಯವಳಾದ ಶಾರದಾ ಅಥ್ಲೆಟಿಕ್ಸ್‌ನಲ್ಲಿ ಹಿಂದೆ ಬಿದ್ದು ಭಾರ ಎತ್ತುವುದರಲ್ಲಿ ಪ್ರವೀಣೆಯಾಗಿದ್ದಳು. 1991 ರಿಂದ ರಾಜ್ಯ ಮಟ್ಟದಲ್ಲಿ ಭಾಗವಹಿಸಲು ಪ್ರಾರಂಭಿಸಿ ಇಂದು ರಾಷ್ಟ್ರಮಟ್ಟದಲ್ಲಿ ಹೆಸರು ಮಾಡಿ ಏಕಲವ್ಯ ಪ್ರಶಸ್ತಿ ಪಡೆದಿದ್ದಾಳೆ. ಅವಳು ನಿರ್ಮಿಸಿದ ರಾಜ್ಯ ದಾಖಲೆ ಸ್ನ್ಯಾಚ್‌ನಲ್ಲಿ 72 ಕೆ.ಜಿ. ಕ್ಲೀನ್ ಎಂಡ್ ಜರ್ಕ್‌ನಲ್ಲಿ 87 ಕೆ.ಜಿ. ಹಾಗೂ ಒಟ್ಟು 159 ಕೆ.ಜಿ. ರಾಜ್ಯ ಜ್ಯೂನಿಯರ್ ಚಾಂಪಿಯನ್ ಶಿಪ್ ಸೀನಿಯರ್ ಚಾಂಪಿಯನ್‌ಶಿಪ್, ರಾಷ್ಟ್ರೀಯ ಚಾಂಪಿಯನ್ ಶಿಪ್, ರಾಷ್ಟ್ರೀಯ ಕ್ರೀಡೆ, ದಕ್ಷಿಣ ಭಾರತ ಚಾಂಪಿಯನ್ ಶಿಪ್‌ನಲ್ಲಿ ಹಲವಾರು ಬಾರಿ ಭಾಗವಹಿಸಿದ್ದಾಳೆ. ಬಂಗಾರದ ಪದಕ ಇವಳ ಕೊರಳಿಗೆ ಬಿದ್ದರೂ ಇಂದು ಅವಳು ನೌಕರಿ ಮಾಡುತ್ತಿರುವ ಇಲಾಖೆಯಲ್ಲಿ ಅವಳಿಗೆ ಕೆಲಸದ ಒತ್ತಡಗಳೇ ಜಾಸ್ತಿ ವಿನಃ ಪ್ರತಿನಿತ್ಯದ ಪ್ರಾಕ್ಟೀಸ್‌ಗೆ ಸಮಯಭಾವ ಹಾಗೂ ಪ್ರೋತ್ಸಾಹದ ಕೊರತೆಯಿದೆ. ಆ ಕಾರಣದಿಂದಲೇ ಅವಳೊಮ್ಮೆ ಹೇಳುತ್ತಿದ್ದಳು 'ನಾನೀಗ ನೌಕರಿಗೆ ಸೇರಿದ ಮೇಲೆ ನೂರು ಕೆ.ಜಿ. ಯನ್ನಾದರೂ ಎತ್ತಲಿಕ್ಕೆ ಸಾಧ್ಯವುಂಟೆ' ಎಂದು ಅಸಹಾಯಕತೆ ತೋಡಿಕೊಂಡಿದ್ದಳು. ಈಗಂತೂ ಕ್ರೀಡೆಗೆ ಸಂಪೂರ್ಣ ವಿದಾಯ ಹೇಳುತ್ತಿರುವ ಸುದ್ದಿ ಪತ್ರಿಕೆಗಳಲ್ಲಿ ಬಂದಿದೆ. ಅಂದರೆ ಭಾರತ ಕ್ರೀಡಾ ಪ್ರಾಧಿಕಾರ ಹಾಗೂ ಸರ್ಕಾರಗಳು ಯಾವ ರೀತಿಯಲ್ಲಿ ಕ್ರೀಡಾಳುಗಳನ್ನು ಪರಿಗಣಿಸುತ್ತಿದ್ದಾರೆಂಬುದು ವೇದ್ಯವಾಗುತ್ತದೆ.


ಮಕ್ಕಳೊಂದಿಗೆ

ಸಾಮಾಜಿಕ ಅಸಮಾನತೆ, ಅಸ್ಪೃಶ್ಯತೆ, ಬಡತನ, ಆರ್ಥಿಕ ಭದ್ರತೆಯಿಲ್ಲದಿರುವುದು ಸಿದ್ದಿಯುವತಿಯರ ಕ್ರೀಡಾ ಬದುಕು ಮಂಕಾಗುವಂತೆ ಮಾಡಿದೆ. ಇನ್ನೂ ಹಲವಾರು ಪ್ರತಿಭೆಗಳು ಕತ್ತಲೆಯಲ್ಲೇ ಇವೆ.

ಯಾವುದೇ ಶಾಲೆ-ಕಾಲೇಜುಗಳಲ್ಲಿ ಕ್ರೀಡೆಗೆ ಸಮಾನಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಯೋಜನಾಬದ್ಧ ತರಬೇತಿಗಳಿಲ್ಲ, ಕ್ರೀಡಾ ಸಾಮಗ್ರಿಗಳಿಲ್ಲ ತಾಲೂಕು ಕೇಂದ್ರ

ಪುಟ 5 ಕ್ಕೆ

ಕ್ರೀಡಾ ನೀತಿ ತಪ್ಪಿದ್ದು ಎಲ್ಲಿ?

ಪ್ರತೀ ಬಾರಿಯೂ ಓಲಂಪಿಕ್ ಕ್ರೀಡೆಗೆ ಭಾರತದಿಂದ ಹಲವಾರು ಕ್ರೀಡಾಳುಗಳನ್ನು ಕಳಿಸುತ್ತಾರೆ. ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಜನಸಂಖ್ಯೆ ಇರುವ ರಾಷ್ಟ್ರ ಪದಕ ಪಟ್ಟಿಯಲ್ಲಿ ಎಷ್ಟನೇ ಸ್ಥಾನದಲ್ಲಿದೆ ಎಂದು ಎದುರು ನೋಡುತ್ತಿದ್ದರೆ, ಕೇವಲ ಕಂಚಿನ ಪದಕದ ತನಕ ನಮ್ಮ ಖುಷಿಯನ್ನು ಸಹನೆ ಯಿಂದ ಕಾಯ್ದುಕೊಂಡು ಬಂದಿದ್ದೇವಷ್ಟೆ. ಅದರೆ ಭಾರತ ಸರ್ಕಾರಕ್ಕೊಂದು ಯುವಜನ ಕ್ರೀಡಾ ನೀತಿ ಇಲ್ಲ. ಆಳುವವರು ಹೇಳಿದ್ದೇ ಆಯ್ಕೆ ಅವರು ಮಾಡಿದ್ದೇ ಕ್ರೀಡಾ ನೀತಿ. ಈಗಂತೂ ಕ್ರೀಡೆಯು ಕೇಸರೀಕರಣಕ್ಕೊಳಗಾಗುತ್ತಿದೆ. ಪರಿಣಾಮವಾಗಿ ಕ್ರೀಡಾ ಮನೋಭಾವ ಭಾವೈಕ್ಯತೆ ನೆರೆದೇಶಗಳೊಟ್ಟಿಗಿನ ಸೌಹಾರ್ದ ಸಂಬಂಧಗಳೆಲ್ಲ ಹಳಸುತ್ತಿವೆ. ಈಗಿನ ಕ್ರೀಡಾ ನೀತಿ ನಮ್ಮ ಕ್ರೀಡಾ ಮಂತ್ರಿ ಉಮಾಭಾರತಿಯ ಮೂಗಿನ ನೇರಕ್ಕೆ ಮಾತ್ರ ಎನ್ನದೇ ಗತ್ಯಂತರವಿಲ್ಲ. ಭಾರತೀಯ ಕ್ರೀಡಾ ಪ್ರಾಧಿಕಾರ ಹಾಗೂ ಆಯ್ಕೆ ಸಮಿತಿಗಳಲ್ಲಂತೂ ರಾಜಕೀಯ ಪ್ರಭಾವವೇ ಜಾಸ್ತಿ ಎಂದು ನೊಂದ ಕ್ರೀಡಾಪಟುಗಳು ಹೇಳುತ್ತಾರೆ.

PRBDECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor : S.Y.GURUSHANTH